
ಸಂಪುಟ 24 ಸಂಚಿಕೆ 6-7
ಫೆಬ್ರವರಿ 17, 2002 ಬೆಲೆ ರೂ. 4 .00

ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ


ಸಿಪಿಐ(ಎಂ) 17ನೇ ರಾಜ್ಯ ಸಮ್ಮೇಳನದ ಕರೆ

ಜನ ಚಳುವಳಿ ಬಲಗೊಳಿಸಿ



ಪಕ್ಷದ ಸಂಘಟನೆ ಬಲಗೊಳಿಸಿ

ಸಾಮ್ರಾಜ್ಯವಾದ -ವಿಶ್ವ





ಜೇವರ್ಗಿ:

ರೈತರ ಮೇಲೆ ದಬ್ಬಾಳಿಕೆ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 89

ಬಿಜೆಪಿ ಸರಕಾರಗಳ ವಜಾ

ಹಿಂದಿನ ಸಂಚಿಕೆಯಲ್ಲಿ ಸಂಘಪರಿವಾರದಿಂದ ಬಾಬ್ರಿ ಮಸೀದಿ ಧ್ವಂಸ, ಭುಗಿಲೆದ್ದ ಕೋಮುವಾದ, ಸಾವಿರಾರು ಮುಗ್ಧರ ಹತ್ಯೆ, ರಾವ್ ಸರ್ಕಾರದ ಬೇಜವಾಬ್ದಾರಿ ವರ್ತನೆ ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಆರ್‌ಎಸ್‌ಎಸ್ ನಿಷೇಧ, ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ತಾನ, ಹಿಮಾಚಲ ಪ್ರದೇಶ ಸರ್ಕಾರಗಳ ವಜಾ, ಕಲ್ಕತ್ತಾದಲ್ಲಿ 'ಮಹಾರ್‍ಯಾಲಿ', ತ್ರಿಪುರಾದಲ್ಲಿ ಮರಳಿ ಎಡರಂಗ ಅಧಿಕಾರಕ್ಕೆ, ಮಾರ್ಕ್ಸ್‌ವಾದದ ಪ್ರಸ್ತುತತೆ ಬಗ್ಗೆ ವಿಚಾರಸಂಕಿರಣ ಈ ಬಗ್ಗೆ ಓದಿರಿ

ಬಿಜೆಪಿ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ಸರಕಾರವನ್ನು ಒತ್ತಾಯಿಸಲು ನಾವು ಮುಂದಾದೆವು. ಆರ್‌ಎಸ್‌ಎಸ್ ಅನ್ನು ನಿಷೇಧಿಸಲಾಯಿತು. ಕೆಲವು ಬಿಜೆಪಿ ನಾಯಕರನ್ನು ಬಂಧಿಸಲಾಯಿತು. ಇವೆಲ್ಲವೂ ತೀರಾ ವಿಳಂಬದ ಹಾಗೂ ಅರೆ ಮನಸ್ಸಿನ ಕ್ರಮಗಳಾಗಿದ್ದವು. ಈ ದೌರ್ಬಲ್ಯವನ್ನು ಬಿಜೆಪಿ ತನ್ನ ಪ್ರಚಾರದಲ್ಲಿ ಬಳಸಿಕೊಂಡಿತು.


ಬಾಬರಿ ಮಸೀದಿ ನಾಶವನ್ನು ಖಂಡಿಸಿ ಸಿಪಿಐ(ಎಂ), ಜನತಾದಳ, ಸಿಪಿಐ ಮತ್ತು ಇತರ ಪ್ರತಿಪಕ್ಷಗಳು ಒಂದು ಸಂಯುಕ್ತ ಹೇಳಿಕೆ ಹೊರಡಿಸಿದವು. ಒಂದು ವಾರದ ನಂತರ ಸಂಸತ್ತಿನ ಅಧಿವೇಶನ ಆರಂಭವಾಯಿತು.

ಬಿಜೆಪಿಯ ತೀವ್ರ ಪ್ರತಿರೋಧದ ನಡುವೆಯೂ ಮಸೀದಿ ನಾಶ ಖಂಡಿಸುವ ಒಂದು ನಿರ್ಣಯವನ್ನು ಸಂಸತ್ತು ಅಂಗೀಕರಿಸಿತು. ನಿರ್ಣಯವನ್ನು ಸಿಪಿಐ(ಎಂ) ಸಂಸತ್ ಸದಸ್ಯರು ರೂಪಿಸಿದ್ದರು. ಇದಾದ ನಂತರ ಬಿಜೆಪಿ ಡಿಸೆಂಬರ್ 17ರಂದು ಸರಕಾರದ ವಿರುದ್ಧ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಿತು. ಮತದಾನದ ಡಿಸೆಂಬರ್ 21ರಂದು ಜನತಾದಳ ಮತ್ತು ರಾಷ್ಟ್ರೀಯ ರಂಗ ಇತರ ಅಂಗಪಕ್ಷಗಳು ಮತದಾನದಿಂದ ಹೊರಗುಳಿದವು. ಆದರೂ ಮುಲಾಯಂಸಿಂಗ್‌ರ ಸಮಾಜವಾದಿ ಗುಂಪು ಮತ್ತು ಅಜಿತ್ ಸಿಂಗ್‌ರ ಪಕ್ಷ ಅವಿಶ್ವಾಸ ಗೊತ್ತುವಳಿಯ ವಿರುದ್ಧ ಮತ ಚಲಾಯಿಸಿದವು.

ಬಿಜೆಪಿ-ಆರ್‌ಎಸ್‌ಎಸ್ ಕೂಟದ ವಿರುದ್ಧ ಸಾಮೂಹಿಕ ಆಂದೋಲನ ಸಂಘಟಿಸಲು ಮತ್ತು ನಾನಾ ಎಡ-ಜಾತ್ಯಾತೀತ ಪಕ್ಷಗಳ ವೇದಿಕೆ ರಚಿಸಿ ಐಕ್ಯ ಕಾರ್ಯಾಚರಣೆ ರೂಪಿಸಲು ನಾಯಕತ್ವ ವಹಿಸಲು ಡಿಸೆಂಬರ್ 13-14ರಂದು ನಡೆದ ಪಕ್ಷದ ಪಾಲಿಟ್‌ಬ್ಯೂರೋ ಸಭೆ ನಿರ್ಧರಿಸಿತು. 14ರ ಸಂಜೆ ನಾನು ಮತ್ತು ಸುರ್ಜಿತ್ ಪ್ರಧಾನಿಯನ್ನು ಭೇಟಿ ಮಾಡಿದೆವು. ಪ್ರಧಾನಿಯೇ ನಮ್ಮನ್ನು ಆಹ್ವಾನಿಸಿದ್ದರು.

ಡಿಸೆಂಬರ್ 15ರಂದು ಮಧ್ಯಪ್ರದೇಶ, ರಾಜಾಸ್ಥಾನ ಮತ್ತು ಹಿಮಾಚಲಪ್ರದೇಶ ಸರಕಾರಗಳನ್ನು ವಜಾ ಮಾಡಲಾಯಿತು. ಈ ಕ್ರಮವನ್ನು ನಾವು ಬೆಂಬಲಿಸಿದೆವು. ಈ ಮೂರು ರಾಜ್ಯಗಳಲ್ಲಿ ಆಡಳಿತಾರೂಢ ಬಿಜೆಪಿ ತನ್ನ ಮಿತಿಗಳನ್ನು ಮೀರಿ ವರ್ತಿಸುತ್ತಿತ್ತು.

ಉತ್ತರಪ್ರದೇಶ ಮುಖ್ಯಮಂತ್ರಿ ಕಲ್ಯಾಣಸಿಂಗ್ ಡಿಸೆಂಬರ್ ಆರರ ಸಂಜೆಯೇ ರಾಜಿನಾಮೆ ನೀಡಿದ್ದರು. ಹಾಗೂ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತವನ್ನು ಹೇರಲಾಗಿತ್ತು.


ರಾಷ್ಟ್ರೀಯ ಏಕತೆಗಾಗಿ ಮಾನವ ಸರಪಳಿ

ಕಲ್ಕತ್ತದಲ್ಲಿ ಡಿಸೆಂಬರ್ 15ರಂದು ನಾವು 'ಮಹಾ ರ್‍ಯಾಲಿ'ಯನ್ನು ನಡೆಸಿದೆವು. ಬಿಜೆಪಿಯ ಆಟಾಟೋಪಗಳನ್ನು ಹಾಗೂ ಅದರ ಕೋಮುವಾದಿ ಬಣ್ಣವನ್ನು ಜನರು ಈಗ ಅರಿತಿದ್ದರು. ಅದು ಹೀಗೆಯೇ ಮುಂದುವರೆಯಲು ಬಿಟ್ಟರೆ ಇಡೀ ದೇಶವೇ ಛಿದ್ರಗೊಳ್ಳುವುದು ಖಂಡಿತ ಎಂಬುದು ಜನರಿಗೆ ಮನವರಿಕೆಯಾಗಿತ್ತು.

ಮರುವರ್ಷ ಜನವರಿ 7ರಂದು ಕೇಂದ್ರ ಸರಕಾರ ಒಂದು ಆಧ್ಯಾದೇಶದ ಮೂಲಕ ವಿವಾದಿತ ಅಯೋಧ್ಯೆ ಪ್ರದೇಶವನ್ನು ವಶಕ್ಕೆ ತೆಗೆದುಕೊಂಡಿತು. ರಾಷ್ಟ್ರೀಯ ಏಕತೆಗೆ ನಮ್ಮ ಬದ್ಧತೆಯನ್ನು ತೋರಿಸಲು ಗಣರಾಜ್ಯ ದಿನದಂದು ಬೃಹತ್ ಮಾನವ ಸರಪಳಿಯನ್ನು ರಚಿಸಿದೆವು. ಕೈಕೈ ಜೋಡಿಸುವ ಈ ಕಾರ್ಯಕ್ರಮದಲ್ಲಿ ನಾನು ಕೂಡಾ ಭಾಗವಹಿಸಿದೆ. ದಕ್ಷಿಣ ಕಲ್ಕತ್ತದ ಬಲ್ಲಿಗಂಜ್ ಪ್ರದೇಶದಲ್ಲಿ ನಾನು ಮಾನವ ಸರಪಳಿಯಲ್ಲಿ ಪಾಲ್ಗೊಂಡೆನೆಂದು ನೆನಪು. ಫೆಬ್ರವರಿ 21ರಂದು ಬ್ರಿಗೇಡ್ ಪರೇಡ್ ಮೈದಾನದಲ್ಲಿ 11 ರಾಜಕೀಯ ಪಕ್ಷಗಳು ಹಾಗೂ 34 ಸಾಮೂಹಿಕ ಸಂಘಟನೆಗಳು ಭಾಗವಹಿಸಿದ್ದ ಬೃಹತ್ ರ್‍ಯಾಲಿ ನಡೆಯಿತು. ಫೆಬ್ರವರಿ 13ರಂದು ರಾಷ್ಟ್ರಪತಿಗೆ ಸಲ್ಲಿಸಿದ ಮನವಿ ಪತ್ರಕ್ಕೆ ಮೂರು ಕೋಟಿಗೂ ಹೆಚ್ಚು ಜನರು ಸಹಿ ಹಾಕಿದ್ದರು.

ಆಕ್ರಮಣಗಳನ್ನು ನಡೆಸುವಂತೆ ಕೆಲವು ನಾಯಕರು ಕಾರ್ಯಕರ್ತರಿಗೆ ಕುಮ್ಮಕ್ಕು ಕೊಡುತ್ತಿರುವುದನ್ನು ನಾವು ಕೇಂದ್ರ ಸರಕಾರಕ್ಕೆ ವಿವರಿಸಿದೆವು.

ಅನೇಕ ಕಾರುಗಳನ್ನು ಸುಡಲಾಯಿತು. ಕಲ್ಲು ಹೊಡೆಯಲಾಯಿತು. ಐದು ಪೊಲೀಸರಿಗೆ ಗಾಯಗಳಾದವು. ಸ್ವಯಂ ರಕ್ಷಣೆಗಾಗಿ ಪೊಲೀಸರು ಗುಂಡುಹಾರಿಸಿದಾಗ ಕೆಲವು ಜನರು ಸತ್ತರು. ಇದಕ್ಕೆ ಪೂರ್ಣವಾಗಿ ಕಾಂಗ್ರೆಸ್ಸೇ ಹೊಣೆಯಾಯಿತು. ಕಾಂಗ್ರೆಸ್ ನಾಯಕರ ಮುಖವಾಡ ಕಿತ್ತೆಗೆಯಲಿಕ್ಕಾಗಿ ನ್ಯಾಯಾಂಗ ತನಿಖೆಗೆ ನಾನು ಆಜ್ಞಾಪಿಸಿದೆ. ಕಾಂಗ್ರೆಸ್ಸಿನ ಬೇಜವಾಬ್ದಾರಿತನದಿಂದಾಗಿ ಹಲವು ಮುಗ್ಧರು ಪ್ರಾಣಕಳೆದುಕೊಂಡರು. ಆಗ ಇಷ್ಟೆಲ್ಲ ಆದರೂ ಕಾಂಗ್ರೆಸಿಗರಿಗೆ ಬುದ್ಧಿಯೇ ಬರಲಿಲ್ಲ. ಅದು ಬಂದ್‌ಗೆ ಕರೆ ನೀಡಿದರೂ ಅದು ಯಶಸ್ವಿಯಾಗಲಿಲ್ಲ.

ಮುಂಬಯಿ ಸರಣಿ ಬಾಂಬ್ ಸ್ಫೋಟ ದೇಶದ ಮೇಲೆರಗಿತು. ಮಹಾರಾಷ್ಟ್ರದ ಶರದ್ ಪವಾರ್ ನೇತೃತ್ವದ ಕಾಂಗ್ರೆಸ್ ಸರಕಾರ ಪರಿಸ್ಥಿಯನ್ನು ನಿಭಾಯಿಸಲು ವಿಫಲವಾಯಿತು. 1993 ಮಾರ್ಚ್ 12 ರಂದು 13 ಸ್ಥಳಗಳಲ್ಲಿ ಏಕಕಾಲದಲ್ಲಿ ಸ್ಫೋಟಗಳಾದವು. 300ಕ್ಕೂ ಹೆಚ್ಚು ಜನರು ಮೃತರಾದರು. ಇದು ಅನಾಗರಿಕ ಬರ್ಬರ ಜನರ ಅಂತಿಮ ಕೃತ್ಯವಾಗಿತ್ತು. ಇದರ ಹಿಂದೆ ಮಾಫಿಯಾ ದೊರೆಗಳ ಕೈವಾಡ ಸಂಪರ್ಕ ಇದ್ದದು ಆನಂತರ ತಿಳಿಯಿತು. ಈ ಬಹುತೇಕ ಸೂತ್ರಧಾರರು ನೀಡಿದ್ದರೆಂದು ಹೇಳಲಾಗಿದೆ. ಮುಂಬಯಿ ಘಟನೆಯ ನಾಲ್ಕೇ ದಿನಗಳಲ್ಲಿ ಅಂದರೆ ಮಾರ್ಚ್ 16 ರಂದು ಕಲ್ಕತ್ತದ ಟಾಬಾ ಬಜಾರ್‌ರಸ್ತೆಯ ಮನೆಯೊಂದರಲ್ಲಿ ಒಂದು ಪ್ರಬಲ ಬಾಂಬ್ ಸ್ಫೋಟಿಸಿ 50ಕ್ಕೂ ಹೆಚ್ಚು ಮಂದಿ ಮೃತಪಟ್ಟರು. ಹಿಂದೆಂದೂ ಕಲ್ಕತ್ತದಲ್ಲಿ ಇಂಥ ಘಟನೆ ನಡೆದಿರಲಿಲ್ಲ. ರಾವ್ ಸರಕಾರ ವಿವಿಧ ಹಗರಣಗಳಲ್ಲಿ ಸಿಕ್ಕಿ ನಲುಗುತ್ತಿದ್ದಾಗ ಪತ್ರಿಕೆಗಳ ವಿಭಾಗ ನಮ್ಮಮೇಲೆ ದಾಳಿ ಆರಂಭಿಸಿತು. ಹಲವು ಆರೋಪಗಳನ್ನು ಹೊರಿಸಿತು. ಅನ್ಯಾಯವೂ ಇದುವರೆಗೆ ಸಾಬೀತಾಗಿಲ್ಲ. ಆಡಳಿತ ಕಾರ್ಯದಲ್ಲಿ ಯಾವುದೇ ದೋಷ ನುಸುಳಲು ನಾವು ಅವಕಾಶ ಕೊಡಲಿಲ್ಲ. ಸ್ಫೋಟಗಳಲ್ಲಿ ಒಳಗೊಂಡ ಎಲ್ಲ ಕ್ರಿಮಿನಲ್‌ಗಳು ಮತ್ತು ಡಾಸ್‌ಗಳು ಟಾಡಾ ಅನ್ವಯ ಬಂದಿತರಾಗಿದ್ದಾರೆ.

ತ್ರಿಪುರಾದ ಆರನೇ ವಿಧಾನಸಭೆ ಚುನಾವಣೆಗಳಲ್ಲಿ ಎಡರಂಗ ಮರಳಿತು. ಕಾಂಗ್ರೆಸ್ ದುರಾಡಳಿತದಿಂದ ಜನರು ಬೇಸತ್ತಿದ್ದರು. ಏಪ್ರಿಲ್ 10 ರಂದು ದಶರಥ ದೇವ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಅಗರ್ತಲದಲ್ಲಿ ನಡೆದ ವಿಜಯೋತ್ಸವ ರ್‍ಯಾಲಿಯಲ್ಲಿ ನಾನು ಮಾತನಾಡಿದೆ. ಆಗ ಧಾರಾಕಾರ ಮಳೆ ಸುರಿಯುತ್ತಿದ್ದರೂ ಯಾರೊಬ್ಬರೂ ಸಭೆಯಿಂದ ಕದಲಲಿಲ್ಲ. ಕಮ್ಯೂನಿಸ್ಟ್ ಮನೋಬಲದ ವಿಚಾರದಲ್ಲಿ ನಮ್ಮ ತ್ರಿಪುರಾ ಸಂಗಾತಿಗಳು ಸದಾ ಮಾದರಿ ಹಾಕಿಕೊಟ್ಟಿದ್ದಾರೆ.

ಕಲ್ಕತ್ತ ವಿಚಾರ ಸಂಕಿರಣ

ಮಾರ್ಕ್ಸ್‌ವಾದದ ಪ್ರಸ್ತುತತೆ ಬಗ್ಗೆ ಕಲ್ಕತ್ತದಲ್ಲಿ ನಡೆದ ವಿಚಾರ ಸಂಕಿರಣದ ಬಗ್ಗೆ ಪ್ರಸ್ತಾಪಿಸಬೇಕಿಲ್ಲ. ಯಾಕೆಂದರೆ ಈ ಸಮ್ಮೇಳನದ ಬಗ್ಗೆ ಬಂಡವಾಳಶಾಹಿ ಪತ್ರಿಕೆಗಳು ಸಾಕಷ್ಟು ಕಚಡಾ ಬರೆದಿವೆ. ಬದಲಾಗುತ್ತಿರುವ ಸನ್ನಿವೇಶದಲ್ಲಿ ಜಗತ್ತಿನ ನಾನಾ ಕಮ್ಯುನಿಸ್ಟ್ ಪಕ್ಷಗಳ ನಡುವೆ ವಿಚಾರ ವಿನಿಮಯ ನಡೆಯಬೇಕು ಎಂದು ಕೇಂದ್ರ ಸಮಿತಿಯ ಸಲಹೆಯ ಮೇರೆಗೆ ಈ ಸಮ್ಮೇಳನ ನಡೆಯಿತು. ಯಾವುದೇ ಸಂಯುಕ್ತ ಪ್ರಕಟಣೆ ನೀಡುವುದು ಅಥವಾ ವೇದಿಕೆಯನ್ನು ರಚಿಸುವುದು ಪಕ್ಷದ ಉದ್ದೇಶವಾಗಿರಲಿಲ್ಲ.

1993ಮೇ 5 ರಿಂದ 7ರ ವರೆಗೆ ನಡೆದ ಸಮ್ಮೇಳನದಲ್ಲಿ 20 ಕಮ್ಯುನಿಸ್ಟ್ ಪಕ್ಷಗಳು ಭಾಗವಹಿಸಿದವು. ಇಂದ್ರಜಿತ್ ಗುಪ್ತ ಎಂ. ಫರೂಕಿ ಮತ್ತು ಎ.ಬಿ.ಬರ್ಧನ್ ಸಿಪಿಐ ಅನ್ನು ಪ್ರತಿನಿಧಿಸಿದ್ದರು. ಸಿಪಿಐ(ಎಂ) ಪರವಾಗಿ ಸೀತಾರಾಮ ಯೆಚೂರಿ, ಸುರ್ಜಿತ್, ಪಿ. ರಾಮಚಂದ್ರನ್ ಮತ್ತು ನಾನು ಭಾಗವಹಿಸಿದೆವು. ಚೀನಾ ಕಮ್ಯುನಿಸ್ಟ್ ಪಕ್ಷ ಶುಭಾಶಯಗಳನ್ನು ಕಳಿಸಿತ್ತು. ರಷ್ಯನ್ ಕಮ್ಯುನಿಸ್ಟ್ ವರ್ಕರ್ಸ್ ಪಕ್ಷದಿಂದಲೂ ಪ್ರಜಾಸತ್ತಾತ್ಮಕ ಕೊರಿಯಾ ಅಧ್ಯಕ್ಷರಿಂದಲೂ ಸಂದೇಶಗಳು ಬಂದವು.

ಮುಖ್ಯ ಗೋಷ್ಠಿ ಸಾರ್ವಜನಿಕರಿಗೆ ಮುಕ್ತವಾಗಿರಲಿಲ್ಲ. ಮಾರ್ಕ್ಸ್‌ವಾದದ ಪ್ರಸ್ತುತತೆ ವಿಚಾರದಲ್ಲಿ ಕಮ್ಯುನಿಸ್ಟ್ ಪಕ್ಷಗಳ ಭಿನ್ನಮತ ಇರಲಿಲ್ಲ. ಚರ್ಚೆ ತುಂಬಾ ಅಗತ್ಯವಾಗಿತ್ತು. ಮೂಲಸಿದ್ಧಾಂತ ಮತ್ತು ಮಾರ್ಕ್ಸ್‌ವಾದದ ವಿಜ್ಞಾನವೇ ಸೋವಿಯತ್ ಹಿನ್ನಡೆಗೆ ಹೊಣೆಯೆಂದು ಹೇಳಲಿಕ್ಕಾಗದು ಎಂಬ ಒಮ್ಮತದ ನಿರ್ಧಾರಕ್ಕೆ ನಾವು ಬಂದೆವು. ಅದರ ಅನುಷ್ಠಾನದಲ್ಲಿ ತಪ್ಪು ಅಡಗಿತ್ತು ಅಷ್ಟೆ. ಸಾಮ್ರಾಜ್ಯಶಾಹಿಯನ್ನು ನಿರ್ಮೂಲವಾಡುವ ಬಗ್ಗೆ ಅಭಿಪ್ರಾಯ ವಿನಿಮಯವನ್ನು ಮುಂದುವರಿಸಲೂ ನಾವು ಒಪ್ಪಿದೆವು. ನೇತಾಜಿ ಒಳಾಂಗಣ ಕ್ರೀಡಾಂಗಣದಲ್ಲಿ ಜನರಿಂದ ಕಿಕ್ಕಿರಿದು ತುಂಬಿದ್ದ ಸಮಾರಂಭದಲ್ಲಿ ಪ್ರತಿನಿಧಿಗಳಿಗೆ ಹೃದಯಸ್ಪರ್ಶಿ ವಿದಾಯ ನೀಡಲಾಯಿತು.

"ನಾನು ಮಾರ್ಕ್ಸ್‌ರ ದೇಶಕ್ಕೆ ಸೇರಿದವನು. ಆ ಬಗ್ಗೆ ನಮಗೆ ಹೆಮ್ಮೆಯಿದೆ. ಆದರೆ ಮಾರ್ಕ್ಸ್‌ರನ್ನು ಈ ರೀತಿಯಾಗಿ ಗೌರವಿಸುವುದು ಕಲ್ಕತ್ತದಲ್ಲಿ ಇಷ್ಟೊಂದು ಮಂದಿಯಿದ್ದಾರೆ ಎನ್ನುವುದು ನಮಗೆ ಗೊತ್ತಿರಲಿಲ್ಲ. ಇದೊಂದು ಭಿನ್ನ ಹಾಗೂ ಶ್ರೀಮಂತ ಅನುಭವ" ಎಂದು ಜರ್ಮನಿಯ ಪ್ರತಿನಿಧಿ ಹೇಳಿದ್ದು ನನಗಿನ್ನು ನೆನಪಿದೆ.

ನಾಲ್ಕನೇ ಪಂಚಾಯಿತಿ ಚುನಾವಣೆಗಳು

1993 ಮೇ 30 ರಂದು ಬಂಗಾಳದಲ್ಲಿ ನಾಲ್ಕನೇ ಪಂಚಾಯತಿ ಚುನಾವಣೆಗಳು ನಡೆದವು. ಅಯೋಧ್ಯ ದುರಂತದ ನಂತರ ಮೊದಲ ದೊಡ್ಡ ಚುನಾವಣೆ ಇದಾಗಿತ್ತು. 3.3 ಕೋಟಿ ಮತದಾರರು ತಮ್ಮಹಕ್ಕು ಚಲಾಯಿಸಬೇಕಿತ್ತು. 61,011 ಗ್ರಾಮ ಪಂಚಾಯತಿಗಳು, 9455 ಪಂಚಾಯತಿ ಸಮಿತಿಗಳು ಮತ್ತು 656 ಜಿಲ್ಲಾ ಪರಿಷತ್‌ಗಳ 71,122 ಸ್ಥಾನಗಳಿಗೆ ಚುನಾವಣೆ ನಡೆದಿತ್ತು.

(ಮುಂದುವರಿಯುವುದು)

ಎನ್.ಕೆ.ಕುರಿತ ವಿಶೇಷ ಪುರವಣಿ

ಸಂಗಾತಿ ಎನ್.ಕೆ.ಯವರಿಗೆ ಐಕ್ಯರಂಗ ವಿಶಿಷ್ಟವಾದ ರೀತಿಯಲ್ಲಿ ತನ್ನ ಶ್ರದ್ಧಾಂಜಲಿ ಸಲ್ಲಿಸಲು ನಿರ್ಧರಿಸಿದೆ. ಅವರ ಬದುಕು, ಚಳುವಳಿಗೆ ಕೊಡುಗೆ, ನೆನಪುಗಳು ಒಳಗೊಂಡ ಒಂದು ವಿಶೇಷ ಪುರವಣಿಯನ್ನು ಶೀಘ್ರದಲ್ಲಿ ಪ್ರಕಟಿಸಲಾಗುವುದು. ನಿಮ್ಮಲ್ಲಿರುವ ಅಮೂಲ್ಯ ಫೋಟೋಗಳು, ಅವರು ಹೇಳಿದ ವಿಶೇಷ ಅನುಭವಗಳು, ಒಡನಾಟದ ನೆನಪುಗಳನ್ನು

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್ —

ವಿದ್ಯುತ್ ಸಮಸ್ಯೆಗಳಿಗೆ ಐಕ್ಯ ಚಳುವಳಿ ಅಗತ್ಯ

ಜನವರಿ 23 ರಿಂದ ಆರಂಭಗೊಂಡಿರುವ ರೈತರ ಸತ್ಯಾಗ್ರಹ ನಡೆದೇ ಇದೆ. ಪಂಪ್‌ಸೆಟ್‌ಗಳಿಗೆ ಕನಿಷ್ಟ 18 ತಾಸು ಪೂರ್ಣ ಪ್ರಮಾಣದ ವಿದ್ಯುತ್ ಪೂರೈಸಲೇಬೇಕೆಂದು ಬೆಂಗಳೂರಿನ ಕಾವೇರಿ ಭವನದ ಕರ್ನಾಟಕ ವಿದ್ಯುತ್ ಪ್ರಸರಣ ಕಛೇರಿ ಎದುರು ನಂಜುಂಡಸ್ವಾಮಿಯವರ ನೇತೃತ್ವದ ಕ.ರಾ.ರೈತಸಂಘ ಚಳುವಳಿ ಆರಂಭಿಸಿದೆ. ಸರಿಸುಮಾರು 2000 ದಷ್ಟಿದ್ದ ಜನರ ಪ್ರತಿಭಟನೆಯಿಂದ ಆರಂಭಗೊಂಡು ಈಗ ಪ್ರತಿನಿತ್ಯ ಕನಿಷ್ಟ 100 ಜನರ ಧರಣಿ ನಡೆದಿದೆ. ಈ ನಡುವೆ ಜನವರಿ 30 ರಂದು (ಗಾಂಧಿ ಹುತಾತ್ಮ ದಿನ) ಮುಖ್ಯಮಂತ್ರಿಗಳ ಮನೆ ಮುಂದೆಯೂ ಪ್ರತಿಭಟನೆ ನಡೆದಿದೆ. ಅಂದು ಪುಟ್ಟಣ್ಣನವರ ರೈತ ಸಂಘವೂ ಮೈಸೂರಿನಲ್ಲಿ ಹಲವು ವಿಷಯಗಳಿಗೆ ಮತ ಪ್ರದರ್ಶನ ನಡೆಸಿತು.

ವಿಧಾನಸಭೆಯ ಕಲಾಪಗಳು ಆರಂಭವಾಗುವ ದಿನದಂದೇ ಗಮನ ಸೆಳೆಯಲೆಂದು ಈ ಸತ್ಯಾಗ್ರಹ ಶುರುವಾದರೂ ಕಲಾಪಗಳುದ್ದಕ್ಕೂ ಎಲ್ಲೂ ಇಂತಹ ಸಮಸ್ಯೆ ಬಗ್ಗೆ ಚರ್ಚಿತವಾಗಲೇ ಇಲ್ಲ. ಈ ನಡುವೆ ರೈತ ನಾಯಕರೊಂದಿಗೆ ಮುಖ್ಯಮಂತ್ರಿಗಳು ಚರ್ಚಿಸಿದರಂತೆ. ಅದರಂತೆ 6 ತಾಸಿನಿಂದ 8 ತಾಸು ವಿದ್ಯುತ್ ಪೂರೈಸುವುದಾಗಿ ಹೇಳಿದರಂತೆ. ಕನಿಷ್ಟ 16 ತಾಸಾದರೂ ವಿದ್ಯುತ್ ಸರಬರಾಜು ಆಗಲೇಬೇಕೆನ್ನುತ್ತಿರುವ ಪ್ರೊಫೆಸರ್ ಸ್ವಾಮಿಯವರು ನಗರದ ವಿದ್ಯುತ್ ಬಳಕೆಯನ್ನು ಕಡಿತಗೊಳಿಸಿ ಗ್ರಾಮಾಂತರಕ್ಕೆ ನೀಡಿ ಎಂದು ಸೂಚಿಸುತ್ತಾರೆ. ಕನಿಷ್ಟ ಸರ್ಕಾರದ 8 ತಾಸುಗಳ ಭರವಸೆಯನ್ನು ಬರಹದಲ್ಲಿ ನೀಡಲಿ. ಹೀಗಾದರೂ ಅದು ವಾಸ್ತವದಲ್ಲಿ 8 ತಾಸು ಆಗದು ಎನ್ನುತ್ತಾರೆ. ಒಂದು ವೇಳೆ 8 ತಾಸು ಪೂರೈಸಲಾಗದಿದ್ದರೆ ಉಳಿದ ಅವಧಿಯನ್ನು ಸೇರಿಸಿ ವಿದ್ಯುತ್ ಪೂರೈಸಬೇಕು ಎಂದು ಸುತ್ತೋಲೆ ಕಳಿಸಿರುವುದಾಗಿ ಕೆಪಿಟಿಸಿಎಲ್ ಅಧಿಕಾರಿಗಳು ಹೇಳುತ್ತಾರೆ. ಇದು ಕನಕಪುರದ ಚುನಾವಣೆಯ ಭರವಸೆ ಎನ್ನಲು ಕಾರಣವಿಲ್ಲ.

ಬೇಸಿಗೆ ಬಿಸಿಯೇರುತ್ತಿದೆ. ನೀರು ಇಲ್ಲದೇ ಬೆಳೆ ಒಣಗುವ ಧಾರುಣ ಸ್ಥಿತಿ ಹತ್ತಿರವಾಗುತ್ತಿದೆ. ರೈತರು ಆಫೀಸಿನ ಕಾಂಪೌಂಡಲ್ಲೇ ಸ್ನಾನ, ಅಡಿಗೆ ಮಾಡಿ, ಚಳುವಳಿ ನಡೆಸುತ್ತಿದ್ದಾರೆ. ಆದರೆ ಸರ್ಕಾರದ ನಿರ್ಧಾರವನ್ನು ಕದಲಿಸುವಷ್ಟು, ಬದಲಾಯಿಸುವಷ್ಟು ಶಕ್ತಿ ಇದರಿಂದಲೇ ಸಾಲದು.


ಹೀಗೆ ಬಿಡಿಬಿಡಿಯಾಗಿ ನಡೆಯುತ್ತಿರುವ ಈ ಚಳುವಳಿಗಳು ಒಂದಾಗಿ ಪ್ರಬಲ ಐಕ್ಯ ಹೋರಾಟ ನಡೆಸಬೇಕಿದೆ. ಈಗಲಾದರೂ ಪ್ರೊ.ನಂಜುಂಡಸ್ವಾಮಿಯವರು ಸಹ ಇದರತ್ತ ಗಮನ ಹರಿಸಬೇಕು. ಇಲ್ಲವಾದರೇ ಬರಿ ಭರವಸೆಯಲ್ಲೇ ಮಾತನಾಡುವ ಸರ್ಕಾರ್ರರವನ್ನು ನೆಚ್ಚಲಾದೀತೆ?

ವಿದ್ಯುತ್‌ನ ಒಟ್ಟು ಪ್ರಶ್ನೆಗಳ ವಿರುದ್ಧ ವಿಶಾಲವಾದ ಚಳುವಳಿ ರೂಪಿಸುವ ದಿಶೆಯಲ್ಲಿ ಇತ್ತೀಚೆಗೆ ಬೆಂಗಳೂರಿನಲ್ಲಿ ಕೆಪಿಟಿಸಿಎಲ್ ನ ನೌಕರರು ಮತ್ತು ಇಂಜಿನಿಯರುಗಳ ಸಂಘ ಮತ್ತು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕ.ಪ್ರಾಂ. ಕೃಷಿಕೂಲಿಕಾರರ ಸಂಘದ ಪದಾಧಿಕಾರಿಗಳೊಂದಿಗೆ ಅಭಿಪ್ರಾಯ ವಿನಿಮಯ ಮಾಡಲಾಗಿರುವುದು ಸ್ವಾಗತಾರ್ಹವಾದ ಹೆಜ್ಜೆ. ಈ ದಿಶೆಯಲ್ಲಿ ನಿರ್ದಿಷ್ಟ ಕಾರ್ಯಾಚರಣೆಗೆ ಆದಷ್ಟು ಬೇಗ ಇಳಿಯಬೇಕಿದೆ.

ಖಾಸಗೀಕರಣಕ್ಕೆ ಪುನಃ ಸಿದ್ಧತೆ

ವಿದ್ಯುತ್ ದರಗಳ ಹೆಚ್ಚಳದ ಬಗ್ಗೆ ಕೋರಿದ್ದ ಕೆಪಿಟಿಸಿಎಲ್ ನ ಪ್ರಸ್ತಾಪವನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ತಳ್ಳಿಹಾಕಿದೆ! ಸಂಸ್ಥೆಯು ಪ್ರತಿವರ್ಷ 2100 ಕೋಟಿ ರೂ.ಗಳ ಖೋತಾ ಅನುಭವಿಸುತ್ತಿದ್ದು ಅದನ್ನು ತುಂಬುವ ಸಲುವಾಗಿ ಸರಾಸರಿ ಶೇ 23.5 ರಷ್ಟು ದರಗಳು ಹೆಚ್ಚಳಕ್ಕೆ ಅನುಮತಿ ನೀಡಬೇಕೆಂದು ಕೇಳಲಾಗಿತ್ತು. ಕೆಇಆರ್‌ಸಿ ಇದಕ್ಕೆ ಆಕ್ಷೇಪಣೆ ಎತ್ತಿದೆ. ಅದರ ವಾದದಂತೆ ಈ ದರಗಳ ಹೆಚ್ಚಳದಿಂದ ಸಂಗ್ರಹಿಸಬಹುದಾದದ್ದು ಕೇವಲ 1000 ಕೋಟಿ. ಹಾಗಾದರೆ ಉಳಿದ ಮೊತ್ತ ಸಂಗ್ರಹ ಹೇಗೆ ಎಂಬುದು! ಅಂದರೆ ಈಗಿನ ಏರಿಕೆ ಎರಡರಷ್ಟಾಗ ಬೇಕು ಎಂದು ಅರ್ಥವೇ? ಉಳಿದ ಮೊತ್ತವನ್ನು ಸರ್ಕಾರ ಸಬ್ಸಿಡಿ ಮೂಲಕ ನೀಡುವುದೇ ಎಂದೂ ಪ್ರಮಾಣ ಪತ್ರ ನೀಡಲು ಸ್ಪಷ್ಟನೆ ಕೇಳಿದೆ.

ಕೆಪಿಟಿಸಿಎಲ್ ಮತ್ತು ಕೆಇಆರ್‌ಸಿಯ ನಡುವಿನ ಈ ಚರ್ಚೆ-ಅಹವಾಲು ಕೇಳಿದ ವಿಚಾರಣೆ-ತೀರ್ಪು ಜನರ ಕಣ್ಣಿಗೆ ಮಣ್ಣೆರೆಚುವ ಒಂದು ರಂಗಿನ ನಾಟಕ ಎಂದು ಈ ಹಿಂದೆಯೇ ವಿವರಿಸಿದ್ದೇವೆ. ಈ ವಿದ್ಯುತ್ ಆಯೋಗವು ಕೆಪಿಟಿಸಿಎಲ್ ಗೆ ದಕ್ಷತೆ, ಶಿಸ್ತು ಇಲ್ಲವೆಂದೂ, ವಿದ್ಯುತ್ ಸೋರಿಕೆ, ಹಣ ಸಂಗ್ರಹದ ಲೋಪಗಳನ್ನು ಸರಿಪಡಿಸಿಕೊಳ್ಳಬೇಕೆಂದು ತಾಕೀತೇನೋ ಮಾಡಿದೆ. ಆದರೆ ಅವರ ಮನಸ್ಸಿನಲ್ಲಿರುವುದು ಬೇರೆಯೇ ಆಗಿದೆ. ವಿದ್ಯುತ್‌ನ ವಿತರಣೆಯನ್ನು ಖಾಸಗೀಕರಿಸುವ ನಿಟ್ಟಿನಲ್ಲಿ ಸರ್ಕಾರ ಈಗಾಗಲೇ ತೀರ್ಮಾನಿಸಿದ್ದು, ಅದನ್ನು ನಾಲ್ಕು ವಲಯಗಳಾಗಿ ವಿಭಜಿಸಲು ಸಂಪುಟ ಸಭೆಯಲ್ಲಿ ನಿರ್ಧರಿಸಿಯಾಗಿದೆ. ಅಂದರೆ ಖಾಸಗಿ ಕಂಪನಿಗಳು ವಿದ್ಯುತ್ ವಿತರಣೆಯನ್ನು ಆಕ್ರಮಿಸಿಕೊಳ್ಳುವ ಮೊದಲು ಎಲ್ಲವೂ ಸಿದ್ಧವಾಗಿರಬೇಕು. ಹಾಗೇ ದರಗಳು ಸಹ ಅವರು ಬಯಸುವಷ್ಟು ಮಟ್ಟಕ್ಕೆ. ಇಂತಹ ವ್ಯವಸ್ಥೆ ಸಮರ್ಥವಾಗಿ ಕಲ್ಪಿಸಿಕೊಡಲು ಹೊಸ ಪರಿಣಾಮಕಾರಿ ಮಾರ್ಗ(?) ಅನುಸರಿಸಲು ಬೇಕಾದ ಕ್ರಮಗಳನ್ನು ಕೆಇಆರ್‌ಸಿ ತರಬೇಕೆಂದು ಬಯಸುತ್ತಿದೆ ಎಂಬುದು ಸ್ಪಷ್ಟವಾಗಿ ಗೋಚರವಾಗುವ ಸಂಗತಿ. ಆದ್ದರಿಂದ ಗ್ರಾಹಕರು ಕೆಇಆರ್‌ಸಿ ಯ ಹೇಳಿಕೆಯಿಂದ ನಿಟ್ಟುಸಿರು ಬಿಡುವ ಬದಲು ಹೆಚ್ಚಿನ ಹೊಣೆ ಹೊರಲು ಸಿದ್ಧವಾಗಬೇಕಾಗುತ್ತದೆ.



ಜನ ಭಾಷೆ - ಬದುಕು ಬಲಿ!

ಪ್ರಾಥಮಿಕ ಶಾಲೆಗಳಿಗೆ ಪ್ರವೇಶದ ಒತ್ತಡ ತಡೆಯಲೆಂದೇ 300 ಹೊಸ ಶಾಲೆಗಳಿಗೆ ಅನುಮತಿ ನೀಡಲಾಗಿದೆಯೆಂದು ಕೃಷ್ಣರವರ ಸಂಪುಟ ಪ್ರಕಟಿಸಿದೆ. ಈ ಶಾಲೆಗಳೆಲ್ಲಾ ಆಂಗ್ಲ ಮಾಧ್ಯಮದವುಗಳು. ಅದರಲ್ಲಿಯೂ 150 ಬೆಂಗಳೂರಿನಲ್ಲಿ ಇರುವಂಥಹವು. ಇವೆಲ್ಲಾ ಖಾಸಗಿ ಸಂಸ್ಥೆಗಳು.

ಕನ್ನಡ ಮತ್ತು ಮಾತೃಭಾಷೆಯ ಬೆಳವಣಿಗೆ, ಅವುಗಳ ರಕ್ಷಣೆಯ ಬಗ್ಗೆ ಡಂಗೂರ ಹೊಡೆಯುತ್ತಿದ್ದ ಸರ್ಕಾರವೇ ಈಗ ಆಂಗ್ಲ ಮಾಧ್ಯಮದ ಶಾಲೆಗಳಿಗೆ ಮುಕ್ತ ಅನುಮತಿ ನೀಡಿ ತನ್ನ ಜನವಿರೋಧಿ ಸ್ವರೂಪದ ನಿಲುವನ್ನು ಹೊರಗೆಡಹಿದೆ. ಇತ್ತಿಚಿಗೆ ರಾಷ್ಟ್ರೀಯ ವಿದ್ಯಾಲಯದಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು ಇಂಗ್ಲೀಷ್‌ಗೆ ಕನ್ನಡದಂತೆ ಸಮಾನ ಸ್ಥಾನ ಕಲ್ಪಿಸುವುದಾಗಿ ಪ್ರಕಟಿಸಿದ್ದರು.

ಈ ಮೂಲಕ ಕೃಷ್ಣರ ಸರ್ಕಾರ ಜಾಗತೀಕರಣದ ಆರಾಧಕನೆಂದೂ, ಜನಭಾಷೆ-ಬದುಕನ್ನು ಬಲಿ ತೆಗೆದುಕೊಳ್ಳಲು ಹೇಸುವುದಿಲ್ಲವೆಂದು ಸಾರಿದ್ದಾರೆ.

ಸರ್ಕಾರದ ಈ ನಿರ್ಧಾರ ಮಾತೃಭಾಷೆಯ ಬೆಳವಣಿಗೆಯ ಬಗೆಗಿನ ಬದ್ದತೆಗೆ ದ್ರೋಹ ಬಗೆದಿದೆ. ಹಿಂದೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಪ್ರೊ. ಚಂಪಾ ಹಾಗೂ ಈಗಿನ ಅಧ್ಯಕ್ಷರಾದ ಬರಗೂರವರ ವರದಿಯನ್ನು ಅಂಗೀಕರಿಸಿರುವುದಾಗಿ ಹೇಳಿತ್ತು. 5 ನೇ ತರಗತಿಯವರೆಗೆ ಕನ್ನಡದಲ್ಲೇ ಶಿಕ್ಷಣ ಕಲಿಯುವುದು (ಮಾತೃಭಾಷೆ) ಕಡ್ಡಾಯವೆಂದು ಒಪ್ಪಲಾಗಿತ್ತು. ಈಗ ಅದನ್ನು ಗಾಳಿಗೆ ತೂರಲಾಗಿದೆ. 1983 ಕರ್ನಾಟಕ ಶಿಕ್ಷಣ ಕಾಯ್ದೆಯೂ ಕೂಡ ಪ್ರಾಥಮಿಕ ಶಿಕ್ಷಣವನ್ನು ಆಂಗ್ಲ ಮಾಧ್ಯಮದಲ್ಲಿ ನೀಡುವುದನ್ನು ತಿರಸ್ಕರಿಸಿದೆ. ಇಂಗ್ಲೀಷ್ ಶಾಲೆಗಳನ್ನು ಅನಧಿಕೃತವೆಂದು ಘೋಷಿಸಿದೆ. ಅಲ್ಲದೇ ಕೋರ್ಟ್‌ನ ತೀರ್ಪೊಂದರಲ್ಲಿ ಪ್ರಾಥಮಿಕ ಶಿಕ್ಷಣ ಮಾಧ್ಯಮವೆಂದು ಒಂದು ಭಾಷೆಯನ್ನು ನಿಗದಿಪಡಿಸಬೇಕಾದರೆ ಆ ಪ್ರದೇಶದಲ್ಲಿ ಆ ಭಾಷೆಯನ್ನು ಮಾತೃಭಾಷೆ ಯಾಗುಳ್ಳ ಜನರ ಸಂಖ್ಯೆ ಬಹುಮತವಾಗಿರಬೇಕು ಎಂದಿದೆ. ಅಂದರೆ ಇಲ್ಲಿ ಇಂಗ್ಲೀಷ್‌ರ ಸಂಖ್ಯೆ ಹೆಚ್ಚಿದೆಯೇ?

ಪ್ರತಿಯೊಬ್ಬರಿಗೂ ಭಾಷೆ ಕಲಿಕೆಯು ಐಚ್ಛಿಕ ನಿಜ. ಆದರೆ ಉದ್ಯೋಗಗಳ ಕಡಿತ, ಅಲೆದಾಟದ ಹಿನ್ನೆಲೆಯಲ್ಲಿ ಇಂಗ್ಲೀಷ್ ಮಾಧ್ಯಮದತ್ತ ಒಲವು ಬೆಳೆಯುತ್ತಿದೆಯಾದರೂ ಅದನ್ನು ಐಚ್ಛಿಕವಾಗಿ ಪ್ರಾಥಮಿಕ ಶಿಕ್ಷಣ 4ನೇ ತರಗತಿ ನಂತರ ಕಲಿಸಬಹುದು. ಆದರೆ ಸರ್ಕಾರದ ಈಗಿನ ನಿರ್ಧಾರ ಪೂರ್ಣಪ್ರಮಾಣದಲ್ಲಿ ಖಾಸಗಿ ಸಂಸ್ಥೆಗಳ ಶಿಕ್ಷಣದ ದಂಧೆಗೆ ಮುಕ್ತ ರಹದಾರಿ ಕಲ್ಪಿಸಿದೆ. ಜನ ಸಾಮಾನ್ಯರನ್ನು ಸುಲಿಗೆಗೆ ದೂಡಲಿದೆ. ಜನಭಾಷೆ, ಸಂಸ್ಕೃತಿ, ಬದುಕಿನ ಮೇಲಿನ ಈ ಆಕ್ರಮಣ ಖಂಡನೀಯ. ಸರ್ಕಾರ ಕೂಡಲೇ ತನ್ನ ನಿರ್ಧಾರವನ್ನು ಹಿಂತೆಗೆದುಕೊಳ್ಳಬೇಕು.

ಕರೀಂ ಲಾಲಾನ ನಕಲಿ ಛಾಪಾ ಕಾಗದದ ಹಗರಣ

ಇತ್ತೀಚಿಗಿನ ವಿಧಾನಸಭೆಯ ಅಧಿವೇಶನದಲ್ಲೂ ನಂತರ ಸಾರ್ವಜನಿಕವಾಗಿಯೂ ಭಾರಿ ಅಬ್ಬರದ ಪ್ರಚಾರ ಗಿಟ್ಟಿಸಿದ್ದು ಕರಿಂಲಾಲಾನ ನಕಲಿ ಛಾಪಾ ಕಾಗದದ ಹಗರಣ. ರಾಜ್ಯದಲ್ಲಿ ಬೇರೆ ಯಾವುದೇ ಪ್ರಶ್ನೆಗಳಿಲ್ಲ ಎಂಬಂತೆ ಇದೊಂದೇ ವಿಷಯದಲ್ಲಿ ಕಲಾಪಗಳು ಜಗ್ಗಾಡಿದ್ದು ಗಮನಾರ್ಹ ವಿಷಯವೇ.

ನಿಜ, ಇದು ಸಣ್ಣ ಪುಟ್ಟ ಹಗರಣವಲ್ಲ, ವ್ಯವಹಾರ - ಭಾರೀ ಅವ್ಯವಹಾರ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ಆದಾಯ ಹಾನಿ. ಇದರ ಜಾಲವೋ ದೇಶದ ಐದು ರಾಜ್ಯಗಳಲ್ಲಿ ಅತ್ಯಧಿಕ, ದೇಶದಲ್ಲಿ ಚಲಾವಣೆ, ಆರೋಪಿಗಳು ಕರಿಂಲಾಲಾ ಮಾತ್ರವಲ್ಲ..... ರಾಜ್ಯದ, ಕೇಂದ್ರದ ಸಚಿವರುಗಳು, ಮಹಾನ್ ವ್ಯಕ್ತಿಗಳು, ನೂರಾರು ಗಣ್ಯ-ನಗಣ್ಯರು ಈ ಹಗರಣವನ್ನು ಬಳಸಿಕೊಳ್ಳಲು ಬಿಜೆಪಿ ಮುಂದಾಯಿತು. ರಾಜೀನಾಮೆಗೆ ಆಗ್ರಹಿಸಿತು. ಆದರೆ ಕುಖ್ಯಾತ ವಂಚಕ ಕರಿಂಲಾಲಾನಿಗೆ ಸನ್ಮಾನ ಮಾಡುವಲ್ಲಿ ಕೇಂದ್ರದ ಸಚಿವ ಮುರಳಿ ಮನೋಹರ್ ಜೋಷಿ, ಗೋಪಿನಾಥ ಮುಂಡೆ, ಶಿವಸೇನೆಯ ಬಾಳಾಠಾಕ್ರೆಯಂತಹವರಿದ್ದ ಫೋಟೋ ಖರ್ಗೆ ಬಳಿಯಲ್ಲಿದ್ದದ್ದು ನೋಡಿ ಪೆಚ್ಚಾಯಿತು!

ಇಂತಹ ಭಾರೀ ಹಗರಣ ತನಿಖೆ ಕುರಿತು ಎಸ್.ಎಂ.ಕೃಷ್ಣರ ಸರ್ಕಾರ ವರ್ತಿಸಿದ್ದು ಹಲವು ಅನುಮಾನಗಳನ್ನು ಹುಟ್ಟಿಸಿದೆ. ಅತ್ಯಂತ ಕಾನೂನು ಮಂತ್ರಿ ಚಂದ್ರೇಗೌಡ ಹೇಳುತ್ತಾರೆ "ನಕಲಿ ನೋಟುಗಳೇ ಇರುವಾಗ ನಕಲಿ ಛಾಪಾ ಕಾಗದದ್ದೇನು ವಿಶೇಷ?" ಇದು ಖಂಡನೀಯ. ಈ ಹಗರಣದಲ್ಲಿರುವ ಕುಳಗಳು ಎಂತೆಂಥಹವು? ಭಾರಿ ತಿಮಿಂಗಿಲಗಳು! ಈ ಹಣದಲ್ಲಿನ ಪಾಲು ಯಾರ್‍ಯಾರಿಗೆ ಎಷ್ಟೆಷ್ಟು?

ಅಂತೂ ಕೊನೆಗೂ ಸರ್ಕಾರ ಅನ್ಯಮಾರ್ಗವಿಲ್ಲದೇ ವಿಶೇಷ ನ್ಯಾಯಾಲಯ ರಚಿಸಿ ತನಿಖೆಗೆ ಆದೇಶಿಸಿದೆ. ಇಡೀ ಹಗರಣದ ಆಳ ಅಗಲ ಜಾಲಾಡಿ ದ್ರೋಹಿಗಳ


ಜೇವರ್ಗಿ: ತೊಗರಿ ಬೆಳೆ ಅಪಾರ ಹಾನಿ

ಸುಮಾರು ಒಂದು ಲಕ್ಷ 30ಸಾವಿರ ಎಕರೆ ಜಮೀನಿನಲ್ಲಿ ತೊಗರಿ ಬಿತ್ತಿದ ಜೇವರ್ಗಿ ರೈತರು ಇಲಿಯೋಥಿಸಿಸ್ ರೋಗದಿಂದ ಅಪಾರ ಹಾನಿಗೀಡಾಗಿ ಕಂಗಾಲಾಗಿದ್ದಾರೆ. ಬೆಳೆಗೆ ಬೆಲೆ ಮತ್ತು ಪರಿಹಾರವನ್ನು ನೀಡುವಂತೆ ಆಗ್ರಹಿಸಿ ದೀರ್ಘ ಕಾಲದಿಂದ ವಿವಿಧ ಹಂತಗಳ ಚಳುವಳಿ ನಡೆಸಿದ ರೈತರ ಸಂಕಷ್ಟಗಳನ್ನು ಕೇಳುವ ಬದಲು ಸರ್ಕಾರ ಪೋಲೀಸರನ್ನು ಛೂ ಬಿಟ್ಟು ಲಾಠಿ ಚಾರ್ಜ್, ಗೋಲಿಬಾರ್ ನಡೆಸಿದೆ. ಸರ್ಕಾರ ರೈತಮುಖಂಡರನ್ನು ಎಳೆದೊಯ್ದು ಅಮಾನುಷವಾಗಿ ಲಾಕಪ್‌ನಲ್ಲಿ ಥಳಿಸಲಾಗಿದೆ. ಖರ್ಗೆಯವರ ಉಸ್ತುವಾರಿ ಜಿಲ್ಲೆಯಲ್ಲಿಗೆ ಚಳುವಳಿಕಾರರ ಮೇಲೆ ಸೇಡು ತೀರಿಸಿಕೊಳ್ಳುವ ಮನೋಭಾವ ಹೆಚ್ಚುತ್ತಿದೆ. ಪೊಲೀಸರ ರಾಕ್ಷಸಿ ವರ್ತನೆಗೆ ಇದು ಇತ್ತೀಚಿನ ನಾಲ್ಕನೆಯ ಘಟನೆ.

ಪರಿಹಾರಕ್ಕೋರಿದ ರೈತರ ಮೇಲೆ ಪೋಲೀಸರ ರಾಕ್ಷಸ ದಬ್ಬಾಳಿಕೆ

ಮಾರುತಿ ಮಾನ್ಪಡೆ

ಜೇವರ್ಗಿ ತಾಲ್ಲೂಕಿನಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ಅತೀ ಹೆಚ್ಚು ತೊಗರಿ ಬೆಳೆಯುತ್ತಾರೆ. ಈ ವರ್ಷ 1 ಲಕ್ಷ 30,000 ಎಕರೆಯಲ್ಲಿ ಬಿತ್ತಿದ ತೊಗರಿ ಬೆಳೆ ನೈಸರ್ಗಿಕ ಪ್ರಕೋಪದಿಂದ ಹಾಗೂ ಈಲಿಯೋಥಿಸ್ ಎಂಬ ರೋಗದಿಂದ ಬೆಳೆ ನಷ್ಟವಾಗಿದೆ. ಮುಂಗಾರು ಪೂರ್ತಿ ಬರಗಾಲದಿಂದ ಬೆಳೆ ಬಾರದೆ ರೈತರು ನಷ್ಟ ಅನುಭವಿಸಿದ್ದಾರೆ. ಒಂದಿಷ್ಟು ತೊಗರಿ ಬೆಳೆಯಬಹುದೆಂದು ನಿರೀಕ್ಷಿಸಿದ ರೈತರಿಗೆ ತೊಗರಿ ಕಾಯಿ ಕಟ್ಟದೆ ಬೆಳೆ ಭಾರದಂತಾಯಿತು. ಈಲಿಯೊಥಿಸ್ ರೋಗ ಬಂದ ಸಂದರ್ಭದಲ್ಲಿ ಡಿಸೆಂಬರ್ ಮೊದಲನೆ ವಾರದಲ್ಲಿ ಮೋಡ ಕವಿದ ವಾತಾವರಣದಿಂದ ಹತ್ತಾರು ಸಲ ಕ್ರಿಮಿನಾಶಕ ಸಿಂಪಡಿಸಿದರೂ ಜೀವರ್ಗಿ ತಾಲ್ಲೂಕಿನ ರೈತರು ತೊಗರಿ ಬೆಳೆ ಉಳಿಸಿಕೊಳ್ಳಲಾಗಲಿಲ್ಲ. ವಿಪರೀತ ಭೀತಿಗೊಂಡು ರೋಗ ನಿಯಂತ್ರಣಕ್ಕಾಗಿ ಸಾಲ ಮಾಡಿದ ರೈತರು ತೀವ್ರ ತೊಂದರೆಗೊಳಗಾದರು. ಬಳಿಕ ಈ ಹಾನಿಯ ಪರಿಹಾರಕ್ಕಾಗಿ ಜೀವರ್ಗಿ ಶಾಸಕ ಹಾಗೂ ಲೋಕೋಪಯೋಗಿ ಸಚಿವರಾದ ಧರ್ಮಸಿಂಗ್ ಅವರ ಕಡೆಗೆ ಹತ್ತಾರು ಸಾರಿ ಅಲೆದಾಡಿದರೂ ಯಾವುದೇ ಪ್ರಯೋಜನವಾಗಲಿಲ್ಲ.



ರೈತರ ದಮನಕ್ಕೆ ನಿಂತ ಖರ್ಗೆ

ತೊಗರಿ ಬೆಳೆ ನಷ್ಟ ಅನುಭವಿಸಿದ ರೈತರಿಗೆ ಪರಿಹಾರಕ್ಕಾಗಿ, ಸಾಲ ಮನ್ನಕ್ಕಾಗಿ, ಬೆಳೆ ವಿಮೆಯ ಮಂಜೂರಾತಿಗಾಗಿ ತಾಲ್ಲೂಕು ಮಟ್ಟದಲ್ಲಿ ಹೋರಾಟ ನಡೆಸಲು ಕರ್ನಾಟಕ ಪ್ರಾಂತ ರೈತ ಸಂಘ, ಅಖಿಲ ಭಾರತ ಕಿಸಾನ್ ಸಭಾ, ಜೆ.ಡಿ. ಯು ಮತ್ತು ಜೆ.ಡಿ. ಎಸ್ ಮುಖಂಡರು ಒಂದೆಡೆ ಸೇರಿ ತಾಲ್ಲೂಕು ಹೋರಾಟ ಸಮಿತಿ ರಚಿಸಿಕೊಂಡು ಪ್ರತಿಭಟನೆ ನಡೆಸಲು ಮುಂದಾದರು.

ಜೇವರ್ಗಿ ತಾಲ್ಲೂಕಾ ರೈತ ಹೋರಾಟ ಸಮಿತಿ ವಾರಗಟ್ಟಲೆ ಡಿಸೆಂಬರ್ ತಿಂಗಳಲ್ಲಿ ತಹಸೀಲ್ ಕಛೇರಿ ಮುಂದೆ ಧರಣಿ ನಡೆಸಿ ಜಿಲ್ಲಾಧಿಕಾರಿಗಳನ್ನು ಭೇಟಿಯಾಗಿ ಸಮಸ್ಯೆ ಹೇಳಿಕೊಂಡರು. ಆದರೂ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಜನವರಿ 8 ರಂದು ಸಾಂಕೇತಿಕ ರಸ್ತೆ ರೋಕೋ ನಡೆಸಿದರು. ಅಂದು ಸಹಾಯಕ ಆಯುಕ್ತರು ಬಂದು ಮನವಿ ಪತ್ರ ಪಡೆದರು. ಅವರಿಂದಲೂ ಯಾವುದೇ ಭರವಸೆ ಬರಲಿಲ್ಲ. ಕೊನೆಗೆ ಎರಡನೇ ಹಂತದ ಹೋರಾಟವನ್ನು ಆರಂಭಿಸಿ ಜನವರಿ 20ರಿಂದ 29ವರೆಗೆ ತಹಸೀಲು ಕಛೇರಿ ಮುಂದೆ ಮತ್ತೊಮ್ಮೆ ಧರಣಿ ನಡೆಸಿದರು. 30ರಿಂದ ಅನಿರ್ದಿಷ್ಟ ಕಾಲ ರಸ್ತಾರೋಕೊ ಆರಂಭಿಸಿದರು. 30ರಂದು ಸುಮಾರು ಐದರಿಂದ ಆರು ಸಾವಿರ ರೈತರು ಜೇವರ್ಗಿಯಲ್ಲಿ ಬೆಂಗಳೂರು ಗುಲ್ಬರ್ಗಾ ರಸ್ತೆ ಮೇಲೆ ಬೆಳಿಗ್ಗೆಯಿಂದಲೇ ಕುಳಿತು ಶಾಂತಿಯುತವಾಗಿ 6ಗಂಟೆವರೆಗೂ ರಸ್ತೆ ತಡೆ ಚಳುವಳಿಯನ್ನು ನಡೆಸಿದರು. ಸರ್ಕಾರದ ಪರವಾಗಿ ಜಿಲ್ಲಾಧಿಕಾರಿಗಳು ಬಂದು ಮಾತನಾಡಲಿ ಎಂದು ರೈತರು ಹಠ ಹಿಡಿದರು. 35 ವರ್ಷಗಳ ಕಾಲ ಜೇವರ್ಗಿ ತಾಲ್ಲೂಕನ್ನು ಸತತ ಪ್ರತಿನಿಧಿಸಿದ ಸಚಿವ ಧರ್ಮಸಿಂಗ್ ಅವರಾಗಲೀ ಜಿಲ್ಲಾಧಿಕಾರಿಗಳಾಗಲಿ ಬರಲಿಲ್ಲ; ರೈತರು ಚಳವಳಿ ಮುಂದುವರೆಸಿ ರಸ್ತೆ ಮೇಲೆ ಅಡುಗೆ ಮಾಡಿ, ಊಟ ಮಾಡಿ ರಸ್ತೆ ರೋಕೊ ಮುಂದುವರೆಸಿದರು.

ಸರ್ಕಾರವು ಮಾತುಕತೆ ನಡೆಸಿ ಕಷ್ಟಕ್ಕೊಳಗಾದ ರೈತರ ಸಮಸ್ಯೆ ಬಗೆಹರಿಸುವ ಪ್ರಜಾಪ್ರಭುತ್ವದ ದಾರಿಯನ್ನು ಹಿಡಿಯದೇ ಪೋಲೀಸರನ್ನು ಛೂ ಬಿಟ್ಟು ರೈತರ ಹೋರಾಟ ದಮನಿಸಲು ಮುಂದಾದರು. ತಾಲ್ಲೂಕಿನ ಮುಖಂಡರನ್ನು ಬಂಧಿಸಿ ದೂರ ಕರೆದೊಯ್ದರು, ರೈತರನ್ನು ಚದುರಿಸಲು ಗಾಳಿಯಲ್ಲಿ ಗುಂಡು, ಲಾಠಿ ಚಾರ್ಜ್ ಮೂಲಕ ಅಮಾಯಕ ರೈತರ ಮೇಲೆ ಧಾಳಿ ನಡೆಸಿದ್ದಾರೆ. ಬಂಧಿತ ರೈತರಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ವೆಂಕಟರಾವ್ ಭೀಮರಾವ್ ವಬನಗೇರಿ, ಪಟ್ಟಣ ಪಂಚಾಯತ್ ಸದಸ್ಯರಾದ ಮಲ್ಲಿಕಾರ್ಜುನ್, ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಬಾಬು ಪಟೇಲ್ ಹಾಗೂ ಜೆ.ಡಿ.(ಎಸ್) ಮುಖಂಡರಾದ ಚಂದ್ರಶೇಖರ್ ಹಿರೇಮಠ್ ಇವರನ್ನು ಒಳಗೊಂಡು 8 ಜನರನ್ನು ಮುಂಜಾನೆ ಎಬ್ಬಿಸಿ 'ಚಳುವಳಿ ಮಾಡುತ್ತೀರಾ ಬೋ...ಮಕ್ಕಳೇ' ಎಂದು ಬೆದರಿಸಿ ಅವಾಚ್ಯ ಶಬ್ದಗಳಿಂದ ಬೈಯ್ದು, ತೊಡೆಗಳ ಮೇಲೆ ರಾಕ್ಷಸರಂತೆ ನಿಂತು ಮೈತುಂಬಾ ಹೊಡೆದಿದ್ದಾರೆ. ಅಂಗಾಲಿಗೆ ಲಾಠಿಗಳಿಂದ ಹೊಡೆದಿದ್ದಾರೆ. ನಂತರ ನ್ಯಾಯಾದೀಶರ ಹತ್ತಿರ ಕರೆದೊಯ್ಯದೇ ಜೈಲಿಗೆ ಹಾಕಿದ್ದಾರೆ. ತಾಲ್ಲೂಕಿನ 33 ರೈತ ಮುಖಂಡರನ್ನು ಬಂಧಿಸಿದ್ದಾರೆ. ಬಂಧಿತರಲ್ಲಿ ಜೆ.ಡಿ.(ಎಸ್)ನ ಕೇದಾರ್ ಲಿಂಗ್ ಹಿರೇಮಠ್, ಜೆ.ಡಿ.(ಯು)ನ ಅಶೋಕಯೋಗಿ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರು, ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ವೆಂಕಟರಾವ್ ಭೀಮರಾವ್ ವಬನಗೇರಿ, ಎಐಎಸ್‌ಎಫ್‌ನ ರಾಜ್ಯಧ್ಯಕ್ಷ ಶೌಕತ್ ಅಲಿ ಆಲೂರ, ಸಿ.ಪಿ.ಐ.ನ ಜಿಲ್ಲಾ ಕಾರ್ಯದರ್ಶಿ ಶಂಕರ್ ಕಟ್ಟಿ ಅವರು ಸೇರಿದ್ದಾರೆ.

ಜೇವರ್ಗಿ ಪಟ್ಟಣದ ನಾಗರೀಕರು ಸ್ವಯಂ ಸ್ಫೂರ್ತಿಯಿಂದ ಸಂಪೂರ್ಣ ಬಂದ್ ನಡೆಸಿ ಸರ್ಕಾರದ ದೌರ್ಜನ್ಯವನ್ನು ಪ್ರತಿಭಟಿಸಿದ್ದಾರೆ. ಅಫಜಲ್‌ಪುರದಲ್ಲಿ ಕೂಡ ಧರಣಿ ನಡೆಸಿ ಪ್ರತಿಭಟಿಸಿದ್ದಾರೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಚಳುವಳಿ ನಿರತ ಜನತೆಯ ಮೇಲೆ ರಾಕ್ಷಸೀಯವಾಗಿ ಎರಗುತ್ತಿರುವ ಪೋಲಿಸ್ ದಬ್ಬಾಳಿಕೆಗಳು ಹೆಚ್ಚುತ್ತಿವೆ. ಇದು ಜನ ಸಾಮಾನ್ಯರಲ್ಲಿಯೂ ಆಕ್ರೋಶ ಮೂಡಿಸುತ್ತಿರುವುದನ್ನು ಕಾಣಬಹುದು.

ಜಿಲ್ಲೆಯನ್ನು ಪ್ರತಿನಿಧಿಸುವ ಗೃಹ ಸಚಿವರೇ ಆದ ಮಲ್ಲಿಕಾರ್ಜುನ್ ಖರ್ಗೆಯವರು ಪೋಲೀಸರ ಮೂಲಕ ಚಳುವಳಿಯನ್ನು ಬಗ್ಗು ಬಡಿಯಲು ಮುಂದಾಗಿರುವುದು ಎದ್ದು ಕಾಣುತ್ತದೆ. ಕಳೆದ ಒಂದು ವರ್ಷದಲ್ಲಿ ಕರ್ನಾಟಕದ ಪ್ರಾಂತ ರೈತ ಸಂಘದ ಕಾರ್ಯಕರ್ತರ ಮೇಲೆ ನಾಲ್ಕು ಸಲ ಪೋಲಿಸ್ ಲಾಕಪ್‌ನಲ್ಲಿ ಅಮಾನುಷ ದೌರ್ಜನ್ಯಗಳು ನಡೆದಿವೆ. AISF ನ ಕಾರ್ಯಕರ್ತರು ಎರಡು ಸಲ ದೌರ್ಜನ್ಯಕ್ಕೆ ಒಳಗಾಗಿದ್ದಾರೆ. ಪೋಲಿಸ್ ಲಾಕಪ್‌ನಲ್ಲಿ ನಡೆದ ದೌರ್ಜನ್ಯದ ಬಗ್ಗೆ ವಿಚಾರಣೆ ಮಾಡಲು ಕೇಳಿದರೂ ಕೂಡ ನಿರಾಕರಿಸಿ ಪೋಲಿಸ್ ಕ್ರಮವನ್ನೇ ಸಮ್ಮತಿಸಿದ್ದಾರೆ. ಮಾನವ ಹಕ್ಕುಗಳನ್ನೇ ನಿರಾಕರಿಸಲು ಮುಂದಾಗಿದ್ದಾರೆ.

ಕರ್ನಾಟಕ ಅಭಿವೃದ್ಧಿಯಲ್ಲಿ ಜೇವರ್ಗಿ ತಾಲ್ಲೂಕು 147ನೇ ಸ್ಥಾನ, ಯಾದಗಿರಿ 157ನೇ ಸ್ಥಾನ ಪಡೆದು ರಾಜ್ಯದ ಹಿಂದುಳಿದ ತಾಲ್ಲೂಕು ಪಟ್ಟಿಯಲ್ಲಿ ಅಗ್ರಗಣ್ಯ ಸ್ಥಾನ ಪಡೆದಿದೆ. ಕಳೆದ 35 ವರ್ಷಗಳಿಂದ ಶಾಸಕರಾದ ಆಳುವ ಕಾಂಗ್ರೆಸ್ ಪಕ್ಷದ ಈ ಇಬ್ಬರು ಜನತೆಯ ಏಳಿಗೆ, ರೈತರ ಏಳಿಗೆ ಕಡೆಗಣಿಸಿರುವುದಕ್ಕೆ ಸಾಕ್ಷಿಯಾಗಿದೆ. ಜನರ ಸಂಕಷ್ಟಗಳ ಪರಿಹಾರಕ್ಕೆ ನೇತೃತ್ವ ನೀಡಿದ ಕರ್ನಾಟಕ ಪ್ರಾಂತ ರೈತ ಸಂಘ ಭೂಮಾಲಿಕರ ಹಾಗೂ ಆಳುವ ವರ್ಗಗಳ ಕೆಂಗಣ್ಣಿಗೆ ಗುರಿಯಾಗಿದೆ.

WTO, ಜಾಗತಿಕ ಬ್ಯಾಂಕ್‌ನ ಒತ್ತಡಕ್ಕೆ ಒಳಗಾಗಿ ಬೇಳೆ ಕಾಳುಗಳು, ಪಾಮ್ ಎಣ್ಣೆ ಆಮದು ಮಾಡಿಕೊಳ್ಳುತ್ತಿರುವುದರಿಂದ ಕೃಷಿ ಉತ್ಪಾದನೆ ಹಾಗೂ ಬೆಲೆ ಕುಸಿದು ಆರ್ಥಿಕ ಸಂಕಟಕ್ಕೆ ಒಳಗಾಗಿ ರೈತರು ಆತ್ಮಹತ್ಯೆ ದಾರಿ ಹಿಡಿದಿದ್ದಾರೆ. ಜಿಲ್ಲೆಯಲ್ಲಿ ಈ ದಿನಗಳಲ್ಲಿ ಸುಮಾರು 20 ಜನ ರೈತರು ಆತ್ಮಹತ್ಯೆಗೆ ಒಳಗಾಗಿರುವುದು ಆರ್ಥಿಕ ಬಿಕ್ಕಟ್ಟಿಗೆ, ರೈತರ ಸಂಕಷ್ಟಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಪಾಳೇಗಾರಿ ಜಮೀನುದಾರು ಮತ್ತು ಆಡಳಿತ ವರ್ಗದವರು ರೈತರ, ಕೃಷಿ ಕೂಲಿಕಾರರ ಸಂಕಷ್ಟವನ್ನು ಕಡೆಗಾಣಿಸಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಪ್ರಜ್ವಲ ಐಕ್ಯ ಚಳುವಳಿ ನಡೆಸಲು ಯತ್ನಗಳು ಸಾಗಿವೆ.

ಔಷಧ ವ್ಯಾಪಾರದಲ್ಲಿನ ಕಪ್ಪು ವ್ಯವಹಾರ

ಕ್ರಿಕೆಟ್ ಸಟ್ಟಾ ಬಾಜಿಯಲ್ಲಿ ನಡೆದ ಹಣದ ಅವ್ಯವಹಾರ ರಕ್ಷಣಾ ಇಲಾಖೆಯಲ್ಲಿ ನಡೆದ ಭ್ರಷ್ಟಾಚಾರಕ್ಕಿಂತ ಭಯಂಕರವಾದ ಅಲೆಬ್ಯಹತ್ ಅವ್ಯವಹಾರ 1996ರಿಂದ ಔಷಧ ಕ್ಷೇತ್ರದಲ್ಲಿ ನಡೆಯುತ್ತಿದ್ದು ಬಹುಜನರ ಗಮನವನ್ನು ಸೆಳೆದಿಲ್ಲ. ಅದೇ ಔಷಧ ವ್ಯಾಪಾರ ಕ್ಷೇತ್ರದಲ್ಲಿ ಔಷಧ ಕಂಪನಿಗಳಿಂದ ನಡೆಯುತ್ತಿರುವ ಕಪ್ಪು ವ್ಯವಹಾರ (Black Marketing) ಈ ಔಷಧಗಳು ದಿನನಿತ್ಯ ಕೋಟ್ಯಾಂತರ ಜನಸಾಮಾನ್ಯ ರಕ್ತವನ್ನು ಸೇರುತ್ತಿದೆ.

ಔಷಧ ಪ್ರತಿನಿಧಿಗಳ ಫೆಡರೇಶನ್ (ಎಫ್.ಎಂ.ಆರ್.ಎ.ಐ) ಔಷಧ ವ್ಯಾಪಾರದಲ್ಲಿ ನಡೆಯುತ್ತಿರುವ ಈ ಕಪ್ಪು ವ್ಯವಹಾರವನ್ನು ಬಯಲಿಗೆಳದಿದೆ. ಹೋಗುವಲ್ಲಿ ಯಶಸ್ವಿಯಾಗಿದೆ. ಅನೇಕ ರಾಷ್ಟ್ರೀಯ ದಿನಪತ್ರಿಕೆಗಳ ಮುಖಪುಟದಲ್ಲಿ ಮುಖ್ಯಸುದ್ದಿಯಾಗಿ ಪ್ರಕಟಣೆಗೊಂಡಿದೆ. ಅನೇಕ ಸುದ್ದಿಮಾದ್ಯಮಗಳ ಮೂಲಕ ಸುದ್ದಿ ಪ್ರಸಾರಗೊಂಡಿದೆ.

ಔಷಧ ವ್ಯಾಪಾರ ಕ್ಷೇತ್ರದಲ್ಲಿನ ಈ ಕಪ್ಪು ವ್ಯವಹಾರವೆಂದರೇನು? ಈ ವ್ಯವಹಾರದಲ್ಲಿ ಯಾರು ಪಾಲ್ಗೊಂಡಿದ್ದಾರೆ? ಈ ವ್ಯವಹಾರವನ್ನು ಯಾರು ಮಾಡುತ್ತಿದ್ದಾರೆ? ಈ ವ್ಯವಹಾರದಿಂದ ಯಾರಿಗೆ ಎಷ್ಟು ಲಾಭವಾಗುತ್ತಿದೆ.?ಹಾಗೂ ಯಾರಿಗೆ ಎಷ್ಟು ಹಾನಿಯಾಗುತ್ತಿದೆ? ಎಂಬ ಔಷಧ ಕಂಪನಿಗಳಲ್ಲಿ ತಯಾರಾದ ಔಷಧಗಳನ್ನು ಯಾವುದೇ ದಾಖಲು ಪತ್ರಗಳಿರದೇ ನೇರವಾಗಿ ಮಾರುಕಟ್ಟೆಗೆ ತರುವ ವ್ಯವಸ್ಥೆಯೇ ಔಷಧ ವ್ಯಾಪಾರದಲ್ಲಿ ನಡೆಯುತ್ತಿರುವ ಕಪ್ಪು ವ್ಯವಹಾರ. ಈ ವ್ಯವಹಾರದಿಂದಾಗಿ ಕೇಂದ್ರ / ರಾಜ್ಯ ಸರಕಾರಗಳಿಗೆ ನೀಡಬೇಕಾದಸುಂಕ, ತೆರಿಗೆಗಳಿಂದ ತಪ್ಪಿಸಿಕೊಳ್ಳುವುದೇ ಈ ವ್ಯವಹಾರದ ಮೂಲ ಉದ್ದೇಶ. ಈ ವ್ಯವಹಾರದಲ್ಲಿ ಔಷಧ ಕಂಪನಿಗಳು ಕೋಟ್ಯಾಂತರ ರೂಪಾಯಿ ಲಾಭಗಳಿಸುತ್ತಿದೆ. ಅಷ್ಟೆ ಮೊತ್ತದ ಹಣ ಕೇಂದ್ರ/ ರಾಜ್ಯಗಳಿಗೆ ತಲುಪುವುದು ಮೂಲಕ ಹಾನಿಕಾರಕ, ಅಪಾಯಕಾರಿ ಔಷಧಗಳು ಮಾರುಕಟ್ಟೆಗೆ ನುಗ್ಗುತ್ತಿವೆ. ಇಂದು ಈ ವ್ಯವಹಾರ ಜನಜೀವನ ಪ್ರಾಣದ ಜೊತೆಗೆ ಚೆಲ್ಲಾಟವಾಡುತ್ತಿದೆ. ಪ್ರಾಣರಕ್ಷಕರೇ ಪ್ರಾಣಬಕ್ಷಕರಾಗಿದ್ದಾರೆ.

ಕೆಲವು ಔಷಧ ಕಂಪನಿಗಳು ದೊಡ್ಡ ದೊಡ್ಡ ಆಸ್ಪತ್ರೆಯ ಹೆಸರಿನಲ್ಲಿ ಭಾರಿಮೊತ್ತದ ಔಷಧಗಳನ್ನು ಮುಕ್ತಮಾರುಕಟ್ಟೆಗೆ ಬಿಡುತ್ತಿವೆ. ಔಷದ ಕಂಪನಿಗಳು ಭಾರಿ ಪ್ರಮಾಣದಲ್ಲಿ ರಿಯಾಯತಿಯಲ್ಲಿ ಔಷಧಗಳನ್ನು ಮಾರುಕಟ್ಟೆಗೆ ನುಗ್ಗಿಸುತ್ತಿವೆ. ಇಡೀ ತಿಂಗಳು ಬಾರದ ಔಷಧ ವ್ಯಾಪಾರವನ್ನು, ತಿಂಗಳ


ಬರಲಿದೆ ಆಘಾತಕಾರಿ ಬಜೆಟ್

ಸೀತಾರಾಂ ಯೆಚೂರಿ

2002-03 ರ ಸಾಲಿನ ಬಜೆಟ್ ಮಂಡಿಸಲು ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದೆ. ಎರಡನೇ ಹಂತದ ಆರ್ಥಿಕ ಸುಧಾರಣೆಯತ್ತ ದಾಪುಗಾಲಿಕ್ಕುವುದಾಗಿ ಹೇಳುವ ಸರ್ಕಾರ ನಡೆಸಿರುವ ಪೂರ್ವ ತಯಾರಿ ಏನು? ಪರಿಹಾರದ ದಾರಿ ಇಲ್ಲವೇ? ಓದಿ

ವಾಜಪೇಯಿ ನೇತೃತ್ವದ ಕೇಂದ್ರ ಸರ್ಕಾರವು 2002-03 ನೇ ಸಾಲಿಗೆ ಮುಂಗಡ ಪತ್ರ ಮಂಡಿಸಲು ಸಿದ್ಧವಾಗುತ್ತಿದೆ. ಈ ಹಾದಿಯಲ್ಲಿ ಈ ಸರ್ಕಾರವು ನಮ್ಮ ಆರ್ಥಿಕವನ್ನು ಅಡವಿಡಲು, ನಮ್ಮ ಸಂಪತ್ತನ್ನು ಕೊಳ್ಳೆ ಹೊಡೆಯಲು ಮತ್ತು ನಮ್ಮ ಜನರನ್ನು ಮತ್ತಷ್ಟು ದಿವಾಳಿ ಮಾಡಲು ಸಿದ್ಧತೆ ನಡೆಸುತ್ತಿದೆ. ಈ ಎಲ್ಲಾ ಕ್ರಮಗಳನ್ನು ದೊಡ್ಡ ವ್ಯಾಪಾರಿ ಕುಳಗಳು ಹಲ್ಲು ಗಿಂಜಿ ಸ್ವಾಗತಿಸುತ್ತಿದೆ.

ಕೇವಲ ನಷ್ಟ ಪೀಡಿತ ಉದ್ದಿಮೆಗಳನ್ನು ಮಾತ್ರ ಖಾಸಗೀಕರಿಸುತ್ತೇವೆ ಎನ್ನುವ ಹೇಳಿಕೆಗೆ ವಿರುದ್ಧವಾಗಿ ಇತ್ತೀಚಿಗೆ ಅತ್ಯಂತ ಲಾಭದಾಯಕ ಬಿಳಿಯಾನೆಗಳಾದ ಐಬಿಪಿ ಮತ್ತು ವಿದೇಶ್ ಸಂಚಾರ್ ನಿಗಮದ ಶೇರುಗಳನ್ನು ಮಾರಾಟ ಮಾಡುವ ಹಳೆಯ ಹಾಡನ್ನೇ ಹಾಡಲಾಗುತ್ತಿದೆ. ಇದರಿಂದ ಗಳಿಸಿದ ಹಣವನ್ನು ಮತ್ತೆ ಬಜೆಟ್‌ಕೊರತೆ ತುಂಬಲು ವಿನಿಯೋಗಿಸಲಾಗುತ್ತದೆ ಎಂದು



ಹೇಳಲಾಗುತ್ತಿದೆ. ಈ ಹಣದುಬ್ಬರವನ್ನು ತಡೆಗಟ್ಟಲು ವಿಫಲರಾದ 'ಅತ್ಯಂತ ಸಮರ್ಥ' ಹಣಕಾಸು ಸಚಿವರು ವಾಜಪೇಯಿ ಸರ್ಕಾರದ ಅಸಮರ್ಥತೆಯನ್ನು ಬಯಲು ಮಾಡಿದ್ದಾರೆ.

ಲಾಭಕೋರರ ಕೂಟದತ್ತ ನೂಕುತ್ತಿರುವವರು


ಅಗತ್ಯ ವಸ್ತುಗಳನ್ನು ಮುಕ್ತಗೊಳಿಸುವುದು ಇದುವರೆಗೆ ಅಲ್ಪಸ್ವಲ್ಪ ಆಧಾರ ಹೊಂದಿದ್ದ ರೈತರು ಮತ್ತು ಬಳಕೆದಾರರು ಇಬ್ಬರನ್ನು ಬಾಧಿಸುತ್ತದೆ. ದಲ್ಲಾಳಿಗಳು ಮತ್ತು ಲಾಭಕೋರರ ಕೂಪಕ್ಕೆ ಜನರನ್ನು ನಿರ್ದಯವಾಗಿ ತಳ್ಳುವುದೇ ಅಲ್ಲದೇ ಅಗತ್ಯ ಔಷಧಗಳ ಬೆಲೆ ನಿಯಂತ್ರಣವನ್ನು ರದ್ದುಗೊಳಿಸಲು ವಾಜಪೇಯಿ ಸರ್ಕಾರ ತೀರ್ಮಾನಿಸಿರುವುದು ಕೋಟ್ಯಾಂತರ ಭಾರತೀಯರನ್ನು ನರಕ ಕೂಪಕ್ಕೆ ತಳ್ಳುತ್ತದೆ.

ಈಗಾಗಲೇ ಉಲ್ಬಣಗೊಂಡಿರುವ ನಿರುದ್ಯೋಗ ಸಮಸ್ಯೆಗೆ, ಕೇಂದ್ರ ಸರ್ಕಾರಿ ಉದ್ಯೋಗಗಳಲ್ಲಿ ಕಡಿತಗೊಳಿಸಲು ವಾಜಪೇಯಿ ಸರ್ಕಾರ ತೀರ್ಮಾನಿಸಿರುವುದು ಮತ್ತಷ್ಟು ತುಪ್ಪ ಸುರಿಯುತ್ತದೆ. 11 ಲಕ್ಷ ಉದ್ಯೋಗಗಳನ್ನು ಕಡಿತಗೊಳಿಸುವುದು ಇದರ ಉದ್ದೇಶವಾಗಿದೆ. ಸಣ್ಣ ಉಳಿತಾಯದ ಮೇಲಿನ ಬಡ್ಡಿ ದರಗಳನ್ನು ಕಡಿತಗೊಳಿಸಲು ತೀರ್ಮಾನಿಸಿರುವುದು ಈಗಾಗಲೇ ಸಾಕಷ್ಟು ನೊಂದಿರುವ ಮಧ್ಯಮವರ್ಗದ ಜನರನ್ನು ಬೀದಿಗೆ ಬೀಸಾಡುತ್ತದೆ.

ಹುಸಿ ವರ್ಣನೆ

ಆದರೆ ಈ ಎಲ್ಲಾ ಕ್ರಮಗಳನ್ನು ಬಂಡವಾಳಶಾಹಿ ಉದ್ಯಮಗಳು ಹಾಡಿ ಹೊಗಳಿ ಈ ತೀರ್ಮಾನಗಳಿಂದ 'ಸುಧಾರಣೆಗಳಿಗೆ' ಪ್ರೋತ್ಸಾಹ ಕೊಟ್ಟಂತಾಗಿದೆ ಎನ್ನುತ್ತಿವೆ. ಇದರಲ್ಲಿ ಕೆಲವು ರಾಷ್ಟ್ರೀಯ ದಿನಪತ್ರಿಕೆಗಳೂ, ಟಿ.ವಿ. ಮಾಧ್ಯಮವೂ ಹಿಂದೆ ಬಿದ್ದಿಲ್ಲ. ವ್ಯಾಪಾರಿ ಸಮೂಹವು ಈ ಎರಡನೇ ಹಂತದ ಸುಧಾರಣೆಗಳನ್ನು ಜನರ ಸಂಪತ್ತನ್ನು ಖಾಸಗಿ ಕೈಗಳಿಗೆ ವರ್ಗಾಯಿಸಿ ಜನರನ್ನು ಹಿಂಡಿ ಅತಿಹೆಚ್ಚು ಲಾಭ ಗಳಿಸುವ ಕ್ರಮಗಳು ಎಂದು ವರ್ಣಿಸುವಂತಹ ನಾಚಿಕೆಗೆಟ್ಟ ಮಟ್ಟಕ್ಕಿಳಿದಿವೆ. ಬಂಡವಾಳಶಾಹಿ ಶೋಷಣೆಯನ್ನು ಹೀಗೆ ಸಮರ್ಥಿಸಲು ಅವರಿಗೆ ಯಾವ ನಾಚಿಕೆಯೂ ಇಲ್ಲ. ಅವರ ಲಾಭದ ಭರಾಟೆಯಲ್ಲಿ ನಲುಗಿಹೋಗುವ ಜನರ ಬಗ್ಗೆ ಅವರಿಗೆ ಯಾವ ಪಾಪಪ್ರಜ್ಞೆಯೂ ಇಲ್ಲ. ಇದು ಮತ್ತಷ್ಟು ಆರ್ಥಿಕ ಹಿಂಜರಿತಕ್ಕೆ ಕಾಣಿಕೆ ನೀಡುತ್ತದೆ.

ಇದೇ ಕಲಮುಗಳಲ್ಲಿ ಕಳೆದ ವರ್ಷದ ಬಜೆಟ್‌ನ್ನು ವ್ಯಾಪಾರಿ ಕುಟುಂಬಗಳು ಹಾಡಿ ಹೊಗಳುತ್ತಿದ್ದಾಗ ನಾವು ಇದೊಂದು 'ಕಾಂಡವಿಲ್ಲದ ಮರ' ಎಂದು ಹೇಳಿದ್ದೆವು. ಅವರು ಆ ಬಜೆಟ್‌ಗೆ ಪೂರ್ಣ ಸಮ್ಮತಿ ನೀಡಿದ್ದಾಗ ಜನರನ್ನು ಪರೋಕ್ಷ ತೆರಿಗೆಗಳಿಂದ ಸುಲಿದು, ಬಂಡವಾಳದಾರರನ್ನು ನೇರ ತೆರಿಗೆಗಳಿಂದ ರಕ್ಷಿಸುವುದು ಆರ್ಥಿಕವನ್ನು ಮತ್ತಷ್ಟು ಕುಗ್ಗಿಸುತ್ತದೆ ಎಂದು ಹೇಳಿದ್ದೆವು.



ಜನರ ಕೊಳ್ಳುವ ಶಕ್ತಿ ಕಡಿಮೆಯಾದರೆ, ಉತ್ಪಾದಿತ ಸರಕು ಮಾರಾಟವಾಗದೆ ಆರ್ಥಿಕ ಹಿಂಜರಿತಕ್ಕೆ ಕಾರಣವಾಗುತ್ತದೆ ಎಂಬುದು ಪ್ರಾಥಮಿಕ ಅರ್ಥಶಾಸ್ತ್ರ. ಇದು ಕೈಗಾರಿಕಾ ಚಟುವಟಿಕೆಗಳನ್ನು ಕಡಿಮೆ ಮಾಡಿ ಮತ್ತಷ್ಟು ನಿರುದ್ಯೋಗಕ್ಕೆ ಕಾರಣವಾಗುತ್ತದೆ.

ಕಳೆದ ವರ್ಷದ ಪಾಠಗಳು

ಕಳೆದ ವರ್ಷದ ನಮ್ಮ ಅನುಭವದಂತೆ ಕೈಗಾರಿಕಾ ಬೆಳವಣಿಗೆ ತೀವ್ರವಾಗಿ ಕುಸಿದಿದೆ. ಇದು ಏಪ್ರಿಲ್ 2001 ರಿಂದ ನವೆಂಬರ್‌ವರೆಗೆ ಶೇ 6 ರಷ್ಟಿತ್ತು. ಇದು 1986 ರಿಂದೀಚೆಗೆ ದಾಖಲಾದ ಅತ್ಯಂತ ಕಡಿಮೆ ಬೆಳವಣಿಗೆ.

ಇನ್ನೂ ಅಪಾಯಕಾರಿಯೆಂದರೆ ಮೂಲಸೌಲಭ್ಯ ಅಭಿವೃದ್ಧಿಯ ದರ ಕಳೆದ ವರ್ಷದ ಶೇ 7.6 ಕ್ಕೆ ಹೋಲಿಸಿದರೆ ಶೇ 1 ರಷ್ಟು ದಾಖಲಾಗಿದೆ. ನಮ್ಮ ರಫ್ತು ಶೇ 20.7 ರಿಂದ ಶೇ 20 ಕ್ಕೆ ಕುಸಿದಿದೆ.

ಇದೆಲ್ಲಕ್ಕಿಂತ ಮುಖ್ಯ ವಿಚಾರ ಇವು ಕೇವಲ ತಾತ್ಕಾಲಿಕ ಅಂಕಿ ಸಂಖ್ಯೆಗಳಲ್ಲ. ಇದು ಭಾರತದ ಆರ್ಥಿಕದ ಆಳವಾದ ಬಿಕ್ಕಟ್ಟಿನಸೂಚನೆಗಳು. ಸತತ 12 ಉತ್ತಮ ಮುಂಗಾರಾಗಿದ್ದರೂ ಆಹಾರ ಧಾನ್ಯ ಉತ್ಪಾದನೆ ಸ್ಥಗಿತಗೊಂಡಿದೆ. ಇದು ಜನಸಂಖ್ಯೆಯ ಬೆಳವಣಿಗೆಯ ದರಕ್ಕಿಂತ ಹಿಂದೆ ಬಿದ್ದಿದೆ. ಹಸಿವಿನಿಂದ ಸಾವುಗಳು, ಆತ್ಮಹತ್ಯೆಗಳು ಸಂಭವಿಸಿವೆ. ಇವು ಸ್ವಾತಂತ್ರ್ಯ ಭಾರತದಲ್ಲಿ ಹಿಂದೆಂದೂ ಈ ಮಟ್ಟದಲ್ಲಿರಲಿಲ್ಲ.

ಇದೆಲ್ಲದರ ಪರಿಣಾಮವೆಂದರೆ ಒಟ್ಟಾರೆ ಆರ್ಥಿಕ ಕುಸಿತಗೊಂಡು ಹೂಡಿಕೆ ಕಡಿಮೆಯಾಗಿರುವುದು. ಇವು ಸುಧಾರಣೆಗಳು ಆರಂಭಗೊಂಡ 1991 ಕ್ಕಿಂತಲೂ ಹಿಂದೆ ಹೋಗಿವೆ. ಆರ್‌ಬಿಐ ವರದಿಯಂತೆ ಕೈಗಾರಿಕೆ, ಕೃಷಿ ಮತ್ತು ಸೇವಾ ವಲಯ, ಬಂಡವಾಳ ಕ್ರೋಢೀಕರಣ ಕುಸಿತಕೊಂಡಿದೆ. ಇದು ಭವಿಷ್ಯದಲ್ಲಿ ಭಾರಿ ಗಂಡಾಂತರಕಾರಿಯಾಗಲಿದೆ.

ಮುಂದೆ ಹೇಗೆ?

ಈ ಪ್ರಶ್ನೆಗೆ ಉತ್ತರ ಈ ಸುಧಾರಣೆಗಳನ್ನು ಮುಂದುವರಿಸಿ, ಆರ್ಥಿಕವನ್ನು ಕಾಪಾಡುತ್ತೇವೆ ಎಂಬುದರಲ್ಲಿಲ್ಲ. ಇಂತಹ ಸುಧಾರಣೆಗಳನ್ನು ಮುಂದುವರೆಸುವುದು ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸುತ್ತದೆ. ಉತ್ತರವಿರುವುದು ಆರ್ಥಿಕ, ಸಾಮಾಜಿಕ ಮೂಲಸೌಲಭ್ಯ ಅಭಿವೃದ್ಧಿಯಲ್ಲಿ ಸಾರ್ವಜನಿಕ ಬಂಡವಾಳ ಹೂಡುವುದು ಮತ್ತೊಂದೆಡೆ ಉದ್ಯೋಗ ನಿರ್ಮಾಣ ಕ್ರಮಗಳ ಮೂಲಕ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದು.

ಆದರೆ ಅಮೆರಿಕನ್ ಸಾಮ್ರಾಜ್ಯಶಾಹಿ ಗುಲಾಮ ಬಿಜೆಪಿ ಸರ್ಕಾರ ಇದಕ್ಕೆ ಸಿದ್ಧವಿಲ್ಲ. ಇದು ಭಾರತೀಯ ಜನರ ಹಿತರಕ್ಷಣೆಗಿಂತ ಸಾಮ್ರಾಜ್ಯಶಾಹಿ ಹಿತರಕ್ಷಣೆಯಲ್ಲೇ ಮಗ್ನವಾಗಿದೆ.

ವಾಜಪೇಯಿಯವರ ಈ ಸುಧಾರಣೆಗಳು ದೇಶದ ಸ್ವಾವಲಂಬನೆಯ ಕಣ್ಣೋಟಕ್ಕೆ ಮತ್ತು ಬಹುಸಂಖ್ಯಾತ ಭಾರತೀಯ ಜನರ ಹಿತಕ್ಕೆ ವಿರುದ್ಧವಾಗಿವೆ.

ಮುಗಿಸಲಾಗುತ್ತದೆ. ಇದನ್ನು 'ಡಂಪಿಂಗ್ ಮತ್ತು ಡಿಸ್ಕೌಂಟ್ ಸೇಲ್" ಎಂದು ಕರೆಯಲಾಗುವುದು. ಈ ಕಪ್ಪು ವ್ಯವಹಾರದಲ್ಲಿ ದೇಶದ ಅನೇಕ ಹೆಸರಾಂತ ಔಷಧ ಕಂಪನಿಗಳು ಭಾಗಿಯಾಗಿವೆ. ಅನೇಕ ನಗರಗಳಲ್ಲಿ ಔಷಧ ವ್ಯಾಪಾರದ ಹೆಸರಾಂತ ಮಾರುಕಟ್ಟೆ ಕೇಂದ್ರಗಳಾಗಿ ಪ್ರಚಾರವನ್ನು ಗಿಟ್ಟಿಸಿಕೊಂಡಿವೆ.

ಸ್ವಾತಂತ್ರ್ಯ ನಂತರ ಭೂಗತ ದೊರೆಗಳು ಮಾಫಿಯಾ ತಂಡಗಳು, ಕಳ್ಳಸಾಗಾಣಿಕೆದಾರರು ಬಂಗಾರದ ವ್ಯಾಪಾರ, ತದನಂತರ ಮಾದಕ - ಔಷಧಗಳ ವ್ಯಾಪಾರ, ನಕಲಿ ನೋಟುಗಳ ವ್ಯವಹಾರ ಮುಂತಾದವುಗಳಲ್ಲಿ ಭಾಗಿಯಾಗುತ್ತಿದ್ದರು. ಈ ವ್ಯವಹಾರದಲ್ಲಿ ಹಲವಾರು ಬಾರಿ ಪೊಲೀಸ್‌ರಿಂದ ಗಡಿರಕ್ಷಕರಿಂದ, ತೆರಿಗೆ ಇಲಾಖೆಗಳಿಂದ ಇವರೆಲ್ಲರ ಭಾಗಿತ್ವ ಈ ಔಷಧ ವ್ಯಾಪಾರ ಕ್ಷೇತ್ರದಲ್ಲಿ ದಾಳಿಯಿಟ್ಟಿರುವುದು ಒಂದು ಅಪಾಯಕಾರಿ ಬೆಳವಣಿಗೆಯಾಗಿದೆ. ನಿರಾತಂಕವಾಗಿ ಯಾರ ಗಮನವನ್ನು ಸೆಳೆಯದೆ ಈ ಕಪ್ಪು ವ್ಯವಹಾರವನ್ನು ಮಾಡುತ್ತಿದ್ದಾರೆ.

ಔಷಧ ಪ್ರತಿನಿಧಿಗಳ ಫೆಡರೇಶನ್‌ನ (ಎಫ್.ಎಂ.ಆರ್.ಎ.ಐ) ಸತತ ಹೋರಾಟ, ಮುಷ್ಕರ, ಧರಣಿ ಸತ್ಯಾಗ್ರಹ, ಪ್ರಚಾರದಿಂದಾಗಿ ಕೇಂದ್ರ ಸರಕಾರ ಕಳೆದ ವರ್ಷ ಫೆಬ್ರವರಿಯಲ್ಲಿ ಈ ಕಪ್ಪು ವ್ಯವಹಾರದ ತನಿಖೆಗೆ ಸಿಬಿಐಗೆ ಒಪ್ಪಿಸಿದೆ. ಆದರೂ ಕೂಡ ಇಂದಿನವರೆಗೂ ಸಿಬಿಐ ತನಿಖೆ ಪ್ರಾರಂಭವಾಗಿಲ್ಲ. ಔಷಧ ಪ್ರತಿನಿಧಿಗಳ ಫೆಡರೇಶನ್‌ನ ಉಪಾಧ್ಯಕ್ಷರಾದ ಕಾಂ। ಜೆ.ಎಸ್. ಮಜುಮದಾರ ಪಾಟ್ನಾದ ಹೈಕೋರ್ಟನಲ್ಲಿ ಜನ ಔಷಧ ಕಂಪನಿಗಳಿಂದ ನಡೆಯುತ್ತಿರುವ ಈ ಕಪ್ಪು ವ್ಯವಹಾರ ವಿರುದ್ಧ ಇಂದು ದೇಶದಾದ್ಯಂತ ಔಷಧ ಪ್ರತಿನಿಧಿಗಳ ಸಂಘಟನೆ ಕಂಪನಿಯ ಒಳಗೂ-ಹೊರಗೂ ಅತಿ ದೊಡ್ಡ ಹೋರಾಟವನ್ನು ರೂಪಿಸಿ ಕಾರ್ಯಗತಗೊಳಿಸುತ್ತಿದೆ. ಇಡಿ ರಾಷ್ಟ್ರದ ಗಮನವನ್ನು ಸೆಳೆಯಲು ಈ ವಿಷಯ ಕುರಿತು ಒಂದು ಕೋಟಿ ಹಸ್ತಾಕ್ಷರ ಸಂಗ್ರಹ ಕಾರ್ಯಕ್ರಮವು ನಡೆದಿದ್ದು, ತಿಂಗಳ ಕೊನೆಯಲ್ಲಿ ಮಾನ್ಯ ರಾಷ್ಟ್ರಪತಿಗಳಿಗೆ ಒಪ್ಪಿಸಲಾಗುವುದು. ಜನಸಾಮಾನ್ಯರು ಖರೀದಿಸಿದ ಪ್ರತಿಯೊಂದು ಔಷದಕ್ಕೂ ರಶೀದಿ (ಬಿಲ್ಲ) ಕಡ್ಡಾಯವಾಗಿ ತೆಗೆದುಕೊಳ್ಳಲು ಮನವಿ ಮಾಡಿಕೊಳ್ಳಲಾಗುತ್ತಿದೆ. ಇದರಿಂದ ಮುಂದೆ ಯಾವುದೇ ರೀತಿ ಹಾನಿಯನ್ನು ತಪ್ಪಿಸಬಹುದಾಗಿದೆ.

ಸಿ ಪಿ ಐ(ಎಂ) 17ನೇ ಕರ್ನಾಟಕ ರಾಜ್ಯ ಸಮ್ಮೇಳನ

ಜಾಗತೀಕರಣ - ಕೋಮುವಾದದ ವಿನಾಶಕಾರಿ ನೀತಿಗಳ ವಿರುದ್ಧದ ಹೋರಾಟದಲ್ಲಿ ಸಿಪಿಐ(ಎಂ)

1998ರ 16ನೇ ರಾಜ್ಯ ಸಮ್ಮೇಳನದ ಈಚೆಗಿನ ಅವಧಿಯಲ್ಲಿ ಸಿಪಿಐ(ಎಂ) ಪಕ್ಷವು ನಡೆಸಿದ ರಾಜಕೀಯ ಮಧ್ಯಪ್ರವೇಶದ ಕಿರು ನೋಟ ಇಲ್ಲಿದೆ.

ರಾಜ್ಯದಲ್ಲಿ ಕೋಮುವಾದದ ವಿರುದ್ಧ ದೃಢವಾದ ಹೋರಾಟ ನಡೆಸುತ್ತಾ ಬಂದಿರುವುದು ಸಿಪಿಐ(ಎಂ) ಮಾತ್ರ. ಅಲ್ಲದೆ ಹಿಂದಿನ ಸಮ್ಮೇಳನಗಳ ಅವಧಿಗಿಂತಲೂ ಕೋಲಾರ ಸಮ್ಮೇಳನದ ನಂತರ ಕೋಮುವಾದದ ವಿರುದ್ಧ ಪಕ್ಷ ನಿರಂತರವಾಗಿ ಮಧ್ಯಪ್ರವೇಶ ಮಾಡಿದೆ. ಕೋಮು ಉದ್ರೇಕದ ಘಟನೆಗಳ ಪ್ರತಿ ಸಂದರ್ಭದಲ್ಲಿಯೂ ಪತ್ರಿಕಾ ಹೇಳಿಕೆ ನೀಡಲಾಗಿದೆ. ಹಲವು ಬಾರಿ ಕರ್ನಾಟಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಜಿಲ್ಲಾ ಸಮಿತಿಗಳೂ ಕೂಡಾ ಹೆಚ್ಚು ಮುತುವರ್ಜಿಯಿಂದ ಕೋಮು ಘಟನೆಗಳ ಸಂದರ್ಭದಲ್ಲಿ ಮಧ್ಯಪ್ರವೇಶ ಮಾಡಿರುವುದು ಈ ಅವಧಿಯ ಉತ್ತಮ ಬೆಳವಣಿಗೆ.

ಬಾಬಾಬುಡನ್‌ಗಿರಿ ವಿವಾದದ ಜಾಥಾ, ಚಿಕ್ಕಮಗಳೂರು ಕೋಮುಗಲಭೆಗಳು, ಟಿಪ್ಪುಸುಲ್ತಾನ್ ಹುತಾತ್ಮ ದಿನದ 200 ವರ್ಷದ ಆಚರಣೆ, ಮಂಗಳೂರು, ಕೊಡಗಿನ ಸಿದ್ದಾಪುರ, ಸವದತ್ತಿ ಮೊದಲಾದೆಡೆ ಕ್ರಿಶ್ಚಿಯನ್ ಚರ್ಚ್‌ಗಳ ಮೇಲಿನ ಧಾಳಿ ಸಂದರ್ಭಗಳಲ್ಲಿ ಪಕ್ಷದ ಜಿಲ್ಲಾ ಸಮಿತಿಗಳ ನಿಯೋಗಗಳು ಚರ್ಚ್‌ಗಳಿಗೆ ಭೇಟಿ ನೀಡಿವೆ. ಸೌಹಾರ್ದ ಬೆಂಬಲ ವ್ಯಕ್ತಪಡಿಸಿವೆ. ಸಿದ್ದಾಪುರದಲ್ಲಿ 10 ಕಿ.ಮೀ. ಪಾದಯಾತ್ರೆ ಮಾಡಲಾಗಿದೆ. 1999ರ ಜನವರಿ 26ರ ಗಣರಾಜ್ಯೋತ್ಸವ ದಿನದಿಂದ ಹುತಾತ್ಮ ದಿನವಾದ ಜನವರಿ 30ರ ವರೆಗೆ ಪ್ರಚಾರ ಕಾರ್ಯಕ್ರಮಗಳನ್ನು ಸಂಘಟಿಸಲು ಹಾಗೂ ಜನವರಿ 30ರಂದು ಮಾನವ ಸರಪಳಿಗಳು ಹಲವು ಕಡೆ ಯಶಸ್ವಿಯಾಗಿ ನಡೆದಿದೆ. ಮಂಗಳೂರಿನಲ್ಲಿ 7000ಕ್ಕಿಂತ ಹೆಚ್ಚು ಜನರು ಪಾಲ್ಗೊಂಡ ಮಾನವ ಸರಪಳಿ ರಚಿಸಿದ್ದು ಶ್ಲಾಘನಾರ್ಹ.

ಬಿಜಾಪುರ ಜಿಲ್ಲೆಯ ಕೊಲ್ಹಾರ, ಹಾನಗಲ್ ತಾಲೂಕಿನ ಅಕ್ಕಿ ಆಲೂರು, ಕೊಡಗಿನ ಪಾಲೂರು ಬಳಿಯ ಕೋಮುಗಲಭೆಗಳ ಸಂದರ್ಭದಲ್ಲಿ ಜಿಲ್ಲಾ ಸಮಿತಿಗಳು ಪರಿಣಾಮಕಾರಿಯಾಗಿ ಮಧ್ಯಪ್ರವೇಶ ಮಾಡಿವೆ. ಬಿಜಾಪುರ ಜಿಲ್ಲಾ ಸಮಿತಿಯು ಕಾಲ್ನಡಿಗೆ ಜಾಥಾ ನಡೆಸಿ ಹಲವು ಕಡೆ ಬಹಿರಂಗ ಸಭೆಗಳನ್ನು ನಡೆಸಿತು. ಕೊಡಗು ಜಿಲ್ಲಾ ಸಮಿತಿ ನಿರಂತರವಾಗಿ ಮಧ್ಯಪ್ರವೇಶ ಮಾಡಿತು. ಜಾತ್ಯಾತೀತ ಜನತಾದಳದ ನಾಯಕರೊಂದಿಗೆ ನಿಯೋಗ ಹೋಗಿ ಸ್ಥಳಕ್ಕೆ ಭೇಟಿ ನೀಡಿತು. ಸುಮಾರು 10 ಸಾವಿರ ಜನರು ಪಾಲ್ಗೊಂಡ ರ್‍ಯಾಲಿಯನ್ನು ನಡೆಸುವಲ್ಲಿ ಪಕ್ಷ ಯಶಸ್ವಿಯಾಯಿತು. ವಿರಾಜಪೇಟೆಯ ಕೋಮುಗಲಭೆಗಳ ಸಂದರ್ಭದಲ್ಲಿಯೂ ಪಕ್ಷದ ಸಮಿತಿ ಮಧ್ಯಪ್ರವೇಶಿಸಿತು.

ಸುರತ್ಕಲ್, ಮಂಗಳೂರುಗಳು ಕೋಮುಗಲಭೆಗಳ ಸಂದರ್ಭದಲ್ಲಿಯೂ ಪಕ್ಷ. ಜಿಲ್ಲಾ ಸಮಿತಿಯ ನಿಯೋಗ ಭೇಟಿ ಕೊಟ್ಟದ್ದಲ್ಲದೆ ಜನವರಿ 21, 99ರಂದು ಬೃಹತ್ ಮಾನವ ಸರಪಳಿ ರಚಿಸಿತು.

ಗುಲ್ಬರ್ಗದಲ್ಲಿ ಹೈದರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣೆ, ಸರ್ದಾರ್ ಪಟೇಲ್ ಪ್ರತಿಮೆ ಸ್ಥಾಪನೆ ಸಂದರ್ಭದಲ್ಲಿ ಕೋಮು ದ್ವೇಷವನ್ನು ಹಬ್ಬಿಸಲು ಬಿಜೆಪಿಯವರು ಮಾಡಿದ ಪ್ರಯತ್ನಗಳ ವಿರುದ್ಧ ಪಕ್ಷದ ಜಿಲ್ಲಾ ಸಮಿತಿ ಪ್ರತಿ ಸಂದರ್ಭದಲ್ಲಿಯೂ ಮಧ್ಯಪ್ರವೇಶ ಮಾಡಿದೆ. ಪಟೇಲರ ಪ್ರತಿಮೆ ಅನಾವರಣದ ಸಂದರ್ಭದಲ್ಲಿ ಕೇಂದ್ರದ ಗೃಹಮಂತ್ರಿ ಅದ್ವಾನಿಯವರ ಬಹಿರಂಗ ಸಭೆಯಲ್ಲಿ ಪಕ್ಷದ ಕಾರ್ಯಕರ್ತರು ಕರಪತ್ರಗಳನ್ನು ಹಂಚಿ, ಕಪ್ಪು ಭಾವುಟ ತೋರಿಸಿ, ಘೋಷಣೆ ಕೂಗಿ, ಪ್ರತಿಭಟನೆ ನಡೆಸಿ ಬಂಧನಕ್ಕೆ ಒಳಗಾದರು ತೀವ್ರ ಲಾಠಿ ಏಟುಗಳನ್ನು ತಿಂದರು.

ಮೈಸೂರಿನಲ್ಲಿ ಕೋಮುವಾದ ವಿರೋಧಿ ಭಿತ್ತಿಪತ್ರಗಳ ಪ್ರದರ್ಶನ ನಡೆಸುತ್ತಿದ್ದಾಗ ಸಂಘ ಪರಿವಾರ ನಡೆಸಿದ ಧಾಳಿಯ ವಿರುದ್ಧ ಅಲ್ಲಿಯ ಪ್ರಾದೇಶಿಕ ಸಮಿತಿ ಪ್ರತಿಭಟಿಸಿದೆ.

ಜಾಗತೀಕರಣ, ಖಾಸಗೀಕರಣ ವಿರೋಧಿ ಚಳುವಳಿಯಲ್ಲಿ ಪಾತ್ರ

1991ರಲ್ಲಿ ಜಾಗತೀಕರಣ ನೀತಿಗಳು ಆರಂಭವಾದಂದಿನಿಂದಲೂ ಗ್ಯಾಟ್ ಒಪ್ಪಂದ ಉರುಗ್ವೇ ಸುತ್ತಿನ ಒಪ್ಪಂದದ ಮಾತುಕತೆಗಳ ಸಮಯದಲ್ಲಿಯೂ ಪಕ್ಷ ನಡೆಸಿದ ಪ್ರಚಾರ, ಚಳುವಳಿಗಳು, ಅಲ್ಲಿಂದ ನಿರಂತರವಾಗಿ ಪಕ್ಷ ಹಾಗೂ ವಿವಿಧ ಸಾಮೂಹಿಕ ಸಂಘಟನೆಗಳು ನಡೆಸುತ್ತಿರುವ ಹೋರಾಟಗಳು ಇಂದು ನಮಗೆ ಜನರ ಗೌರವವನ್ನು ತಂದುಕೊಟ್ಟಿವೆ. ಇಂತಹ ಜಾಗತೀಕರಣ ನೀತಿಯ ವಿರುದ್ಧ ಸರಿಯಾದ ತಿಳುವಳಿಕೆ, ಆಳವಾದ ಜ್ಞಾನ ಮತ್ತು ವ್ಯಾಪಕ ಪ್ರಚಾರ ಮಾಡಿದವರು, ಮಾಡುತ್ತಿರುವವರು ಮತ್ತು ದೃಢವಾದ ಹೋರಾಟಗಳನ್ನು ನಡೆಸುತ್ತಿರುವವರು ಸಿಪಿಐ(ಎಂ) ಪಕ್ಷದ ಕಾರ್ಯಕರ್ತರೇ.

ಇವುಗಳಲ್ಲಿ ರಾಜಕೀಯವಾಗಿ ಪರಿಣಾಮ ಬೀರಿದ ಹೋರಾಟಗಳೆಂದರೆ ಕರ್ನಾಟಕ ಪ್ರಾಂತ ರೈತ ಸಂಘ, ಕೂಲಿಕಾರ ಸಂಘಗಳು, ಕರ್ನಾಟಕ ರಾಜ್ಯರೈತ ಸಂಘ, ಅಖಿಲ ಭಾರತ ಕಿಸಾನ್ ಸಭಾ(ಸಿಪಿಐ)ದ ಜೊತೆಗೂಡಿ ನಡೆಸಿದ ಫೆಬ್ರವರಿ ಚಳುವಳಿ, ಅದಕ್ಕೆ ಮೊದಲು ನಡೆಸಿದ ಪ್ರಚಾರ ಹಾಗೂ ಸಮಾವೇಶಗಳು, ಈ ಚಳುವಳಿಯ ಸಂದರ್ಭದಲ್ಲಿ 6 ಜಿಲ್ಲೆಗಳಲ್ಲಿ ಬಂದ್ ಸಂಘಟಿಸಿದ್ದು ಉಲ್ಲೇಖನಾರ್ಹ. ಈ ಚಳುವಳಿಗಳು ಕರ್ನಾಟಕ ಸರ್ಕಾರದ ಮೇಲೆ ಪ್ರಭಾವ ಬೀರುವಂತಾಗಿ ಮೇಲೆ ಹೇಳಿದಂತೆ ಕೆಲವು ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರ ಮುಂದಾಗಬೇಕಾಯಿತು.

ಹಾಗೆಯೇ ಎನ್‌ಪಿಎಂಓ ನೇತೃತ್ವದ ಚಳುವಳಿಗಳು, ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯ ಚಳುವಳಿಗಳು ರಾಜ್ಯಾದ್ಯಂತ ದುಡಿಯುವ ಜನರ ಮೇಲೆ ಪರಿಣಾಮ ಬೀರಿದವು. ಜಾಗತೀಕರಣದ ಬಗ್ಗೆ ಎಚ್ಚರ ಮೂಡಿಸಿದವು. ಬಿಜೆಪಿ, ಕಾಂಗ್ರೆಸ್ ಪಕ್ಷಗಳ ನೇತೃತ್ವದ ಕಾರ್ಮಿಕ ಸಂಘಗಳು ಸಹ ಒಂದೇ ವೇದಿಕೆಗೆ ಬರಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿದವು.

ಶಿಕ್ಷಣದ ಖಾಸಗೀಕರಣ, ಶುಲ್ಕ ಏರಿಕೆ, ಗ್ರಾಮಾಂತರ ಅಭ್ಯರ್ಥಿ ಗಳ ಮೀಸಲಾತಿ ಇವುಗಳ ವಿರುದ್ಧವೂ ವಿದ್ಯಾರ್ಥಿಗಳಿಂದ ತರಗತಿ ಬಹಿಷ್ಕಾರ ದಂತಹ ಚಳುವಳಿಗಳು ವ್ಯಾಪಕವಾಗಿ ನಡೆದಿವೆ. ಶುಲ್ಕ ಏರಿಕೆಗಳನ್ನು ಭಾಗಶಃ ಹಿಂತೆಗೆದು ಕೊಳ್ಳಲಾಗಿದೆ. ಆದರೆ ಜಾಗತೀಕರಣ ಪ್ರಶ್ನೆಗಳ ಮೇಲೆ ಪಕ್ಷವೇ ನೇರವಾಗಿ ಚಳುವಳಿಗಿಳಿದಿದ್ದು ಅಪರೂಪ.

ಪಡಿತರ ವ್ಯವಸ್ಥೆಯ ರಕ್ಷಣೆಗಾಗಿ ಫೆಬ್ರವರಿ 99ರಲ್ಲಿ ಕೇಂದ್ರ ಸರ್ಕಾರದ ಕಚೇರಿಗಳ ಮುಂದೆ ಪ್ರತಿಭಟನೆಗಳನ್ನು ಪಕ್ಷದ ರಾಜ್ಯ



ಸಂದರ್ಭದಲ್ಲಿ ಗುಲ್ಬರ್ಗಾ ನಗರ ಬಂದ್ ಆಯಿತು. ಹಾಗೇ ಇತ್ತೀಚಿಗಿನ ರಾಮದುರ್ಗದಲ್ಲಿ ಪಕ್ಷ ನಡೆಸಿದ ವ್ಯಾಪಕ ಜನಾಂದೋಲನ ಗಮನಾರ್ಹ.

ಆಮದುಗಳಿಂದ ಬೆಲೆ ಕುಸಿತವಾದ ಸಂದರ್ಭದಲ್ಲಿ ಪಕ್ಷದ ದ.ಕ. ಜಿಲ್ಲಾ ಸಮಿತಿ ಮುತುವರ್ಜಿ ವಹಿಸಿ ಜಿಲ್ಲೆಯಲ್ಲಿ ಜಾಥಾ ನಡೆಸಿತು. ದೊಡ್ಡ ರ್‍ಯಾಲಿಯೊಂದನ್ನು ಸಂಘಟಿಸಿತು. ಪಕ್ಷವೇ ನೇರವಾಗಿ ಜಾಗತೀಕರಣ ನೀತಿಗಳ ಪರಿಣಾಮಗಳ ವಿರುದ್ಧ ಚಳುವಳಿಗಳನ್ನು ಸಂಘಟಿಸಬೇಕಾಗಿದೆ. ಈ ನೀತಿಗಳ ಬಗ್ಗೆ ಪಕ್ಷದ ದೃಷ್ಟಿಕೋನ, ಪರ್ಯಾಯ ಆರ್ಥಿಕ ನೀತಿಗಳು, ಅದಕ್ಕಾಗಿ ಹೋರಾಟ ನಡೆಸುತ್ತಾ ಎಡ ಪ್ರಜಾಸತ್ತಾತ್ಮಕ ರಂಗವನ್ನು ಕಟ್ಟುವ ಹೊಣೆಗಾರಿಕೆಯನ್ನು ನೆರವೇರಿಸಬೇಕಾಗಿದೆ.

ರಾಜಕೀಯ ಆಂದೋಲನಗಳು


ಸಿಪಿಐ(ಎಂ) ಕೇಂದ್ರ ಸಮಿತಿಯ ಕರೆಯಂತೆ ಮೂರು ಮುಖ್ಯವಾದ ರಾಜಕೀಯ ಆಂದೋಲನಗಳು ನಡೆಸಲಾಗಿದೆ. ಸೆಪ್ಟೆಂಬರ್ 16, 1998ರಂದು ವಾಜಪೇಯಿ ನೇತೃತ್ವದ ಎನ್.ಡಿ.ಎ. ಸರ್ಕಾರದ ಆರ್ಥಿಕನೀತಿ ಮತ್ತು ಕೋಮುವಾದದ ವಿರುದ್ಧ ಜಿಲ್ಲಾ ಕೇಂದ್ರಗಳಲ್ಲಿ ಯಶಸ್ವಿಯಾದ ರ್‍ಯಾಲಿಗಳನ್ನು ಸಂಘಟಿಸಲಾಗಿದೆ.

ಎನ್.ಡಿ.ಎ. ಸರ್ಕಾರದ ಒಂದು ವರ್ಷ ಪೂರೈಸುತ್ತಿರುವಾಗ ವಿನಾಶಕಾರಿ ಆಡಳಿತ ವಿರುದ್ಧ 99ರ ಏಪ್ರಿಲ್ 1 ರಿಂದ 15ರವರೆಗೆ ಬಹಿರಂಗ ಸಭೆಗಳನ್ನು ಡನೆಸಿ ಪ್ರಚಾರಿಸಲಾಗಿದೆ. ಜಾಥಾಗಳು ನಡೆದವು. ಸೀತಾರಾಂ ಯೆಚೂರಿಯವರ ಕಿರುಹೊತ್ತಿಗೆ ಸಾವಿರಾರು ಪ್ರತಿ ಮಾರಾಟ ಆದವು.

ಜನವಿರೋಧಿ ನೀತಿಗಳನ್ನು ಹಿಂತೆಗೆದುಕೊಳ್ಳಿ ಇಲ್ಲವೇ ಅಧಿಕಾರದಿಂದ ತೊಲಗಿ ಎಂದು ಕೇಂದ್ರ ಸರ್ಕಾರವನ್ನು ಆಗ್ರಹಿಸಿ 2000ದ ಸೆಪ್ಟೆಂಬರ್ 7-21ರವರೆಗೆ ಪ್ರಚಾರಾಂದೋಲನ ಸೆಪ್ಟೆ-25 ರಿಂದ 27ರವರೆಗೆ ಕೇಂದ್ರ ಸರ್ಕಾರದ ಕಛೇರಿ ಪಿಕೆಟಿಂಗ್, ಸುಮಾರು 50 ಸಾವಿರ ಜನರು ಭಾಗವಹಿಸಿ ಬಂಧನಕ್ಕೆ ಒಳಗಾದರು.

ಬಳ್ಳಾರಿಯೆಲ್ಲಾ ಕೆಂಪು .... ಬಹಿರಂಗ ಸಭೆಯಲ್ಲಿ





ಕೆಂಬಾವುಟದ ಹಿಂದೆ......

ಪುಸ್ತಕವನ್ನು ಆಗಾಧವಾಗಿ ಪ್ರೀತಿಸುವ ಸಿ. ಚನ್ನಬಸವಣ್ಣ ಅವರ ಮನೆಯಲ್ಲಿ ಕುಳಿತಿದ್ದೆ. ಪಕ್ಕದ ಮನೆಯ ಮಾಲೀಕರು ಭಾರೀ ಗಡಿಬಿಡಿಯಲ್ಲಿದ್ದರು. ಚನ್ನಬಸಣ್ಣ ಕೂಗಿ ಕೇಳಿದರು ಏನು ಇವತ್ತು ತುಂಬಾ ಬೇಗಾನೆ ಹೊರಬಿದ್ದಿರಿ. ಪಕ್ಕದ ಮನೆಯಾತ ಇವರ ಮಹಡಿ ಏರಿ ಬಂದು ಹೇಳಿದರು. ಏನು ಇಲ್ಲ ನಿನ್ನೆ ಎನೂ ಕೆಲಸಾನೇ ಇಲ್ಲ. ಚನ್ನಬಸಣ್ಣ ಅವರಿಗೆ ದಿನದ ಲೆಕ್ಕ ತಪ್ಪಿತು. ನಿನ್ನೆ ಭಾನುವಾರ ಅಲ್ವಲ್ಲಾ ಎಂದರು. ಹೌದು ನಿನ್ನೆ ಸೋಮವಾರವೇ ಆದರೆ ಏನು ಮಾಡೋದು ಶಾದಿ ಮಹಲ್‌ನಲ್ಲಿ ಒಂದು ಸಮ್ಮೇಳನ ನಡೀತಿದೆ. ಕೆಂಬಾವುಟದವರದ್ದು, ಅಲ್ಲಿ ಕೆಂಬಾವುಟ ಇರುವಾಗ ನಮ್ಮಲ್ಲಿ ಹೇಗೆ ವ್ಯಾಪಾರ ಆಗಬೇಕು ಎಂದು ಸಮಸ್ಯೆ ಬಿಡಿಸಿಟ್ಟರು.

ಪಕ್ಕದ ಮನೆಯಾತ ಕಮಿಷನ್ ಏಜೆಂಟ್ ರೈತರಿಂದ ಬೆಳೆ ಸಂಗ್ರಹಿಸಿ ಕಮಿಷನ್‌ಗೆ ಮಾರುವಾತ. ಪಾಪ ಆತನ ಅಂಗಡಿಯಲ್ಲಿ ರೈತರು ಬೆಳೆ ಆ ದಿನ ತರಲಿಲ್ಲ. ತಂದರೂ ಅದನ್ನು ತೂಗಲು, ಚೀಲದಲ್ಲಿ ಕಟ್ಟಲು, ಗೋದಾಮಿನಲ್ಲಿ ಜೋಡಿಸಲು ಯಾರೊಬ್ಬರೂ ಇಲ್ಲ, ಎಲ್ಲರೂ ದುಡಿಯುವ ವರ್ಗದ ನೋವುಗಳಿಗೆ ಉಸಿರುಕೊಡುವ ಪಕ್ಷದ ಸಮ್ಮೇಳನದ ಜೊತೆಗಿತ್ತು. 17ನೆಯ ರಾಜ್ಯ ಸಮ್ಮೇಳನ ನಮ್ಮ ಊರಲ್ಲಿ ನಡೆಯುವಾಗ ನಾವು ಅಲ್ಲಿರಬೇಕು ಎಂಬ ಭಾವನೆ ಪ್ರತಿಯೊಬ್ಬರಲ್ಲಿತ್ತು. ಸಮ್ಮೇಳನದ ಮೊದಲ ದಿನ ಮೆರವಣಿಗೆ ನಡೆಯುವಾಗ ಹೋರಾಟದ ಸಾಗರಕ್ಕೆ ಪ್ರತಿಯೊಬ್ಬರೂ ಹೆಜ್ಜೆ ಹಾಕಿಬಿಟ್ಟಿದ್ದರು.

ಪಾಪ, ಕಮಿಷನ್ ಏಜೆಂಟರು ಸುಮಾರು ಹೊತ್ತು ನೊಣ ಹೊಡೆದು ಮನೆಗೆ ಬಂದು ಮೈ ಚೆಲ್ಲಿದ್ದರು ಕೂಲಿಕಾರರು ಕೆಂಬಾವುಟದ ಹಿಂದಿದ್ದರು. ಕಮಿಷನ್ ಏಜೆಂಟರು ಹಾಸಿಗೆಯಲ್ಲಿ ಮೈಯ್ಯೊಡ್ಡಿದ್ದರು.

17ನೇ ರಾಜ್ಯ ಸಮ್ಮೇಳನದ ನಿರ್ಣಯಗಳು

ರಾಜ್ಯದ ಜನರನ್ನು ಬಾಧಿಸುತ್ತಿರುವ ಸಮಸ್ಯೆಗಳು, ಕರ್ನಾಟಕದ ಅಭಿವೃದ್ಧಿ ಪ್ರಮುಖ ರಾಷ್ಟ್ರೀಯ - ಅಂತರ್ರಾಷ್ಟ್ರೀಯ ಬೆಳವಣಿಗೆಗಳನ್ನು ಪರಿಶೀಲಿಸಿ-ಆ ಬಗ್ಗೆ ಹಲವು ನಿರ್ಣಯಗಳನ್ನು ಚರ್ಚಿಸಿ ಅಂಗೀಕರಿಸಿತು. ನಿರ್ಣಯಗಳ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ಕರ್ನಾಟಕ ಜಲಸಂಪನ್ಮೂಲ ಬಳಸಿಕೊಳ್ಳಲು ಒತ್ತಾಯ

ಕರ್ನಾಟಕ ಜಲಸಂಪನ್ಮೂಲ ಬಳಸಿಕೊಳ್ಳುವ ಸಾಧ್ಯತೆಗಳ ಬಗ್ಗೆ ವಿವರ ಒದಗಿಸಿ, ಈ ಬಗ್ಗೆ ಇರುವ ಎಡರು-ತೊಡರುಗಳ ಬಗ್ಗೆ ನಿರ್ಣಯ ರಾಜ್ಯದ ಜನತೆಯ ಗಮನ ಸೆಳೆದಿದೆ. ಎಲ್ಲಾ ಏಳು ನದಿ ಕಣಿವೆಗಳಿಂದ ಒಟ್ಟು 3440 ಟಿಎಂಸಿ ನೀರು ಬಳಕೆಯ ಸಾಧ್ಯತೆ ಇದೆ. ಇದರಿಂದ ಕರ್ನಾಟಕದ 107 ಲಕ್ಷ ಹೆಕ್ಟಾರ್ ಸಾಗುವಳಿ ಯೋಗ್ಯ ಭೂಮಿಯ ಅರ್ಧದಷ್ಟು ಭೂಮಿಯನ್ನು (ಸುಮಾರು 55 ಲಕ್ಷ ಹೆಕ್ಟಾರ್) ನೀರಾವರಿಗೆ ಅಳವಡಿಸಬಹುದು. ಆದರೆ ಸ್ವಾತಂತ್ರ್ಯ ನಂತರ ಲಭ್ಯವಿರುವ ಅರ್ಧದಷ್ಟು ನೀರು ಬಳಸಿಕೊಂಡು ಕೇವಲ 25 ಲಕ್ಷ ಹೆಕ್ಟಾರ್ ಭೂಮಿ ಮಾತ್ರ ನೀರಾವರಿಗೆ ಒಳಪಡಿಸಲಾಗಿದೆ.

ಪ್ರಾರಂಭಿಸಿದ ಕೆಲವು ಯೋಜನೆಗಳು (ಉದಾ: ಘಟಪ್ರಭಾ, ಹೇಮಾವತಿ, ಆಲಮಟ್ಟಿ ಆಣೆಕಟ್ಟು) ಅರೆಬರೆಯಾಗಿ ನಿಂತಿವೆ. ಪ್ರಾರಂಭಿಸಿದ ಯೋಜನೆಗಳಲ್ಲಿ ವ್ಯಾಪಕವಾದ ಭ್ರಷ್ಟಾಚಾರದ ಹಗರಣಗಳು (ಉದಾ: ವಿಶ್ವೇಶ್ವರಯ್ಯ ನಾಲಾ, ಜೇವರ್ಗಿ ಬ್ರಾಂಚ್ ಕಾಲುವೆ, ಮಾಡಬೂಳ ಬ್ರಾಂಚ್ ಚಾನೆಲ್, ನಾರಾಯಣಪುರ ಬಲದಂಡೆ ಕಾಲುವೆ) ಕಳಪೆ ಕಾಮಗಾರಿಗಳಿಂದ ನೀರು ಬಳಸಿಕೊಳ್ಳುವಲ್ಲಿ ಕೊರತೆ ಬಂದಿದೆ. ವಿಶ್ವಬ್ಯಾಂಕ್ ಬಂಡವಾಳ ಮಾರುಕಟ್ಟೆಯಲ್ಲಿ ಸಾಲ ಎತ್ತ ತೊಡಗಿದೆ. ಹಣ ಕೊಟ್ಟವರಿಗೆ ಮಾತ್ರ ನೀರು ಎಂಬ ನೀತಿಯನ್ನು ಸರಕಾರೀಕರಣದ ಹೆಸರಲ್ಲಿ ತರತೊಡಗಿದೆ.

ಈ ಹಿನ್ನೆಲೆಯಲ್ಲಿ ಜಲಸಂಪನ್ಮೂಲದ ಪೂರ್ಣ ಬಳಕೆಗೆ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸಿದೆ.

ಅ. ಕರ್ನಾಟದ 19 ಜಿಲ್ಲೆಗಳಲ್ಲಿ ಹರಿಯುವ ಕೃಷ್ಣಾ ಕಣಿವೆ ನೀರು ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ರಾಜ್ಯಗಳಲ್ಲಿ ಹಂಚಿಕೆಯಾಗಲು ಅನುಕೂಲವಾಗುವಂತೆ ಕೃಷ್ಣಾ ಕಣಿವೆ ಪ್ರಾಧಿಕಾರ ಕೇಂದ್ರ ಸರ್ಕಾರ ರಚಿಸಬೇಕು.

ಆ. ಕೃಷ್ಣಾ ಕಣಿವೆಯಲ್ಲಿ ಬಹಳಷ್ಟು ಯೋಜನೆ ಅಪೂರ್ಣವಾದ್ದರಿಂದ ಅವುಗಳನ್ನು ಪೂರ್ತಿ ಮಾಡಬೇಕು. ಬಚಾವತ್ ಬಿ ಅವಾರ್ಡನಂತೆ ಲಭ್ಯವಾಗುವ 278 ಟಿಎಂಸಿ ನೀರು ಬಳಸಿಕೊಳ್ಳಲು ಯೋಜನೆಗಳನ್ನು ರೂಪಿಸಬೇಕು. ಗೋದಾವರಿ ಕಣಿವೆ ಪಾಲಿನ 23 ಟಿಎಂಸಿ ನೀರು ಬಳಸಿಕೊಳ್ಳಲು ಸಾಧ್ಯವಾಗಬೇಕು. ಕಾವೇರಿ ಕಣಿವೆಗಳಲ್ಲಿ



ಧ್ವಜಾರೋಹಣದ ನಂತರ ಮಾತನಾಡುತ್ತಿರುವ ಪಕ್ಷದ ಹಿರಿಯ ಸಂಗಾತಿ ಕಾಂ.ಎಂ.ಎನ್.ಉಗ್ರಪ್ಪ

ಕೈಗಾರಿಕಾ ಪರಿಸ್ಥಿತಿ

ಕರ್ನಾಟಕದ ನೂತನ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳು ಹಾಗೂ ಉದಾರೀಕರಣದಿಂದ, ಕೈಗಾರಿಕೆಗಳನ್ನು ಅವನತಿಯಡೆಗೆ ತಳ್ಳಿದೆ ಎಂದು ಕೈಗಾರಿಕಾ ಪರಿಸ್ಥಿತಿ ಮೇಲಿನ ನಿರ್ಣಯ ತೀಕ್ಷ್ಣವಾಗಿ ಹೇಳಿದೆ.

ಒಂದು ಶತಮಾನದ ದೃಢ ಮತ್ತು ಚೈತನ್ಯಶಾಲಿ ಕೈಗಾರಿಕಾ ಬುನಾದಿ ಇದ್ದ ಮತ್ತು ಸ್ವಾತಂತ್ರ್ಯನಂತರ ಬೆಳೆದ ಸಾರ್ವಜನಿಕ ಕ್ಷೇತ್ರದ, ಖಾಸಗಿ ಉದ್ಯಮಗಳು ಮತ್ತು ಲಕ್ಷಾಂತರ ಸಣ್ಣ ಪ್ರಮಾಣದ ಘಟಕಗಳು ಮುಚ್ಚಿವೆ ಅಥವಾ ಮುಚ್ಚುವ ಸ್ಥಿತಿಯಲ್ಲಿವೆ. ಕೋಲಾರದ ಚಿನ್ನದ ಗಣಿ, ಹರಿಹರದ ಮೈಸೂರು ಕಿರ್ಲೋಸ್ಕರ್, ಬೆಂಗಳೂರಿನ ಮೈಸೂರು ಲ್ಯಾಂಪ್ಸ್ ಹಲವಾರು ಜವಳಿ ಗಿರಣಿಗಳು ಮುಚ್ಚಿರುವ ಪ್ರಮುಖ ಉದ್ಯಮಗಳು ಎಂದು ಕೈಗಾರಿಕಾ ಪರಿಸ್ಥಿತಿಯ ಭೀಕರತೆಯನ್ನು ಜನತೆ ಮುಂದೆ ಇಟ್ಟಿದೆ ನಿರ್ಣಯ.

ಹತ್ತು ವರ್ಷಗಳ ಉದಾರೀಕರಣದಿಂದ ನೂರು ವರ್ಷಗಳ ಚರಿತ್ರೆ ಇರುವ ಜವಳಿ ಉತ್ಪನ್ನಗಳ ಶೇಕಡಾ 40 ಭಾಗ, ಶೇಕಡಾ 16 ಕ್ಕೆ ಕುಸಿದಿದ್ದು, 30 ವರ್ಷಗಳಿಂದ ಪ್ರಬಲವಾದ ಇಂಜಿನಿಯರಿಂಗ್ ಘಟಕಗಳು ಶೇಕಡಾ 25 ಪಾಲಿನಿಂದ ಶೇಕಡಾ 16 ಕ್ಕೆ ಕುಸಿದಿವೆ. ಈ ಅವಧಿಯಲ್ಲಿ ಬೆಳೆದ ಮಾಹಿತಿ ತಂತ್ರಜ್ಞಾನ ಸಹ ಸಾಮಾನ್ಯ ಕೈಗಾರಿಕಾ ಅಭಿವೃದ್ಧಿಗೆ ಪೂರಕವಾಗಿ ಬೆಳೆದಿಲ್ಲ. ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಮಾತ್ರ ಬೆಳೆದು, ಹಾರ್ಡ್‌ವೇರ್ ಕ್ಷೇತ್ರವನ್ನು ಪೂರ್ತಿಯಾಗಿ ಕಡೆಗಣಿಸಲಾಗಿದೆ. ಜಾಗತಿಕ ಹಿಂಜರಿತ ಸಾಫ್ಟ್‌ವೇರ್ ಕ್ಷೇತ್ರವನ್ನು ಬಾಧಿಸುತ್ತಿದೆ ಎಂದು ನಿರ್ಣಯ ಸ್ಥಿತಿಯತ್ತ ಗಮನ ಸೆಳೆದಿದೆ.

ಇಂತಹ ಭೀಕರ ಸ್ಥಿತಿಯನ್ನು ಹೋಗಲಾಡಿಸಿ ಕೈಗಾರಿಕೆಗೆ ಚೈತನ್ಯ ತುಂಬುವ ಕೆಲಸಕ್ಕೆ ಕಾರ್ಮಿಕರ ವರ್ಗ ಮುಂಚೂಣಿಯಲ್ಲಿ ನಿಂತು ಹೋರಾಡಲು ನಿರ್ಣಯ ಕರೆ ಕೊಡುತ್ತದೆ.

ಸಮ್ಮೇಳನವು ಹಲವಾರು ಪ್ರಮುಖ ನಿರ್ಣಯಗಳನ್ನು ಕೈಗೊಂಡಿದೆ. ಇದರಲ್ಲಿ ಕೆಲವು ನಿರ್ಣಯಗಳು ಜನತೆಯ ವ್ಯಾಪಕ ಚಳುವಳಿಗೆ ಕರೆ ನೀಡಿದ್ದು ಮುಂದೆ ಸೇರಲಿರುವ ರಾಜ್ಯ ಸಮಿತಿಯು ಅವುಗಳನ್ನು ನಿರ್ದಿಷ್ಟಗೊಳಿಸಲಿದೆ.

ಕಾವೇರಿ ಕಣಿವೆಯಲ್ಲಿನ ಇನ್ನಷ್ಟು ನೀರನ್ನು ಬಳಸಿಕೊಳ್ಳಲು ನೆರೆ ರಾಜ್ಯವಾದ ತಮಿಳುನಾಡಿನೊಂದಿಗೆ ಸೌಹಾರ್ದವಾಗಿ ಮಾತುಕತೆ ನಡೆಸಿ ಕರ್ನಾಟಕದ ನ್ಯಾಯಯುತ ಪಾಲು ಪಡೆಯಲು ಸಾಧ್ಯ. ಪೆನ್ನಾರ, ಪೋಲಾರ ನದಿಗಳಿಂದ 28 ಟಿಎಂಸಿ ನೀರು ಬಳಕೆಯಾಗುವಂತಾಗಬೇಕು.

ಇ. ಪಶ್ಚಿಮ ಘಟ್ಟಗಳಲ್ಲಿ 56,000 ಟಿಎಂಸಿ ನೀರು ಹರಿದು ವ್ಯರ್ಥವಾಗುತ್ತಿದ್ದು, ಆ ಪೈಕಿ ಕನಿಷ್ಟ 1500 ಟಿಎಂಸಿ ನೀರು ಬಳಸಿಕೊಳ್ಳಲು ನೀರಿನ ಹರಿವು ಬದಲಾಯಿಸಿಕೊಳ್ಳಲು ಯೋಜನೆಯನ್ನು ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಕೇಂದ್ರದ ಯೋಜನೆಯನ್ನು ಪರಿಗಣಿಸಿ ಕೇಂದ್ರ ಸರಕಾರ ಹಣ ಒದಗಿಸಬೇಕು.

ಈ. ಜಾಗತಿಕ ಬ್ಯಾಂಕ್, ಐಎಂಎಫ್‌ಗಳ ಒತ್ತಡಕ್ಕೆ ಒಳಗಾಗಿ ಸಹಕಾರೀಕರಣ ಹೆಸರಿನಲ್ಲಿ ಖಾಸಗೀಕರಣ ಮಾಡುವುದನ್ನು ಕೈಬಿಡಬೇಕು.

ಎ. ನೀರಾವರಿ ಯೋಜನೆಗಳಲ್ಲಿ ಭ್ರಷ್ಟಾಚಾರ ತಡೆಯಲು ರೈತ ಸಂಘಟನೆಗಳ, ರಾಜಕೀಯ

ಜನಸಮೂಹದ ಪ್ರ… ಪಕ್ಷದ ಸಂಘಟನೆ ಬ…

ಸಿಪಿಐ(ಎಂ) ಪಕ್ಷದ 17ನೇ ಕರ್ನಾಟಕ ರಾಜ್ಯ ಸಮ್ಮೇಳನ ಇದೇ ಫೆಬ್ರವರಿ 28 ರಿಂದ … ಜರುಗಿತು. ಅಂತರಾಷ್ಟ್ರೀಯ, - ರಾಷ್ಟ್ರೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿರು… ಮಾಡಿಸಿ ವಿವಿಧ ಶಕ್ತಿಗಳ ಬಲಾಬಲಗಳನ್ನು ಆಳವಾಗಿ ವಿಶ್ಲೇಷಿಸಿ, ದುಡಿಯುವ ವರ್ಗದ ಕ್ರಾ… ಸಮ್ಮೇಳನದ ಕರಡು ವರದಿ. ಪ್ರತಿನಿಧಿಗಳು ಚರ್ಚೆ, ಅನುಭವಗಳನ್ನು ಕ್ರೂಡೀಕರಿಸಿದ ಸ… ಸಂಘಟನೆಯನ್ನು ಬಲಿಷ್ಠವಾಗಿ ಕಟ್ಟುವುದು ಅತ್ಯಂತ ಪ್ರಾಶಸ್ತ್ಯದ ಅಂಶಗಳೆಂದು ಘೋಷಿಸಿ…

ರಾಜ್ಯದಲ್ಲಿ ಜನವಿರೋಧಿ ಕಾಂಗ್ರೆಸಿಗೆ ಮತ್ತು ಕೋಮುವಾದಿ ಬಿಜೆಪಿಗೆ ಒಂದು ಬಲಿಷ್ಠವಾದ ಪರ್ಯಾಯವನ್ನು ಕಟ್ಟಲಿಕ್ಕಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ, ಮುಖ್ಯವಾಗಿ ದಕ್ಷಿಣ ಕನ್ನಡ, ಉಡುಪಿ, ಕೋಲಾರ, ಬೆಂಗಳೂರು ಮತ್ತು ಕಲ್ಬುರ್ಗಿಯಂತಹ ಆದ್ಯತೆಯ ಜಿಲ್ಲೆಗಳಲ್ಲಿ ಪಕ್ಷವನ್ನು ಬಲಪಡಿಸಲು ಸರ್ವಾನುಮತದಿಂದ ನಿರ್ಧರಿಸುವ ಮೂಲಕ ಜನವರಿ 28ರಂದು ಕಾಂ. ಪಿ.ರಾಮಚಂದ್ರ ರಾವ್ ನಗರ (ಬಳ್ಳಾರಿ)ದ ಕಾಂ. ಎನ್.ಕೆ ಉಪಾಧ್ಯಾಯ ವೇದಿಕೆಯಲ್ಲಿ ಆರಂಭವಾದ ಪಕ್ಷದ 17ನೇ ರಾಜ್ಯ ಸಮ್ಮೇಳನವು ಜನವರಿ 31 ರಂದು ಯಶಸ್ವಿಯಾಗಿ ಮುಕ್ತಾಯವಾಯಿತು. 16ನೇ ಸಮ್ಮೇಳನವು 4 ವರ್ಷಗಳ ಹಿಂದೆ ಕೋಲಾರ ನಗರದಲ್ಲಿ



ಯಶಸ್ವಿಯಾಗಿ ಜರುಗಿತ್ತು.

ರಾಜ್ಯ ಸಮ್ಮೇಳನದ ಪೂರ್ವಭಾವಿಯಾಗಿ ಎಲ್ಲಾ ಜಿಲ್ಲಾ ಸಮ್ಮೇಳನಗಳು ವಿಧಿವತ್ತಾಗಿ ನಡೆದು ಅಲ್ಲಿಂದ ಚುನಾಯಿತರಾಗಿ ಬಂದಿದ್ದ 220 ಜನಪ್ರತಿನಿಧಿಗಳು ಮತ್ತು 14 ಜನ ವೀಕ್ಷಕರು ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಮ್ಮೇಳನದಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಿಸಿದ 100 ಪುಟಗಳ ಕರಡು ವರದಿ ಮತ್ತು ಅದರ ಮೇಲೆ ಪ್ರತಿನಿಧಿಗಳು ನಡೆಸಿದ ಚರ್ಚೆ ಸಮ್ಮೇಳನದ ಅತ್ಯಂತ ಪ್ರಮುಖ ಕಲಾಪವಾಗಿತ್ತು.

ನಿತ್ಯಾನಂದಸ್ವಾಮಿ

ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಹೋರಾಟ:- ವಿಶ್ಲೇಷಣೆಯ ಅಂಶಗಳು

ವರದಿಯು ಸ್ಪಷ್ಟವಾಗಿ ಗುರುತಿಸಿರುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೀತಿಗಳಿಂದಾಗಿ ರಾಜ್ಯದ ದುಡಿಯುವ ವರ್ಗದ ಜನ ವಿಭಾಗಗಳು ವಿವಿಧ ರೀತಿಯ ಸಂಕಷ್ಟಗಳಿಗೆ ಒಳಗಾಗಿದ್ದಾರೆ. ರಾಜ್ಯದ ಕೈಗಾರಿಕಾ ರಂಗದ ಬೆಳವಣಿಗೆ ಸ್ಥಗಿತವಾಗಿದೆ. ಉದ್ಯೋಗದ ಅವಕಾಶಗಳು ಕಡಿತಗೊಳ್ಳುತ್ತಿವೆ.

ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿನ ಉದ್ಯಮಗಳಲ್ಲಿ 50 ಸಾವಿರಕ್ಕೂ ಹೆಚ್ಚು ಉದ್ಯೋಗಗಳು ಕಡಿತವಾಗಿವೆ. ರಾಜ್ಯ ಸರ್ಕಾರ ಸ್ವಾಮ್ಯದಲ್ಲಿನ ಅನೇಕ ಕೈಗಾರಿಕಾ ಘಟಕಗಳು ಮುಚ್ಚುವಸ್ಥಿತಿಯಲ್ಲಿದ್ದು ಇನ್ನೂ ಸಾವಿರಾರು ಕಾರ್ಮಿಕರು ಕೆಲಸ ಕಳೆದುಕೊಳ್ಳಲಿದ್ದಾರೆ. ಕೇಂದ್ರ ಸರ್ಕಾರದ ಮುಕ್ತ ಆಮದು ನೀತಿಯಿಂದಾಗಿ ಅಸಂಖ್ಯಾತ ಸಣ್ಣ ಮತ್ತು ಮಧ್ಯಮ ಮಟ್ಟದ ಕಾರ್ಖಾನೆಗಳು ಬಾಗಿಲು ಮುಚ್ಚಿಕೊಳ್ಳುತ್ತಿದ್ದು ಲಕ್ಷ ಗಟ್ಟಲೆ ಕಾರ್ಮಿಕ ಕುಟುಂಬಗಳು ನಿರ್ಗತಿಕವಾಗುತ್ತಿವೆ.

ಕೇಂದ್ರದ ಮುಕ್ತ ಆಮದು ನೀತಿಯು ರಾಜ್ಯದ ರೈತರನ್ನು ಬಹುದೊಡ್ಡ ಪ್ರಮಾಣದಲ್ಲಿ ಆಹುತಿ ತೆಗೆದುಕೊಂಡಿತು. ತೊಗರಿ, ಮೆಣಸಿನಕಾಯಿ, ಆಲೂಗಡ್ಡೆ, ಈರುಳ್ಳಿ, ಭತ್ತ, ಶೇಂಗಾ, ಅಡಿಕೆ, ತೆಂಗು ಮೊದಲಾದ ಬೆಳೆಗಳಿಗೆ ಬೆಲೆ ಇಲ್ಲದಂತಾಗಿ, ಹಾಕಿದ ಬಂಡವಾಳ ಹಿಂತಿರುಗಿ ಬರದೆ, ಹೂಡಿದ ಸಾಲ ತೀರಿಸಲಾಗದೆ ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಕರ್ನಾಟಕದಲ್ಲಿ ಸುಮಾರು 500 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರ ಜೊತೆಯಲ್ಲೇ ಈ ಸಲ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ತಲೆದೋರಿದ ಭೀಕರ ಬರದಿಂದಾಗಿ ರೈತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.

ಕೃಷಿ ರಂಗದ ಬಿಕ್ಕಟ್ಟಿನಿಂದಾಗಿ ಕೃಷಿ ಕೂಲಿಕಾರರ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ ಜಾಗತೀಕರಣದ ನೀತಿಗಳಿಂದಾಗಿ ಅವರ ಉದ್ಯೋಗದ ಅವಕಾಶಗಳು ಕಡಿತಗೊಳ್ಳುತ್ತಿವೆ. ಪಡಿತರ ಪದ್ಧತಿಯಿಂದ ಅವರಿಗೆ ದೊರೆಯುತ್ತಿದ್ದ ಅಲ್ಪಸ್ವಲ್ಪ ಪರಿಹಾರವನ್ನು ಸಹ ಕಿತ್ತುಕೊಳ್ಳಲಾಗುತ್ತಿದೆ. ನೈಜ ಭೂಸುಧಾರಣೆಗಳ ಕೊರತೆ ಯಿಂದಾಗಿ ಭೂಮಿಯ ಬಗ್ಗೆ ಅವರಿಗಿದ್ದ ಕನಸುಗಳು ಕಮರಿಹೋಗುತ್ತಿವೆ.

ಅಭಿವೃದ್ಧಿಯ ಹೆಸರಿನಲ್ಲಿ ಸಾವಿರಾರು ಕೋಟಿ ರೂಗಳ ವಿಶ್ವ ಬ್ಯಾಂಕ್ ಸಾಲಗಳಿಗೆ ಕೈಒಡ್ಡಿರುವ ರಾಜ್ಯ ಸರ್ಕಾರವು ಅದರ ಷರತ್ತುಗಳಿಂದ ಕೈ ಕಟ್ಟಿಸಿಕೊಂಡಿದೆ. ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯನ್ನು ಖಾಸಗೀಕರಣಗೊಳಿಸಲು ನಿರ್ಧರಿಸಿ ಜನತೆಯ ಮೇಲೆ ದುಬಾರಿ ವಿದ್ಯುತ್ ದರಗಳನ್ನು ಹೇರಲು ಹೊರಟಿದ್ದಾರೆ. ಕೃಷಿ ವಲಯಕ್ಕೆ ರಿಯಾಯಿತಿದರದಲ್ಲಿ ಸಾಕಷ್ಟು ವಿದ್ಯುತ್ ಪೂರೈಕೆ ಮಾಡಲು ನಿರಾಕರಿಸುವ ಮೂ…ಕ

ಸಿ ಪಿ ಐ(ಎಂ) 17ನೇ ಕ…

ಬಳ್ಳಾರಿ ತುಂಬೆಲ…

ಬಿರು ಬಿಸಲಿನ ಬಳ್ಳಾರಿ ತುಂಬೆಲ್ಲಾ ಕೆಂಪು ಕೆಂಪು..... ಎಲ್ಲೆಲ್ಲೂ ಕೆಂಬಾವುಟಗಳ ಹಾರಾಟ, ಪ್ರತಿ ಸರ್ಕಲ್‌ಗಳಲ್ಲೂ ಕುಡುಗೋಲು, ಸುತ್ತಿಗೆಯ ತೋರಣಗಳ ಸಿಂಗಾರ. ಜಾಗತೀಕರಣ-ಉದಾರೀಕರಣ ದುಷ್ಪರಿಣಾಮಗಳು ಕೋಮುವಾದದ ಅಪಾಯ, ದೇಶದ ರಕ್ಷಣೆ, ಜನತೆಯ ಹಿತ ಕಾಯಲು ಪರ್ಯಾಯ ಹಾದಿಯ ಘೋಷಣೆ, ಕಮ್ಯುನಿಸ್ಟ್ ಚಳುವಳಿಯ ಪರಂಪರೆ ಪ್ರತಿಬಿಂಬಿಸುವ ಅತ್ಯಾಕರ್ಷಕ ವರ್ಣರಂಜಿತ ಗೋಡೆಬರಹಗಳು...ಸ್ವಾಗತ ಕಮಾನುಗಳು, ಮೇಲಾಗಿ ಜಾಥಾ ಪ್ರಚಾರ...ಬಳ್ಳಾರಿ ಜಿಲ್ಲೆಯ ತುಂಬಾ ಇಂತಹದ್ದೇ ವಾತಾವರಣ. ಪತ್ರಿಕೆ, ಟಿ.ವಿ.ಮಾಧ್ಯಮಗಳಲ್ಲಿಯೂ ಜನವರಿ 28 ರಿಂದ 31 ರವರೆಗೆ ಬಳ್ಳಾರಿ ನಗರದಲ್ಲಿ ಜರುಗಿದ ಸಿಪಿಐ(ಎಂ) ಪಕ್ಷದ 17ನೇ ಕರ್ನಾಟಕ ರಾಜ್ಯ ಸಮ್ಮೇಳನದ್ದೇ ಸುದ್ದಿ.

ಸಮ್ಮೇಳನದ ಕಲಾಪಗಳು ಆರಂಭ ಗೊಂಡದ್ದೇ ಭಾರಿ ಬಹಿರಂಗಸಭೆ ಮೂಲಕ. 28 ರ ಸೋಮವಾರ ರೈತ ಕೂಲಿಕಾರರಿಗೆ ಬಿಡುವು. ದುಡಿಯುವ ವರ್ಗದ ಸಮ್ಮೇಳನವಲ್ಲವೇ? ಕೈಗಾರಿಕೆಗಳ, ಮಾರುಕಟ್ಟೆಯ ಹಮಾಲರು, ಮುನ್ಸಿಪಾಲಿಟಿ, ಅಂಗನವಾಡಿ, ಬ್ಯಾಂಕ್-ವಿಮಾ ನೌಕರರು, ನಾಗರೀಕರು ತಮ್ಮ ಕೆಲಸಗಳಿಗೆ 'ರಜಾ' ಹೇಳಿ ಮೆರವಣಿಗೆಗೆ ನಡೆದೇ ಬಿಟ್ಟರು. ವಿದ್ಯಾರ್ಥಿ-ಯುವಜನ , ಮಹಿಳೆಯರೂ, ಬುದ್ದಿಜೀವಿಗಳೂ ಹಿಂದೆ ಬೀಳಲಿಲ್ಲ. ದುಡಿವ ಜನತೆಯ ಕ್ರಾಂತಿಕಾರಿ ರಾಜಕೀಯದ ಹೋರಾಟದ ಧ್ವನಿಗೆ ದನಿಗೂಡಿಸಿದರು, ಹೆಜ್ಜೆ ಇರಿಸಿದರು.

ಭಾರೀ ಬ…

ದುಡಿಯುವ ವರ್ಗದ ಮುನ್ನಡೆಗಾಗಿ


ರಾಜಕೀಯವಾಗಿ ಕರ್ನಾಟಕದಲ್ಲಿ ಬಿಜೆಪಿ ಹಿನ್ನಡೆಯನ್ನು ಅನುಭವಿಸುತ್ತಿದ್ದರೂ ಅದರ ಅಪಾಯ ಇದ್ದೇ ಇದೆ. ಫ್ಯಾಸಿಸ್ಟ್ ಸ್ವರೂಪದ ಆರೆಸ್ಸೆಸ್‌ನ ಹಿಡಿತದಲ್ಲಿರುವ ಬಿಜೆಪಿಯನ್ನು ಸೋಲಿಸುವುದು ನಮ್ಮ ಪ್ರಥಮ ರಾಜಕೀಯ ಕರ್ತವ್ಯವಾಗಿದೆ ಎಂದು ಸಮ್ಮೇಳನ ಗುರುತಿಸಿದೆ.

ದೊಡ್ಡ ಬಂಡವಾಳಶಾಹಿಗಳ ಪಕ್ಷವಾಗಿ, ಜಾಗತೀಕರಣದ ನೀತಿಗಳನ್ನು ದೃಢವಾಗಿ ಪ್ರತಿಪಾದಿಸುತ್ತಿರುವ ಮತ್ತು ಕರ್ನಾಟಕದಲ್ಲಿ ಅದನ್ನು ಜಾರಿಗೆ ತರಲು ಬದ್ಧವಾಗಿರುವ ಕಾಂಗ್ರೆಸನ್ನು ಸೋಲಿಸುವುದು ನಮ್ಮ ಎರಡನೇ ಕರ್ತವ್ಯ.

ಎಡ ಪಕ್ಷಗಳನ್ನು ಒಳಗೊಂಡ, ಪೀಪಲ್ಸ್ ಫ್ರೆಂಟ್ ಸ್ಪಷ್ಟವಾದ ಪರ್ಯಾಯವನ್ನು ದೇಶದ ಜನತೆಯ ಮುಂದೆ ಇಟ್ಟಿದೆ. 'ಪೀಪಲ್ಸ್ ಫ್ರೆಂಟ್' ಭಾಗವಾಗಿರುವ ಶಕ್ತಿಗಳನ್ನು ಬಲಪಡಿಸುವುದು ನಮ್ಮ ಆದ್ಯ ಕರ್ತವ್ಯ. ಇಂತಹ ಪರ್ಯಾಯವು ರೂಪುಗೊಳ್ಳುವುದೂ ಸಹ ಎಡ ಮತ್ತು ಪ್ರಜಾ ಸತ್ತಾತ್ಮಕ ಶಕ್ತಿಗಳ ಐಕ್ಯ ಹೋರಾಟದಿಂದ ಮಾತ್ರ.

ಅಂದರೆ ಈ ಐಕ್ಯತೆ ಕೇವಲ ಒಂದು ಚುನಾವಣೆ ಪ್ರಕ್ರಿಯೆಯಲ್ಲಿ ಬದಲಾಗಿ ನಾಡಿನ ದುಡಿವ ವರ್ಗದ ಜ್ವಲಂತ ನಿರ್ದಿಷ್ಟ ಪ್ರಶ್ನೆಗಳಾಧಾರದಲ್ಲಿ ಮೂಡಿ ಬರುವ ವರ್ಗ ಐಕ್ಯತೆ ವರ್ಗ ಹೋರಾಟ ವಾಗಿದೆ. ಹೀಗೆ ಜನತೆಯ ಚಳುವಳಿಯ ಮೂಲಕವೇ ಒಂದು ಸ್ಪಷ್ಟವಾದ ಕಾರ್ಯಕ್ರಮಾತ್ಮಕ ಐಕ್ಯತೆ, ಬೆಳೆದು ಬರುವುದು ಅತ್ಯಂತ ಜರೂರಿನ ಕರ್ತವ್ಯ.

ಬಲಗೊಳ್ಳಬೇಕು. ಎಡ ಪ್ರಜಾಸತ್ತಾತ್ಮಕ ಜಾತ್ಯಾತೀತ ಶಕ್ತಿಗಳನ್ನು ಒಂದು ಗೂಡಿಸಲು ಸಾಧ್ಯವಾಗಬೇಕಾದರೆ ರಾಜ್ಯದಲ್ಲಿ ಸಿಪಿಐ(ಎಂ) ಬಲಗೊಳ್ಳಬೇಕು. ಸಿಪಿಐ(ಎಂ) ಬಲ ಗೊಳ್ಳಬೇಕಾದರೆ ಸಮರಧೀರ ಚಳುವಳಿಗಳನ್ನು ನಡೆಸಲು ಸಾಧ್ಯವಾಗಬೇಕು. ನಮ್ಮ ಚಳುವಳಿ ಹಾಗೂ ಸಾಮೂಹಿಕ ಸಂಘಟನೆಗಳ ಪ್ರಭಾವ ವನ್ನು ಪಕ್ಷಕಟ್ಟಲು ಬಳಸಬೇಕು. ಪಕ್ಷದ ಸಂಘಟನಾ ಕೆಲಸಕ್ಕಾಗಿ ಪೂರ್ಣಕಾಲದ ಕ್ರಾಂತಿಕಾರಿಗಳನ್ನು ಹೆಚ್ಚು ಹೆಚ್ಚಾಗಿ ತೊಡಗಿಸಲು ಸಾಧ್ಯವಾಗಬೇಕು. ಪೂರ್ಣಕಾಲದ ಕಾರ್ಯಕರ್ತ ರಿಗೆ ಅವಶ್ಯಕ ತರಬೇತಿ ಹಾಗೂ ಸಂಭಾವನೆ ನೀಡಲು ವ್ಯವಸ್ಥೆ ಮಾಡಬೇಕು. ಇದಕ್ಕಾಗಿ ಜನರ ನಡುವಿನಿಂದ ಅವಶ್ಯಕ ಹಣಕಾಸು ಸಂಗ್ರಹಿಸಲು ಗಮನ ನೀಡಬೇಕು. ಜನತೆಯ ನಡುವೆ ನಮ್ಮ ನೀತಿಗಳನ್ನು ಕೊಂಡೊಯ್ಯಲು ಸತತವಾದ ಪ್ರಚಾರ ಪ್ರಕ್ಷೋಭೆಗಳನ್ನು ನಡೆಸಬೇಕು. ಪಕ್ಷದ ಪತ್ರಿಕೆಯ ಪ್ರಸಾರ ಹೆಚ್ಚಾಗಬೇಕು. ಹೀಗೆ ಮುಂದಿನ ಅವಧಿಯಲ್ಲಿ ತೃತೀಯ ಪರ್ಯಾಯವನ್ನು ರೂಪಿಸುವ ಅಂಗವಾಗಿ ಪಕ್ಷವನ್ನು ಕಟ್ಟುವುದೇ ನಮ್ಮ ಪ್ರಧಾನ ಕರ್ತವ್ಯ.



ಚಳುವಳಿ ಮತ್ತು ಗೊಳಿಸಲು ನಿರ್ಧಾರ


ಬಳ್ಳಾರಿಯ ಕಾಮ್ರೇಡ್ ಪಿ. ರಾಮಚಂದ್ರರಾವ್ ನಗರದಲ್ಲಿ ಅತ್ಯಂತ ಯಶಸ್ವಿಯಾಗಿ ಕ ಸಾಮಾಜಿಕ ರಾಜಕೀಯ ಬೆಳವಣಿಗೆಗಳನ್ನು ವರ್ಗದೃಷ್ಟಿಯಾಧಾರದಲ್ಲಿ ಕೂಲಂಕುಶವಾಗಿ ರಾಜಕೀಯ ಆಂದೋಲನದ ಮುನ್ನಡೆ ಕರ್ತವ್ಯ ಸಾಗಬೇಕಾದ ಹಾದಿಯನ್ನು ಗುರುತಿಸಿತು. ರಾಜ್ಯದಲ್ಲಿ ಪ್ರಬಲವಾದ ಜನಸಮೂಹದ ಚಳುವಳಿಯನ್ನು ಬೆಳೆಸುವುದು ಮತ್ತು ಪಕ್ಷದ ಸಮ್ಮೇಳನದ ಒಟ್ಟು ಕಲಾನಗರ ಸಾಮಗ್ರ ಚಿತ್ರಣ ನೀಡುವ ಹಲವು ವರದಿಗಳು ಇಲ್ಲಿ.

ಕೆಂಪು - ಕೆಂಪು

28 ರ ಮಧ್ಯಾಹ್ನ ಸುಮಾರು 2 ರ ಹೊತ್ತಿಗೆ 'ಬಳ್ಳಾರಿ ದುರ್ಗಮ್ಮ'ನ ಗುಡಿಯ ಬಳಿ(ಸೆಂಟ್ರಲ್ ಜೈಲ್ ಎದುರಿನಿಂದ)ಯ ಮೈದಾನದಿಂದ ಆರಂಭಗೊಂಡ ಸಾವಿರಾರು ಜನರ ಕೆಂಪು ಸೈನ್ಯ ನಗರದ ಬೀದಿ ಬೀದಿಗಳಲ್ಲಿ ಘೋಷಣೆ ಮೊಳಗಿಸಿತು. ಬಿಡಿಎ ಮೈದಾನ ಹೊಕ್ಕಿತು. ಈ ಬಹಿರಂಗ ಸಭೆಯ ಇಡೀ ಪ್ರದೇಶಕ್ಕೆ ಮಹಾನ್ ನಾಯಕ ಕಾಮ್ರೇಡ್ ಇ.ಎಂ.ಎಸ್. ನಂಬೂದರಿಪಾಡ್‌ರವರ ಹೆಸರನ್ನಿಡಲಾಗಿತ್ತು. ಜ್ಯೋತಿಬಸು, ಪಿ. ಸುಂದರಯ್ಯ, ಪ್ರೀತಿಯ ಮಾಸ್ತು ಪಿ.ಆರ್., ಎನ್.ಕೆ.ಯವರ ಕಟೌಟ್‌ಗಳಲ್ಲದೇ ಮಾರ್ಕ್ಸ್-ಎಂಗೆಲ್ಸ್, ಲೆನಿನ್, ಸ್ಟಾಲಿನ್‌ರವರ ವರ್ಣರಂಜಿತ ಚಿತ್ರಗಳು, ಕ್ರಾಂತಿಕಾರಿ ಘೋಷಣೆಗಳೂ ಮೈದಾನದ ಪ್ರವೇಶದ್ವಾರದಲ್ಲಿ ರಾರಾಜಿಸುತ್ತಿದ್ದವು.

ಗ ಸಭೆ

ಬಹಿರಂಗ ಸಭೆಯನ್ನು ಉದ್ಘಾಟಿಸಿದವರು ಕಯ್ಯೂರು ವೀರ ರೈತ ಹೋರಾಟದ ನಾಯಕ, ಸಿಪಿಐ(ಎಂ)ನ ಪೊಲಿಟ್‌ಬ್ಯೂರೋ ಸದಸ್ಯ, ಕೇರಳದ ಮಾಜಿ ಮುಖ್ಯಮಂತ್ರಿ ಇ.ಕೆ.ನಾಯನಾರ್‌ರವರು. ಹಾಗೆಯೇ ಪಿ.ಬಿ.ಸದಸ್ಯರಾದ ಇ.ಬಾಲಾನಂದನ್, ಪಿ.ರಾಮಚಂದ್ರನ್, ಜಿ.ಎನ್.ನಾಗರಾಜ್, ಯು.ಬಸವರಾಜ್, ಪ್ರಸನ್ನ, ಎಸ್.ವೈ. ಗುರುಶಾಂತ್ ಹಾಗೂ ಸಭೆಯ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್ ಮಾತನಾಡಿದರು. ವೇದಿಕೆಯಲ್ಲಿ ರಾಜ್ಯ ಸೆಕ್ರೇಟರಿಯಾಟ್ ಸದಸ್ಯರಾದ ಕ.ಆರ್.ಶ್ರೀಯಾನ್, ನಿತ್ಯಾನಂದಸ್ವಾಮಿ, ವಿ.ಜೆ.ಕೆ.ನಾಯರ್, ಮಾರುತಿಮಾನ್ಪಡೆ, ಜಿ.ಸಿ.ಬಯ್ಯಾರೆಡ್ಡಿ, ಸ್ವಾಗತಸಮಿತಿಯ ಟಿ.ಜಿ.ವಿಠ್ಠಲ್ ಮುಂತಾದವರಿದ್ದರು.



ಕೋಮುವಾದದ ದಮನಕ್ಕೆ ಜಾತ್ಯಾತೀತ ಶಕ್ತಿಗಳ ಐಕ್ಯತೆ ಅಗತ್ಯ

ಇ.ಕೆ.ನಾಯನಾರ್

ಕೇಂದ್ರದಲ್ಲಿ ಅಧಿಕಾರದಲ್ಲಿ ಇರುವ ಬಿಜೆಪಿಯು ಕೋಮುವಾದಿ ಶಕ್ತಿಗಳಿಗೆ ನೀಡುತ್ತಿರುವ ಪರೋಕ್ಷ ಬೆಂಬಲದಿಂದಾಗಿ ದೇಶದ ಏಕತೆಗೆ ಹಾಗೂ ಜಾತ್ಯಾತೀತ ವ್ಯವಸ್ಥೆಗೆ ಧಕ್ಕೆ ಉಂಟಾಗುತ್ತಿದೆ. ಇಂತಹ ಕೋಮುವಾದಿ ಹಾಗೂ ಮೂಲಭೂತವಾದಿ ಶಕ್ತಿಗಳನ್ನು ದಮನಿಸಲು ದೇಶದ ಜಾತ್ಯಾತೀತ ಶಕ್ತಿಗಳ ಏಕತೆ ಅಗತ್ಯವಿದೆ ಎಂದು ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರು ಹಾಗೂ ಕೇರಳದ ಮಾಜಿ ಮುಖ್ಯಮಂತ್ರಿಗಳಾದ ಕಾಂ। ಇ.ಕೆ. ನಾಯನಾರ್ ಕರೆ ನೀಡಿದರು.

ಬಳ್ಳಾರಿಯಲ್ಲಿ ಜರುಗಿದ 4 ದಿನಗಳ ಸಿಪಿಐ(ಎಂ)ನ 17ನೇ ರಾಜ್ಯ ಸಮ್ಮೇಳನದ ಮೊದಲ ದಿನ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಅಂತರಾಷ್ಟ್ರೀಯ ಮಟ್ಟದಲ್ಲಿ ನ್ಯೂಯಾರ್ಕ್‌ನ ಮೇಲೆ ಸೆಪ್ಟೆಂಬರ್ 11ರ ಭಯೋತ್ಪಾದಕ ದಾಳಿ ಹಾಗೂ ಅಫ್ಘನ್ ಯುದ್ಧದ ನಂತರ ಇಡೀ ಪ್ರಪಂಚದ ಮೇಲೆ, ಅಮೇರಿಕನ್ ಸಾಮ್ರಾಜ್ಯಶಾಹಿಯು ತನ್ನ ಆರ್ಥಿಕ ಹಾಗೂ ರಾಜಕೀಯ ಹಿಡಿತ ಸಾಧಿಸಲು ಮುಂದಾಗಿದೆ. ತನ್ನ ಬಿಕ್ಕಟ್ಟಿನ ಹೊರೆಯನ್ನು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ವರ್ಗಾಯಿಸಲು ಆಮೂಲಕ ದುಡಿಯುವ ಜನರನ್ನು ಶೋಷಿಸಲು ಸಾಮ್ರಾಜ್ಯಶಾಹಿ ಯತ್ನಿಸುತ್ತಿದೆ. ಸಮಾಜವಾದಿ ರಾಷ್ಟ್ರಗಳು ಈ ಸಾಮ್ರಾಜ್ಯಶಾಹಿ ದಾಳಿಗಳನ್ನು ಪ್ರತಿರೋಧಿಸುತ್ತಿವೆ. ಅಬಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ರಾಜಕೀಯ ಸ್ವಾತಂತ್ರ್ಯದ ಒಳಗೆ ತನಗನುಕೂಲಕರವಾದ ಆರ್ಥಿಕ ನೀತಿಗಳ ಮೂಲಕ ದಾರಿ ಮಾಡಲು, ಸಾಮ್ರಾಜ್ಯಶಾಹಿ ಯತ್ನಿಸುತ್ತಿದೆ. ಇಂತಹ ನೀತಿಗಳನ್ನು ಈ ರಾಷ್ಟ್ರಗಳ ಪ್ರಜಾಸತ್ತಾತ್ಮಕ ಹಾಗೂ ಪ್ರಗತಿಪರ ಶಕ್ತಿಗಳು ಸಮರ್ಪಕವಾಗಿ ಎದುರಿಸಬೇಕೆಂದರು. ಎಲ್ಲಾ ಭಯೋತ್ಪಾದಕತೆಗಳೂ ಸಹ ಮಾನವ ಕುಲದ ವಿರೋಧಿಗಳೇ ಆಗಿವೆ, ಧಾರ್ಮಿಕ ಭಯೋತ್ಪಾದಕತೆ ವಿರುದ್ಧ ಹೋರಾಡುವಾಗಲೇ ಅದಕ್ಕೆ ಸಾಮ್ರಾಜ್ಯಶಾಹಿ ಭಯೋತ್ಪಾದಕತೆ ಪರ್ಯಾಯವಲ್ಲ ಎಂದರು.

ರಾಷ್ಟ್ರಮಟ್ಟದಲ್ಲಿ, ಕೇಂದ್ರದ ಬಿಜೆಪಿ ಸರ್ಕಾರ ಕಳೆದ 3 ವರ್ಷಗಳಲ್ಲಿ ಸರಿಸಾಟಿಯಿಲ್ಲದಂತಹ ಪ್ರತಿಗಾಮಿ ನೀತಿಗಳನ್ನು ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ಅನುಸರಿಸುತ್ತಿದೆ. ರಾಷ್ಟ್ರದ ಒಟ್ಟಾರೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೆ ಬುಡಮೇಲು ಮಾಡಲು ಹವಣಿಸುತ್ತಿದೆ. ರಾಷ್ಟ್ರದ ಸಂವಿಧಾನದ ಜಾತ್ಯಾತೀತ ಸಂವಿಧಾನವನ್ನು ಬದಲಿಸಲು ಹಾಗೂ ಅಮೇರಿಕಾ ಮಾದರಿಯಲ್ಲಿ ಅಧ್ಯಕ್ಷೀಯ ಮಾದರಿ ಸರ್ಕಾರದ ಮೂಲಕ ಸಂಸದೀಯ ಮಾದರಿ ವ್ಯವಸ್ಥೆಯನ್ನು ಬುಡಮೇಲು ಮಾಡಲು ಯತ್ನಿಸುತ್ತಿದೆ. ಬಿಜೆಪಿ

ಪುಟ 10 ಕ್ಕೆ

ಟಕ ರಾಜ್ಯ ಸಮ್ಮೇಳನ

ಪರಂಪರಾಗತ ಕೃಷಿಯನ್ನೇ ಮೂಲೆಗುಂಪು ಮಾಡುತ್ತಿದ್ದಾರೆ.

ರಾಜ್ಯದಲ್ಲಿ ಲಭ್ಯಇರುವ ಜಲಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸಾಧ್ಯವಾದರೆ ಬರಗಾಲದ ಭೀತಿಯಿಂದ ನಾವು ಮುಕ್ತರಾಗಬಹುದು. ಆದರೆ ಇಲ್ಲಿಯವರೆಗೆ ರಾಜ್ಯವನ್ನು ಆಳಿದ ಸರ್ಕಾರಗಳು ವೈಫಲ್ಯದಿಂದಾಗಿ ಸಾವಿರಾರು ಟಿ.ಎಂ.ಸಿ. ನೀರು ನಮ್ಮ ನದಿಗಳಲ್ಲಿ ವ್ಯರ್ಥವಾಗಿ ಹರಿದು ಹೋಗುತ್ತಿದೆ. ಈಗಂತೂ ವಿಶ್ವ ಬ್ಯಾಂಕಿನ ಒತ್ತಡಗಳಿಗೆ ಮಣಿದು ಸರ್ಕಾರ ನೀರಾವರಿಗೆ ಹಣ ಒದಗಿಸುವುದನ್ನೇ ಕಡಿತಮಾಡಲಾರಂಭಿಸಿದೆ. ಜಾರಿಯಲ್ಲಿರುವ ಯೋಜನೆಗಳಲ್ಲಿಯೂ ಭ್ರಷ್ಟಾಚಾರ

ಪುಟ 10 ಕ್ಕೆ

ಇಂಕ್ವಿಲಾಬ್ ಜಿಂದಾಬಾದ್

'ಇಂಕ್ವಿಲಾಬ್ ಜಿಂದಾಬಾದ್' ಕೈಯಲ್ಲಿ ಕೋಲು, ತಲೆಗೆ ಟೊಪ್ಪಿ, ಹಲ್ಲಿಲ್ಲದ ಬಾಯಿ, ನಡುಗುವ ದನಿಯ ಆ ಅಜ್ಜ ಎತ್ತರದ ಕಂಠದಲ್ಲಿ ಇಂಕ್ವಿಲಾಬ್ ಎಂದು ಘೋಷಿಸಿದಾಗ ಸಮ್ಮೇಳನದ ಸಭಾಂಗಣದಲ್ಲಿ ವಿದ್ಯುತ್ ಸಂಚಾರ ಎಲ್ಲಾ ಪ್ರತಿನಿಧಿಗಳೂ ತಮಗೆ ಅರಿವಿಲ್ಲದಂತೆ ಜಿಂದಾಬಾದ್ ಮಾರ್ನುಡಿದಿದ್ದರು.

ಪಕ್ಷದ 17ನೆಯ ರಾಜ್ಯ ಸಮ್ಮೇಳನದಲ್ಲಿ ಕಂಡು ಬಂದ ದೃಶ್ಯಇದು. ಪಕ್ಷದ ರಾಜ್ಯ ಸಮಿತಿ ಸದಸ್ಯೆ ಕೆ. ನೀಲಾ ಅವರು ಬದುಕು ಬಂದಿಖಾನೆ' ಪುಸ್ತಕ ಬಿಡುಗಡೆಯಲ್ಲಿ ಇಂತಹ ರೋಮಾಂಚನದ ಅಲೆ ಮೂಡಿ ಬಂದಿತು. ಪುಸ್ತಕದ ಆಶಯಕ್ಕೂ ನನ್ನ ಆಶಯಕ್ಕೂ ಯಾವುದೇ ವ್ಯತ್ಯಾಸವಿಲ್ಲ. ಈ ನಾಡಿಗೆ ಬೇಕಿರುವುದು ಕಮ್ಯುನಿಸ್ಟ್‌ರ ನೇತೃತ್ವ ಅದಕ್ಕಾಗಿಯೇ ನನ್ನ ಮನಸ್ಸು ಇಂದಿಗೂ ತುಡಿಯುತ್ತಿದೆ. 'ಇಂಕ್ವಿಲಾಬ್'ಎಂದು ಘೋಷಣೆಗೆ ದನಿ ನೀಡಿದರು ಜಿಂದಾಬಾದ್ ಎಂಬುದು ಉತ್ತರವಾಗಿ ಬಂದಿತ್ತು.

ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷೆ ನೀಲಾ ಹಲವು ಹೋರಾಟಗಳ ಸಂಗಾತಿ. ಗುಲ್ಬರ್ಗಾದ ಮೂಡಬೂಳ ಕ್ರಾಸ್‌ನಲ್ಲಿ ಸರ್ಕಾರದ ರೈತ ವಿರೋಧಿ ನೀತಿ ವಿರುದ್ಧ ಪ್ರತಿಭಟಿಸುತ್ತಿದ್ದ ರೈತರ ಮತ್ತು ಯುವಜನರ ಮೇಲೆ ಹಲ್ಲೆಮಾಡಿ ಅವರಿಗೆ ಕೊಳ ತೊಡಿಸಿದ್ದನ್ನು ಪ್ರತಿಭಟಿಸಿದಾಗ ನಡೆದ ಘಟನೆಗಳ ಸರಮಾಲೆಯನ್ನೇ ಎದೆ ಕಲಕುವಂತೆ ಬದುಕು ಬಂಧೀಖಾನೆಯಲ್ಲಿ ಹಿಡಿದಿಟ್ಟಿದ್ದಾರೆ. ಬಂದೀಖಾನೆಯಲ್ಲಿ ಕಳೆದ ದಿನಗಳು ಅಲ್ಲಿನ ಮಹಿಳೆಯರ ದುಃಖ ದುಮ್ಮಾನ ಜಾಗತೀಕರಣದಿಂದಾಗಿ ಬದುಕೇ ಒಂದು ಬಂದೀಖಾನೆಯಾಗಿರುವ ವಿಪರ್ಯಾಸವನ್ನು ಹಿಡಿದಿಟ್ಟಿದ್ದಾರೆ.




ಚಿಲುಮೆಯಾದ, ಬ್ರಿಟಿಷರ ವಿರುದ್ಧ ಹೋರಾಟದ ಭೂಗತರಾಗಿಯೂ ಬಳ್ಳಾರಿಯ ಬಿ.ಎಂ. ಮರುಳಸಿದ್ಧಯ್ಯನವರೇ ಈ ಪುಸ್ತಕ ಬಿಡುಗಡೆ ಮಾಡಬೇಕು ಎಂಬುದು ಎಲ್ಲರ ಆಶಯವಾಗಿತ್ತು. ಅಜ್ಜ ಮರುಳಸಿದ್ದಯ್ಯ ಸ್ಪಷ್ಟವಾಗಿ ಹೇಳಿದರು. ಈ ದೇಹಕ್ಕೆ ಮಾತ್ರ ವಯಸ್ಸಾಗಿದೆ ಆದರೆ ಹೋರಾಡುವ ಕೆಚ್ಚಿಗೆ ಎಂದೂ ಮುಪ್ಪು ಬಂದಿಲ್ಲ. ಸಭೆ ಕರತಾಡನ ಮಾಡಿತು.

ಮರಳುಸಿದ್ದಯ್ಯನವರಿಗೆ ಅಷ್ಟಕ್ಕೇ ತೃಪ್ತಿಯಾಗಲಿಲ್ಲ. ಪುಸ್ತಕ ಬರೆದ ನೀಲಾರನ್ನು ವೇದಿಕೆಗೆ ಬಾ ತಾಯಿ ಎಂದು ಕರೆದರು. ವೇದಿಕೆಯ ಮೇಲಿದ್ದ ಸೂರ್ಯನಾರಾಯಣರಾವ್, ಬಾಲಾನಂದನ್, ಪಿ.ಆರ್.ಸಿ. ಎಲ್ಲರ ಕೈಕುಲುಕಿ ಹೋರಾಟದ



ದೇಶದ ಹಿತರಕ್ಷಣೆಗಾಗಿ ಹೋರಾಟ ಎಲ್ಲಾ ಪ್ರಜಾಪ್ರಭುತ್ವವಾದಿಗಳ ಕರ್ತವ್ಯ



ದೇಶ ಮತ್ತು ಜಗತ್ತು ಬಹಳಷ್ಟು ಮಹತ್ವಪೂರ್ಣ ಬೆಳವಣಿಗೆಗಳನ್ನು ಕಂಡಿದೆ. ಈ ಹಿನ್ನೆಲೆಯಲ್ಲಿ ನಮ್ಮ ದೇಶದ ಜನತೆಯ ಹಿತಾಸಕ್ತಿಗಳನ್ನು ಕಾಪಾಡಲು ಹೋರಾಡುವುದು ಕೇವಲ ಸಿಪಿಐ(ಎಂ) ಮಾತ್ರವಲ್ಲ ಎಲ್ಲಾ ಪ್ರಜಾಪ್ರಭುತ್ವವಾದಿಗಳ ಕರ್ತವ್ಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಕಾಂ. ಇ.ಬಾಲಾನಂದನ್ ಸಿಪಿಐ(ಎಂ)ನ 17ನೇ ರಾಜ್ಯ ಸಮ್ಮೇಳವನ್ನು ಉದ್ಘಾಟಿಸುತ್ತಾ ಹೇಳಿದರು.

ಕಾಂ. ಇ.ಬಾಲಾನಂದನ್ ಮೊದಲು ಅಂತರ್ರಾಷ್ಟ್ರೀಯ ಬೆಳವಣಿಗೆಗಳನ್ನು ಪರಿಶೀಲಿಸಿದರು. ಈ ಅವಧಿಯಲ್ಲಿ ಬಹಳ ಮಹತ್ವಪೂರ್ಣ ಬೆಳವಣಿಗೆಗಳು ಸಂಭವಿಸಿವೆ. ಸೆಪ್ಟೆಂಬರ್ 11 ರಂದು ನ್ಯೂಯಾರ್ಕಿನಲ್ಲಿ, ವಾಶಿಂಗ್ಟನ್‌ನಲ್ಲಿ ನಡೆದ ಕೃತ್ಯಗಳಿಂದಾಗಿ ಜನಗಳಲ್ಲಿನ ವಿಶ್ವಾಸ ಹಾರಿಹೋಗಿದೆ. ಆದರೆ ಬುಶ್ ಆಡಳಿತ ಈ ಘಟನೆಗಳನ್ನು ತನ್ನ ಸ್ವಾರ್ಥ ಸಾಧನೆಗೆ ಬಳಸುತ್ತಿದೆ. ಮುಖ್ಯವಾಗಿ ಮಧ್ಯ ಏಶ್ಯಾದ ತೈಲ ಸಂಪತ್ತಿನ ಮೇಲೆ ಹತೋಟಿ ಸಾಧಿಸಲು ಬಳಸುತ್ತಿದೆ ಎಂದು ಅವರು ಟೀಕಿಸಿದರು. 1972 ರ ಖಂಡಾಂತರ ಕ್ಷಿಪಣಿ - ವಿರೋಧಿ ಒಪ್ಪಂದದಿಂದ ಅದು ಏಕಪಕ್ಷೀಯವಾಗಿ ಹೊರಬರುವ ಭಂಡತನ ತೋರಿರುವುದನ್ನು ಗಮನಿಸಿ ಎಂದು ಕಾಂ. ಇ.ಬಾಲಾನಂದನ್ ಹೇಳಿದರು. ಅಮೆರಿಕಾದ ಇಂತಹ ತಂತ್ರಗಳನ್ನು, ಕುಯುಕ್ತಿಗಳನ್ನು ವಿಫಲಗೊಳಿಸಬೇಕಾಗಿದೆ ಎಂದು ಅವರು ಹೇಳಿದರು. ವಿಶ್ವ ಬಂಡವಾಳಶಾಹಿ ಈಗ ತೀವ್ರ ಬಿಕ್ಕಟ್ಟಿನಲ್ಲಿದೆ. ಬೆಳವಣಿಗೆ ದರಗಳು ಅಪಾರವಾಗಿ ಕುಸಿದಿವೆ. ಹಿಂಜರಿತ ವಿಪರೀತವಾಗಿ ಕಾಡುತ್ತಿದೆ. ಬಿಕ್ಕಟ್ಟಿಲ್ಲದ ಬಂಡವಾಳಶಾಹಿ ಸಮಾಜ ಸಾಧ್ಯವಿಲ್ಲ ಎಂಬುದು ಮತ್ತೊಮ್ಮೆ ಸ್ಪಷ್ಟವಾಗುತ್ತಿದೆ. ಅತ್ಯಾಧುನಿಕ ತಂತ್ರಜ್ಞಾನದಿಂದಲೂ ಬಂಡವಾಳಶಾಹಿ ದೇಶಗಳಲ್ಲೂ ಜನರಿಗೆ ಉತ್ತಮ ಜೀವನ ಸಿಗುತ್ತಿಲ್ಲ. ಆದ್ದರಿಂದ ವಿಶ್ವದ ಎಲ್ಲಾ ದೇಶಗಳಲ್ಲೂ ಜನರ ಪ್ರತಿರೋಧಗಳು ಎದ್ದು ಬರುತ್ತಿವೆ. ಇದೀಗ ನಾವು ವಿಶ್ವದಲ್ಲಿ ಕಾಣುತ್ತಿರುವ ಹೊಸ ಸನ್ನಿವೇಶ ಇದು ಎಂದು ಕಾಂ. ಬಾಲಾನಂದನ್ ವಿವರಿಸಿದರು.

ಈ ಹಿನ್ನೆಲೆಯಲ್ಲಿ ಅವರು ಭಾರತದ ಸನ್ನಿವೇಶವನ್ನು ಪರಿಶೀಲಿಸುತ್ತಾ, ವಿಶೇಷವಾಗಿ 1991 ರ ನಂತರದ ಬೆಳವಣಿಗೆಗಳನ್ನು ಹಾಗೂ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ನೀತಿಗಳನ್ನು ವಿಶ್ಲೇಷಿಸಿದರು. ಈ ಸನ್ನಿವೇಶದಲ್ಲಿ ದೇಶದ ಹಾಗೂ ಜನತೆಯ ಹಿತಗಳನ್ನು ರಕ್ಷಿಸಲು ಹೋರಾಟ ನಡೆಸುವುದು ಸಿಪಿಐ(ಎಂ)ನ ಮುಂದಿರುವ ಕರ್ತವ್ಯ. ಅದೇ ರೀತಿ ಎಲ್ಲಾ ಪ್ರಜಾಪ್ರಭುತ್ವವಾದಿ ಪಕ್ಷಗಳ ಮುಂದಿರುವ ಕರ್ತವ್ಯ ಎಂದು ಅವರು ಹೇಳಿದರು. ಎನ್‌ಡಿಎ ಸರಕಾರದ ಅತ್ಯಂತ ಜನ-ವಿರೋಧಿ ಹಾಗೂ ದೇಶ-ವಿರೋಧಿ ನೀತಿಗಳ ವಿರುದ್ಧ ಕಾರ್ಮಿಕ ಆಂದೋಲನದಲ್ಲಿ ಐಕ್ಯತೆ ಮತ್ತು ಕಾರ್ಯಾಚರಣೆಗಳು ಬರಬೇಕು ಎಂದೂ ಅವರು ಹೇಳಿದರು.

ಕಾಂ. ಇ.ಬಾಲಾನಂದನ್ ಉದ್ಘಾಟನಾ ಭಾಷಣ

ಜಾತ್ಯಾತೀತ ಶಕ್ತಿಗಳ ಐಕ್ಯತೆ ಅಗತ್ಯ


ಪುಟ 9 ರಿಂದ

ಆರ್.ಎಸ್.ಎಸ್. ಸೇರಿ, ರಾಷ್ಟ್ರದ ಸಾಂಸ್ಕೃತಿಕ ಹಾಗೂ ಶಿಕ್ಷಣ ವ್ಯವಸ್ಥೆಯ ಜಾತ್ಯಾತೀತ ಅಂಶಗಳನ್ನು ನಾಶಮಾಡಲು ಹೊರಟಿವೆ. ಇತಿಹಾಸದ ಪಠ್ಯಪುಸ್ತಕ ಬದಲಿಸಿ, ಇತಿಹಾಸ ತಿರುಚಲು ಹೊರಟಿರುವ, ವಿಶ್ವವಿದ್ಯಾಲಯಗಳಲ್ಲಿ ಜ್ಯೋತಿಷ್ಯ ಅಧ್ಯಯನಕ್ಕೆ ಅವಕಾಶ ನೀಡುವ ಮೂಲಕ ಅತ್ಯುಗ್ರವಾದ ಸಂಪ್ರದಾಯವಾದಿ ಹಿಂದುತ್ವ ಸಿದ್ಧಾಂತದ ಮುಖೇನ, ಜನರನ್ನು ಅಣಿನೆರೆಸಿ ರಾಮ ಮಂದಿರ ನಿರ್ಮಿಸುವ ಹಾಗೂ ತಮ್ಮ ರಾಜಕೀಯ ಅಧಿಕಾರ ಉಳಿಸಿಕೊಳ್ಳುವ ಹುನ್ನಾರ ನಡೆಸಿದೆ ಎಂದು. ಕೇಂದ್ರ ಸರ್ಕಾರ ಎಣೆಯಿಲ್ಲದ ಭ್ರಷ್ಟಾಚಾರದಲ್ಲಿ ತೊಡಗಿವೆ. ಶಸ್ತ್ರಾಸ್ತ್ರ ಖರೀದಿ, ಶವಪೆಟ್ಟಿಗೆ ಖರೀದಿಯಲ್ಲೂ ಭ್ರಷ್ಟಾಚಾರ ಎಸಗಿರುವ ಅವರ ಪರಿ ದೇಶಕ್ಕಾಗಿ ಪ್ರಾಣಕೊಟ್ಟ ಸೈನಿಕರ ಶವಗಳ ಮೇಲೂ ಹಣ ಲೂಟಿಗೆ ಹಿಂದೇಟಾಕರೆಂಬುದನ್ನು ತೋರುತ್ತದೆ.

ಅಲ್ಪಸಂಖ್ಯಾತ ಮುಸ್ಲಿಂರು ಹಾಗೂ ಕ್ರಿಶ್ಚಿಯನ್ನರ ಮೇಲೆ ದಾಳಿ ನಡೆಸಿರುವ ಕೋಮುವಾದ ಸಂಘ ಸಂಸ್ಥೆಗಳಿಗೆ ಪರೋಕ್ಷ ಬೆಂಬಲ ನೀಡುವ ಮೂಲಕ, ದೇಶದಲ್ಲಿ ಕೋಮುವಾದದ ತೀವ್ರ ಬೆಳೆವಣಿಗೆಗೆ ಕೊಡುಗೆ ನೀಡುತ್ತಿದೆ ಕೇಂದ್ರದ ಸರ್ಕಾರ ಹಿಂದೂ ಹಾಗೂ ಇತರೆ ಧರ್ಮದ ಮೂಲಭೂತವಾದಿ ಕೋಮುವಾದಿ ಸಂಘಟನೆಗಳ ವಿರುದ್ಧ ಜಾತ್ಯಾತೀತ ಶಕ್ತಿಗಳು ಹೋರಾಟಕ್ಕಿಳಿಯಬೇಕಿದೆ ಎಂದರು.

ಕೇಂದ್ರದ ಜನವಿರೋಧಿ ನೀತಿಗಳು ಆರ್ಥಿಕ ನೀತಿಗಳಿಂದಾಗಿ ಜನತೆ ಸಂಕಷ್ಟಕೊಳಗಾಗಿದ್ದಾರೆ. ರೈತರು ಆತ್ಮಹತ್ಯೆಯ ದಾರಿ ಹಿಡಿದಿದ್ದಾರೆ. ಕಾಂಗ್ರೆಸ್ ಪಕ್ಷ ಜಾತ್ಯಾತೀತವಾಗಿದ್ದರೂ ಸಹಾ ಅವರ ಆರ್ಥಿಕ ನೀತಿಗಳು ಸಹಾ ಅಷ್ಟೆ ಅಪಾಯಕಾರಿಯಾಗಿವೆ. ಕಾರ್ಮಿಕ ವಿರೋದಿ ರೈತ ವಿರೋಧಿ ನೀತಿಗಳನ್ನು ಕಾಂಗ್ರೆಸ್ ಹಾಗೂ ಬಿಜೆಪಿಗಳೆರಡರ ಸರ್ಕಾರಗಳು ಸಹಾ ಪೈಪೋಟಿಯಿಂದ ಜಾರಿಗೆ ತರುತ್ತಿವೆ. ರೈತರ ಮೇಲೆ ದಾಳಿ ದಬ್ಬಾಳಿಕೆ ಹೆಚ್ಚಿವೆ. ಕಲ್ಬುರ್ಗಿಯಲ್ಲಿ ರೈತರ ಮೇಲೆ ಲಾಠಿ ಚಾರ್ಜ್ ವಿಠಲೇನಹಳ್ಳಿಯಲ್ಲಿ ಗೋಲಿಬಾರ್ - ರೈತರ ಸಾವು, ಚಿಕ್ಕಮಗಳೂರಿನ ಕಾಫಿ ಬೆಳೆಗಾರರ ಮೇಲೆ ಲಾಠಿ ಚಾರ್ಜ್ ನಡೆಸುವ ಮೂಲಕ ಕಾಂಗ್ರೆಸ್ ಸರ್ಕಾರವು ಸಹಾ ತನ್ನ ಜನವಿರೋಧಿ ನೀತಿಗಳನ್ನು ಪ್ರದರ್ಶಿಸಿವೆ ಎಂದರು. ಒಂದೆಡೆ ಕೇಂದ್ರ ಸರ್ಕಾರದ ಗೋದಾಮುಗಳಲ್ಲಿ

→



........ಪ್ರಬಲ ಚಳುವಳಿ ಮತ್ತು ಸಂಘಟನೆ ಬಲಗೊಳಿಸಲು ನಿರ್ಧಾರ

ಪುಟ 9 ರಿಂದ


ವ್ಯಾಪಕವಾಗಿದ್ದು ಯೋಜನೆಗಳು ನೆನೆಗುದಿಗೆ ಬೀಳಲು ಕಾರಣವಾಗಿದೆ.

ಕರ್ನಾಟಕದಲ್ಲಿ ಭೂಮಾಲಿಕ ಬಂಡವಾಳಶಾಹಿ ಬೆಳವಣಿಗೆಯ ದಾರಿಯನ್ನು ಅನುಸರಿಸುತ್ತಾ ಬಂದದ್ದು ಸಹಜವಾಗಿಯೇ ಅಸಮಾನ ಬೆಳವಣಿಗೆಗೆ ಕಾರಣವಾಗಿತ್ತು. ಈಗ ಜಾಗತೀಕರಣದ ಹಿನ್ನೆಲೆಯಲ್ಲಿ ಈ ಅಸಮಾನತೆ ಮತ್ತಷ್ಟು ತೀವ್ರವಾಗುತ್ತಿದೆ. ಸಮಾನ ಅಭಿವೃದ್ಧಿಯ ಪ್ರಜಾಸತ್ತಾತ್ಮಕ ಬೇಡಿಕೆಗಾಗಿ ರಾಜ್ಯದ ಜನತೆಯನ್ನು ಒಂದುಗೂಡಿಸುವ ಬದಲು ರಾಜ್ಯವನ್ನು ಒಡೆಯುವ ದಿಕ್ಕಿನಲ್ಲಿ ಜನರನ್ನು ದಾರಿತಪ್ಪಿಸುವ ಪ್ರಯತ್ನಗಳು ನಡೆದಿದೆ.

ರಾಜ್ಯದ ಈ ಎಲ್ಲ ಬೆಳವಣಿಗೆಗಳನ್ನು ವಿಶ್ಲೇಷಿಸಿದ ಪಕ್ಷದ ರಾಜ್ಯ ಸಮ್ಮೇಳನವು ಜಾಗತೀಕರಣ, ಉದಾರೀಕರಣದ ನೀತಿಗಳ ವಿರುದ್ಧದ ಚಳುವಳಿಯನ್ನು ಪಕ್ಷದ ನೇತೃತ್ವದಲ್ಲಿ ತೀವ್ರಗೊಳಿಸಬೇಕೆಂದೂ, ಸಾರ್ವಜನಿಕ ರಂಗದ ಕಾರ್ಖಾನೆಗಳ ಖಾಸಗೀಕರಣದ ವಿರುದ್ಧ, ಕಾರ್ಖಾನೆಗಳ ಮುಚ್ಚುವಿಕೆಯ ವಿರುದ್ಧ, ಸಮಗ್ರ ಭೂಸುಧಾರಣೆ, ಜಲಸಂಪನ್ಮೂಲಗಳ ಪೂರ್ಣ ಬಳಕೆ, ವಿದ್ಯುತ್ ರಂಗದ ಖಾಸಗೀಕರಣಕ್ಕೆ ತಡೆ ಮೊದಲಾದ ಅತ್ಯಂತ ಪ್ರಮುಖ ಪ್ರಶ್ನೆಗಳಿಗಾಗಿ ಸಮರಶೀಲ ಹೋರಾಟಗಳನ್ನು ನಡೆಸಬೇಕೆಂದು ನಿರ್ಧರಿಸಿದೆ. ಕೆಲವು ಪ್ರದೇಶಗಳ ಹಿಂದುಳಿಯುವಿಕೆಯ ಪ್ರಶ್ನೆಯನ್ನು ಇಡೀ ರಾಜ್ಯದ ಪ್ರಶ್ನೆಯಾಗಿ ಎತ್ತಿಕೊಂಡು ರಾಜ್ಯದ ವಿಭಜನೆಯನ್ನು ಬಯಸುವ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಕಾರ್ಯಕ್ರಮ ರೂಪಿಸಬೇಕೆಂದು ಸಮ್ಮೇಳನವು ಅಭಿಪ್ರಾಯಪಟ್ಟಿದೆ.

ಜಾತಿವಾದ ಮತ್ತು ಕೋಮುವಾದದ ವಿರುದ್ಧ ಸೈದ್ಧಾಂತಿಕ ಹೋರಾಟ.

17ನೇ ರಾಜ್ಯ ಸಮ್ಮೇಳನದ ವರದಿಯು ಉದಾರೀಕರಣದ ನೀತಿಗಳ ದುಷ್ಪರಿಣಾಮವಾಗಿ ಹೆಚ್ಚುತ್ತಿರುವ ನಿರುದ್ಯೋಗ, ಬಡತನಗಳು ಜನತೆಯನ್ನು ಹೆಚ್ಚೆಚ್ಚು ಅತಂತ್ರಗೊಳಿಸುತ್ತಾ ಮೂಢನಂಬಿಕೆ, ಕಂದಾಚಾರಗಳು ನೂಕುತ್ತಿವೆ. ಅದೇ ಸಮಯದಲ್ಲಿ ಜನತೆಗೆ ನಿಜವಾದ ಪರಿಹಾರವನ್ನು ನೀಡದೆ, ತಮ್ಮ ಅಧಿಕಾರವನ್ನು ಮುಂದುವರೆಸಿಕೊಂಡು ಹೋಗ ಬಯಸುವ ಬಂಡವಾಳಶಾಹಿ ಭೂಮಾಲೀಕ ಪಕ್ಷಗಳು ಜಾತಿ ಉಪಜಾತಿಗಳನ್ನು ಬಳಸುತ್ತಿರುವುದು ಬರುಬರುತ್ತಾ ಹೆಚ್ಚಾಗುತ್ತಿದೆ ಅಸ್ಪೃಶ್ಯತೆ, ಜಾತಿದಮನದ ವಿರುದ್ಧ ಶೋಷಿತ ಜಾತಿಗಳಲ್ಲಿ ಪ್ರಜಾಸತ್ತಾತ್ಮಕ ಪ್ರಜ್ಞೆ ಬೆಳೆದು ಬರುತ್ತಿರುವುದು ಸ್ವಾಗತಾರ್ಹವಾಗಿದ್ದರೂ ಆ ವಿಭಾಗಗಳು ಪ್ರಜಾಸತ್ತಾತ್ಮಕ ಚಳುವಳಿಯತ್ತ ಹೋಗದಂತೆ ಜಾತಿ ನಾಯಕರು ತಡೆಯುತ್ತಿರುವ ಉದಾಹರಣೆಗಳೂ ಕಾಣಸಿಗುತ್ತವೆ.



ಕೋಮುವಾದಿ ಬಿಜೆಪಿಯು ರಾಜ್ಯದಲ್ಲಿ ರಾಜಕೀಯವಾಗಿ ಹೆಚ್ಚೆಚ್ಚು ವಿಫಲವಾಗುತ್ತಿದ್ದಂತೆ ಆರೆಸ್ಸೆಸ್, ಭಜರಂಗದಳ ಮೊದಲಾದ ಸಂಘ ಪರಿವಾರದ ಸಂಘಟನೆಗಳ ಚಟುವಟಿಕೆಗಳನ್ನು ರಾಜ್ಯದ ಹಲವಾರು ಕಡೆಗಳಲ್ಲಿ ತೀವ್ರಗೊಳಿಸಲಾಗುತ್ತಿರುವುದನ್ನು ಅದರ ನೆಲೆ ವಿಸ್ತರಿಸುತ್ತಿರುವುದನ್ನು ಸಮ್ಮೇಳನವು ಗುರುತಿಸಿದೆ. ಹಿಂದೆ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಮಾಡಿದಂತೆ, ಈ ಭಯೋತ್ಪಾದನೆಯ ವಿರುದ್ಧದ ಸಮರದ ಹೆಸರಿನಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ ಸಲ್ಲದ ಅಪಪ್ರಚಾರ ನಡೆಸಲಾಗುತ್ತಿದೆ. ಬೀದರ್, ಬೆಂಗಳೂರು, ಸಿರ್ಸಿ, ಬಾಗಲಕೋಟೆ ಮೊದಲಾದ ಕಡೆಗಳಲ್ಲಿ ನಡೆಸಲಾದ ಆರೆಸ್ಸೆಸ್ ಫಥಸಂಚಲನಗಳ ಸಂದರ್ಭಗಳಲ್ಲಿ ಅಲ್ಪಸಂಖ್ಯಾತರ ವಿರುದ್ಧ ಉದ್ರೇಕಕಾರಿ ಭಾಷಣಗಳನ್ನು ಮಾಡಲಾಗಿದೆಯಲ್ಲದೆ ಮಠಾಧೀಶರೊಂದಿಗೆ ತಮ್ಮ ಒಡನಾಟವನ್ನು ನಿಕಟಗೊಳಿಸಲಾಗುತ್ತಿದೆ.

ರಾಜ್ಯದಲ್ಲಿ ಜಾತಿವಾದ, ಕೋಮುವಾದದ ಬೆಳವಣಿಗೆಯನ್ನು ಕುರಿತು ಸಮ್ಮೇಳನ ಚರ್ಚಿಸಿ ದಲಿತರ ಮೇಲೆ ದೌರ್ಜನ್ಯಗಳು ನಡೆದಾಗ, ಅಲ್ಪಸಂಖ್ಯಾತರ ಮೇಲೆ ಕೋಮುವಾದಿ ಶಕ್ತಿಗಳಿಂದ ದಾಳಿ ನಡೆದಾಗ ಪಕ್ಷವು ಸಕ್ರಿಯವಾಗಿ ಮಧ್ಯಪ್ರವೇಶಮಾಡಲು ಪ್ರಯತ್ನಪಟ್ಟಿರುವುದನ್ನು ಸ್ವಾಗತಿಸಿದೆ. ಆದರೆ ಕೋಮುವಾದ, ಜಾತಿವಾದದ ವಿರುದ್ಧ ನಮ್ಮ ಸೈದ್ಧಾಂತಿಕ ಹೋರಾಟ

→

ಆಹಾರ ಧಾನ್ಯಗಳು ತುಂಬಿ ತುಳುಕುತ್ತಿದ್ದು ಕೊಳೆಯುತ್ತಿದ್ದರು. ಸಹಾ ಬಡವರಿಗೆ ಸರಿಯಾದ ಪಡಿತರ ವ್ಯವಸ್ಥೆಯಿಲ್ಲದೆ ಹಸಿವಿನಿಂದ ಬಡವರು ಸಾಯುವ ಪರಿಸ್ಥಿತಿಯುಂಟಾಗಿದೆ ಎಂದರು.

ಗಡಿಯಲ್ಲಿನ ಯುದ್ಧದ ಪರಿಸ್ಥಿತಿ ನಿರ್ಮಾಣವಾಗಿರುವುದನ್ನು ಪ್ರಸ್ತಾಪಿಸಿದ ಅವರು ಯುದ್ಧವನ್ನು ತಪ್ಪಿಸಲು, ಭಾರತ



ಪಾಕಿಸ್ತಾನದೊಂದಿಗೆ ಮಾತುಕತೆಯ ಮಾರ್ಗ ಅನುಸರಿಸಬೇಕೆಂದರು. ಕೇಂದ್ರ ಸರ್ಕಾರವು ಭಾರತದ ಪರಂಪರಾಗತ ಅಲಿಪ್ತ ಧೋರಣೆಯ ವಿದೇಶಾಂಗ ನೀತಿಗೆ ತಿಲಾಂಜಲಿ ಹೇಳುತ್ತಾ, ಅಮೇರಿಕಾ ಸಾಮ್ರಾಜ್ಯಶಾಹಿಗೆ ಮಣಿಯುತ್ತಿದೆ ಎಂದರು.


ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳಿಂದಾಗಿ ದೇಶದ ಎಲ್ಲಾ ರಂಗಗಳು ಹಿನ್ನಡೆ ಅನುಭವಿಸುತ್ತಿವೆ. ಕೃಷಿ ಕ್ಷೇತ್ರದ ಮೇಲೆ ಇದರ ಪ್ರಭಾವ ಅಘಾದವಾಗಿದೆ. ದೇಶವನ್ನು ಐಎಂಎಫ್, ವಿಶ್ವಬ್ಯಾಂಕ್ ಹಾಗೂ ವಿಶ್ವವ್ಯಾಪಾರ ಸಂಘಟನೆಗಳಿಗೆ ಒತ್ತೆಇಡಲಾಗುತ್ತಿದೆ. ಚೀನಾವು ಡಬ್ಲ್ಯೂ.ಟಿ.ಓ. ಒಪ್ಪಂದವನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿಕೊಂಡಿರುವ ರೀತಿಯನ್ನು ಭಾರತವೂ ಸಹಾ ಅನುಸರಿಸಬೇಕು ಎಂದರು.

ಪ್ರಸ್ತುತ ಪರಿಸ್ಥಿತಿಯಲ್ಲಿ ಕೋಮುವಾದ ಹಾಗೂ ಜನವಿರೋಧಿ ನೀತಿಗಳ ವಿರುದ್ಧದ ಹೋರಾಟದ ನೇತೃತ್ವವನ್ನು ಸಿಪಿಐ(ಎಂ) ಕೈಗೆತ್ತಿಕೊಳ್ಳಬೇಕಿದೆ, ಜನ ಸಮೂಹಗಳನ್ನು ಈ ನೀತಿಗಳ ವಿರುದ್ಧ ಅಣಿನೇರಿಸುವ ಮಹತ್ತರ ಜವಾಬ್ದಾರಿ ಸಿಪಿಐ(ಎಂ)ದಾಗಿದೆ ಎಂದರು.

ಬಹಿರಂಗ ಸಭೆಯ ವೇದಿಕೆಯ ಎರಡೂ ಕಡೆ ಕಾಂ. ಪಿ.ಆರ್. ಹಾಗೂ ಕಾಂ! ಎನ್.ಕೆ. ಯವರ ಕಟೌಟ್‌ಗಳನ್ನು ಇಡಲಾಗಿತ್ತು. ವೇದಿಕೆಗೆ ಪಿ. ರಾಮಚಂದ್ರ ರಾವ್ ವೇದಿಕೆ ಎಂದು ಹೆಸರಿಡಲಾಗಿತ್ತು. ○

ಚಳುವಳಿ ಮತ್ತು ಪಕ್ಷದ ಸಂಘಟನೆ ಜೊತೆ ಜೊತೆ ಸಾಗಬೇಕು

— ಪಿ.ರಾಮಚಂದ್ರನ್



ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಪಿ.ರಾಮಚಂದ್ರನ್ ಸಮಾರೋಪ ಭಾಷಣ ಮಾಡುತ್ತಾ, ಮುಂದಿನ ಸಮ್ಮೇಳನದ ಒಳಗಾಗಿ ಪಕ್ಷದ ಸದಸ್ಯತ್ವ ಹತ್ತು ಸಾವಿರಕ್ಕೆ ಏರಿಸುವ' ಗುರಿಯನ್ನು ಸಮ್ಮೇಳನದ ಪ್ರತಿನಿಧಿಗಳ ಮುಂದಿಟ್ಟರು. ಪ್ರತಿನಿಧಿಗಳು ಪ್ರಚಂಡ ಕರತಾಡನದೊಂದಿಗೆ ಅದನ್ನು ಸ್ವಾಗತಿಸಿ, ಒಪ್ಪಿಗೆ ಸೂಚಿಸಿದರು.

ನಾಲ್ಕು ಸಮ್ಮೇಳನಗಳಿಂದ, 13 ವರ್ಷಗಳಿಂದ ರಾಜ್ಯದ ಸಿಪಿಐ(ಎಂ) ನಿಕಟ ಪರಿಚಯ ಹೊಂದಿರುವ ಪಿ.ರಾಮಚಂದ್ರನ್ ರಾಜ್ಯ ಸಮ್ಮೇಳನದಲ್ಲಿ ನಡೆದ ಬಿಚ್ಚು ಮನಸ್ಸಿನ ಚರ್ಚೆ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಈ ಬಾರಿಯ ಸಮ್ಮೇಳನದಲ್ಲಿ ಹಲವು ಹೊಸಮುಖಗಳು - ಯುವ ಮುಖಗಳು ಕಾಣುತ್ತಿರುವುದು ಚೇತೋಹಾರಿ. ಅಂಗನವಾಡಿ ಚಳುವಳಿಯ ವಿಸ್ತರಣೆಯೊಂದಿಗೆ ಮಹಿಳೆಯರಲ್ಲಿ ಪಕ್ಷ ವಿಸ್ತರಣೆಯಾಗಿರುವುದು ಉತ್ತಮ ಬೆಳವಣಿಗೆ ಎಂದರು ಪಿ.ರಾಮಚಂದ್ರನ್.

'ಪಕ್ಷದ ಸದಸ್ಯತ್ವ 10 ಸಾವಿರಕ್ಕೆ ಏರಿಸೋಣ'

ಸಮ್ಮೇಳನದಲ್ಲಿ ಮಾತನಾಡಿದ ಹಲವು ಪ್ರತಿನಿಧಿಗಳು ರಾಜ್ಯದಲ್ಲಿ ಪಕ್ಷದ ಬೆಳವಣಿಗೆ, ಎಡರು-ತೊಡರು, ವೇಗದ ಬಗ್ಗೆ ವ್ಯಕ್ತಪಡಿಸಿದ ಆತಂಕವನ್ನು ಒಪ್ಪಿದ ಪಿ.ರಾಮಚಂದ್ರನ್, ನಿಮ್ಮ ಸಾಮೂಹಿಕ ಸಂಘಟನೆಗಳ ಬಲ ಮತ್ತು ರಾಜಕೀಯ ಪ್ರಭಾವಕ್ಕೆ ಹೋಲಿಸಿದರೆ ಸದಸ್ಯತ್ವ ಏರಿಕೆ ಸಾಲದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಪಕ್ಷವನ್ನು ವಿಸ್ತರಿಸುವುದು, ಸಂಘಟನಾತ್ಮಕವಾಗಿ ಸೈದ್ಧಾಂತಿಕವಾಗಿ ಬಲಪಡಿಸುವುದು ಕೇಂದ್ರ ಘೋಷಣೆಯಾಗಬೇಕು. **ಸಾಮೂಹಿಕ ಸಂಘಟನೆಗಳು, ಚಳುವಳಿಗಳಿಂದ ತನ್ನಿಂತಾನೇ ಪಕ್ಷ ಬೆಳೆಯುತ್ತದೆ ಎಂಬುದು ತಪ್ಪು ಕಲ್ಪನೆ.** ಸಾಮೂಹಿಕ ಸಂಘಟನೆ ಮತ್ತು ಚಳುವಳಿಗಳ ಜತೆ ಪಕ್ಷ ಕಟ್ಟುವುದು ಜತೆ-ಜತೆಗೆ ನಡೆಯಬೇಕು. ಇದು ಬರಿಯ ಪಕ್ಷದ ಸಮಿತಿಗಳ, ಘಟಕಗಳ ಕೆಲಸ ಮಾತ್ರವಲ್ಲ. ಸಾಮೂಹಿಕ.ಸಂಘಟನೆಗಳಲ್ಲಿ ಕೆಲಸ ಮಾಡುವ ಕಮ್ಯುನಿಸ್ಟರು ಅಲ್ಲಿನ ಸಮರಧೀರ ಹೋರಾಟಗಾರರಿಗೆ ರಾಜಕೀಯ ತಿಳುವಳಿಕೆ, ತರಬೇತಿ ಕೊಟ್ಟು ಪಕ್ಷಕ್ಕೆ ತರಬೇಕು. ಇದು ಎಲ್ಲರ ಕೆಲಸ ಎಂದು ಪಿ.ರಾಮಚಂದ್ರನ್ ಒತ್ತಿಹೇಳಿದರು.

ಕಮ್ಯುನಿಸ್ಟರು ಬಲ ಏರಿಕೆ ಅಗತ್ಯ ಕೆಲಸ ಮಾಡುತ್ತಿರುವ ಸಾಮೂಹಿಕ ಸಂಘಟನೆಗಳನ್ನು ಉಳಿಸಲು, ಬೆಳೆಸಲು ಅದರೊಳಗೆ ಬೆನ್ನೆಲುಬಾಗಿ ಕೆಲಸ ಮಾಡುತ್ತಿರುವ ಕಮ್ಯುನಿಸ್ಟರು ಬಲದ ಏರಿಕೆ ಅತ್ಯಗತ್ಯ. ಇದು ಟ್ರೇಡ್ ಯೂನಿಯನ್ ರಂಗದಲ್ಲಿ ಅತಿ ಮುಖ್ಯವಾದುದು. ಇದು ಕರ್ನಾಟಕದಲ್ಲಿ ಮಾತ್ರವಲ್ಲ ಸಿಪಿಐ(ಎಂ) ದುರ್ಬಲವಾಗಿರುವ ಹಲವು ರಾಜ್ಯಗಳಲ್ಲಿ ಇದೇ ರೀತಿ ಪರಿಸ್ಥಿತಿ ಇದೆ ಎಂದು ಪಿಆರ್‌ಸಿ ಇತರ ಕೆಲವು ರಾಜ್ಯಗಳ ಉದಾಹರಣೆ ಕೊಟ್ಟರು.

ತಪ್ಪು ಪ್ರವೃತ್ತಿ :

ಜನಸಮೂಹದ ನಡುವಿನ ಕೆಲಸ ಮತ್ತು ಪಕ್ಷ ಕಟ್ಟುವ ಸಂಘಟನೆ ಕೆಲಸವನ್ನು ವ್ಯತಿರಿಕ್ತವಾಗಿ ನೋಡಬಾರದು. ಚಳುವಳಿ ಸೈದ್ಧಾಂತಿಕ ಅಧ್ಯಯನ - ಇವುಗಳ ನಡುವೆ 'ಇದು ದೊಡ್ಡದು' - 'ಇದು ಚಿಕ್ಕದು' 'ಇದು ಹೆಚ್ಚು ಮಹತ್ವದ್ದು', "ಇದು ಅಲ್ಲ' ಎಂದು ಹೇಳುವುದು ತಪ್ಪು ಪ್ರವೃತ್ತಿ. ಪಕ್ಷದ ವಿಸ್ತರಣೆ, ಬಲಪಡಿಸುವುದರಲ್ಲಿ ಎಲ್ಲದಕ್ಕೂ ಅದರದ್ದೇ ಪಾತ್ರವಿದೆ. ಈ ಕೆಲಸಗಳ ನಡುವೆ, ಆ ಕೆಲಸಗಳನ್ನು ಹೆಚ್ಚಾಗಿ ಮಾಡುತ್ತಿರುವ ಸಂಗಾತಿಗಳ ನಡುವೆ ಗೆರೆ-ಎಳೆಯುವುದು ಬೇಡ ಎಂದು ಪ್ರತಿನಿಧಿಗಳ ಗಮನವನ್ನು ಪಿ.ರಾಮಚಂದ್ರನ್ ಚರ್ಚೆಯಲ್ಲಿ ಅಲ್ಲಲ್ಲಿ ಕಂಡು ಬಂದ ಈ ಪ್ರವೃತ್ತಿ ಬಗ್ಗೆ ಸೆಳೆದರು.

ಪಕ್ಷದ ಸಂಘಟನೆ ಕೆಲಸ ಅತೀ ಜರೂರು

ಪಕ್ಷದ ಸಂಘಟನೆಯ ಕೆಲಸ ಅತೀ ಅಗತ್ಯ ಎಂದ ಅವರು ತಾವು ಹೊಸದಾಗಿ ಕೇಂದ್ರಕ್ಕೆ ಸೇರ್ಪಡೆಯಾದಾಗ ತಮ್ಮ ಅನುಭವಗಳನ್ನು ವಿವರಿಸಿದ ಪಿ.ಆರ್.ಸಿ. ಯವರು ದಿವಂಗತ ನಾಯಕರಾದ ಕಾಂ. ಬಿ.ಟಿ.ರಣದಿವೆ, ಕಾಂ.ಎಂ.ಬಸವಪುನ್ನಯ್ಯನವರು ಪಕ್ಷ ಕೇಂದ್ರದ ಕೆಲಸಗಳ ಬಗೆಗಿನ ಮಾತುಗಳನ್ನು ಪ್ರಸ್ತಾಪಿಸಿದರು. ಅವರಿಗೆ ಮಹಾರಾಷ್ಟ್ರ, ಆಂಧ್ರಗಳಲ್ಲಿ ಸಾಕಷ್ಟು ಜನರ ನಡುವೆ ಪ್ರಭಾವ ಇತ್ತು. ಅಲ್ಲೇ ಇದ್ದು ದೊಡ್ಡ ಜನನಾಯಕರು ಎಂದು ಅನ್ನಿಸಿಕೊಳ್ಳಬಹುದಿತ್ತು. ಆದರೆ 'ಪಕ್ಷಕಟ್ಟುವ ಕೇಂದ್ರದ ಈ ಕೆಲಸ ಮಾಡದಿದ್ದರೆ ಬೇರೆ ಯಾರು ಮಾಡುತ್ತಾರೆ. ಇದು ಮುಖ್ಯ ಎಂದು ಹೇಳಿದರು. ಪಕ್ಷದ ಸೈದ್ಧಾಂತಿಕ ಬೆಳವಣಿಗೆ ಇಲ್ಲದೇ ಮುಂದೆಹೋಗಲಾರದು, ಕಾರ್ಮಿಕ ವರ್ಗ ಸಮಾಜವಾದಿ ಸಿದ್ಧಾಂತವನ್ನು ಪಡೆದುಕೊಂಡಾಗ ಕ್ರಾಂತಿಕಾರಿ ವರ್ಗವಾಗುತ್ತದೆ ಎಂದರು.

ವಿದ್ಯಾರ್ಥಿ ಮತ್ತು ಟ್ರೇಡ್ ಯೂನಿಯನ್ ರಂಗದಿಂದ ಪಕ್ಷಕ್ಕೆ ತರುವುದರಲ್ಲಿ ಸ್ವಲ್ಪ ಉತ್ತಮ ಪ್ರಗತಿಯಾಗಿದ್ದರೂ, ಯುವಜನ, ಮಹಿಳಾ, ರೈತ-ಕೃಷಿಕೂಲಿಕಾರರ ರಂಗದಿಂದ ಪ್ರಗತಿ ಸಾಲದು. ಅದರಲ್ಲೂ ಯುವಜನರಂಗದಲ್ಲಿ ಪಕ್ಷ ಬೆಳೆಸುವುದರ ಹೊಣೆ ಇಡೀ ಪಕ್ಷದ ಅದರಲ್ಲೂ ಪಕ್ಷದ ಕೆಲಸದ ಮಹತ್ವವನ್ನು ಪಿ.ಆರ್.ಸಿ. ಒತ್ತಿಹೇಳಿದರು.

ಸಂಘಟನೆಯ ಕ್ರಾಂತಿಕಾರಿ ಚಳುವಳಿಯಲ್ಲಿ ಮಾವೋತ್ಸೆ ತುಂಗ್ ತೊಡಗಿದ್ದಾಗ ಅವರಿಗೆ ಆಗ ಕೇವಲ 14 ವರ್ಷ. ಹಾಗೇ ಕ್ಯೂಬಾ ಕ್ರಾಂತಿಯ ನಾಯಕ ಫಿಡೆಲ್ ಕ್ಯಾಸ್ಟ್ರೋ ಧುಮುಕಿದಾಗ 16 ವರುಷ. ಹೀಗೆ ಯುವಜನ ಕಾರ್ಯಕರ್ತರನ್ನು ಪಕ್ಷಕ್ಕೆ ತರುವುದು ಅತೀ ಮಹತ್ವದ್ದು ಎಂದರು.

ರಾಜಕೀಯ ಪ್ರಚಾರಾಂದೋಲನ

ಜನಸಮೂಹದ ನಡುವೆ ಪ್ರಬಲ ಹೋರಾಟಗಳನ್ನು ಕಟ್ಟಿ ಬೆಳೆಸಬೇಕಾದ ಮಹತ್ವವನ್ನು ವಿವರಿಸುತ್ತಾ ದೊಡ್ಡ ಪ್ರಮಾಣದಲ್ಲಿ ಪ್ರಚಾರ-ಪ್ರಕ್ಷೋಭೆಗಳನ್ನು ಸಂಘಟಿಸುವುದರ ಅಗತ್ಯವನ್ನು ಗುರುತಿಸಿದರು. 'ನಮ್ಮಲ್ಲಿ ಒಳ್ಳೆಯ ನೀತಿಗಳಿವೆ. ರಾಜಕೀಯವಿದೆ. ಆದರೆ ಅದನ್ನು ಜನಸಮೂಹದ ನಡುವೆ ಕೊಂಡೊಯ್ಯದಿದ್ದರೆ ಏನು ಪ್ರಯೋಜನ? ಆದ್ದರಿಂದ ಜನಸಮೂಹವನ್ನು ಕರಪತ್ರ, ಕಿರುಹೊತ್ತಿಗೆ, ಇತ್ಯಾದಿ ಮೂಲಕ ತಲುಪುವಾಗಲೇ ಬಹಳ ಮುಖ್ಯವಾಗಿ ನೂರಾರು ಬಹಿರಂಗಸಭೆಗಳನ್ನು ಅದು ಚಿಕ್ಕದಿರಲಿ, ದೊಡ್ಡದಿರಲಿ ನಡೆಸಬೇಕು ಎಂದ ಅವರು ದಿವಂಗತ ನಾಯಕ ಕೃಷ್ಣ ಪಿಳ್ಳೆಯವರು ಕೇರಳದಲ್ಲಿ ಆರಂಭದ ದಿನಗಳಲ್ಲಿ ಕೇವಲ 10 ಜನರಿದ್ದರೂ ಅವರನ್ನೇ ಉದ್ದೇಶಿಸಿ ಮಾತನಾಡುತ್ತಿದ್ದರು. ಇದರಲ್ಲಿ 3 ಜನ ಗುಪ್ತಾಚಾರ ದಳದವರು, ಉಳಿದ 7 ರಲ್ಲಿ 5 ಜನರಾದರೂ ಪ್ರಭಾವಕ್ಕೆ ಒಳಗಾದಲ್ಲಿ ಅವರು 50 ಜನರನ್ನು ತಲುಪುತ್ತಾರೆ, ತರುತ್ತಾರೆ'ಎಂದು ಹೇಳುತ್ತಿದ್ದುದನ್ನು ನೆನಪಿಸಿದರು.

ಪಕ್ಷದ ಸದಸ್ಯತ್ವವನ್ನು 10 ಸಾವಿರಕ್ಕೆ ಹೆಚ್ಚಿಸುವ, ರಾಜಕೀಯ ಚಟುವಟಿಕೆ, ಚಳುವಳಿಗಳನ್ನು ತೀವ್ರಗೊಳಿಸುವ, ಪಕ್ಷವನ್ನು ಸೈದ್ಧಾಂತಿಕವಾಗಿ ಸಂಘಟನಾತ್ಮಕವಾಗಿ ಬಲಪಡಿಸುವ ನಿರ್ದಿಷ್ಟ ಕರ್ತವ್ಯಗಳನ್ನು ಸಮ್ಮೇಳನದ ಮುಂದಿಟ್ಟು ಪಿ.ರಾಮಚಂದ್ರನ್ ತಮ್ಮ ಸಮಾರೋಪ ಭಾಷಣ ಮುಗಿಸಿದರು.



ಪುಸ್ತಕವೇ ಎಲ್ಲೆಲ್ಲೂ .....

ಈ ಬಾರಿಯ ಸಮ್ಮೇಳನದಲ್ಲಿ 'ಪುಸ್ತಕ ಉತ್ಸಾಹ' ತುಂಬಿ ತುಳುಕುತ್ತಿತ್ತು. ಸಭಾಂಗಣ ಪ್ರವೇಶಿಸುವಾಗ ಪ್ರತಿನಿಧಿಗಳಿಗೆ ಮೊದಲ ಸ್ವಾಗತ ನೀಡುತ್ತಿದ್ದುದು ಪುಸ್ತಕಗಳೇ. ಕೋಲಾರದ ಈ ಹಿಂದಿನ ಸಮ್ಮೇಳನದಲ್ಲಿ ಇ. ಬಾಲಾನಂದನ್ ಓದಿ, ಓದಿ ಮತ್ತಷ್ಟು ಓದಿ' ಎಂದು ಕರೆ ನೀಡಿದ್ದರು. ಪಕ್ಷದ ಕಾರ್ಯಕರ್ತರು ಓದಿನಿಂದ ಪರಿಪೂರ್ಣರಾಗಬೇಕು ಎಂದು ತಿಳಿಸಿದ್ದರು. ಇದು ಹೌದು ಎನ್ನುವಂತೆ ಈ ಬಾರಿ ಪುಸ್ತಕ ಉತ್ಸಾಹ ಚಿಮ್ಮಿತು.

ಸಮ್ಮೇಳನದ ಹೊರಾಂಗಣದಲ್ಲಿ ಬೆಂಗಳೂರಿನ ರೇಣುಕಾ, ಗುಲ್ಬರ್ಗದ ಸುಸಿಲ್ [illegible] ಬಂದೀಖಾನೆಗಾಗಿ ಗುಲ್ಬರ್ಗದ ಸಂಗಾತಿಗಳು ಪ್ರತ್ಯೇಕ ಮಳಿಗೆ ತೆರೆದರೆ, ಬೆಂಗಳೂರಿನ ಸಂಗಾತಿಗಳು ಬೃಹತ್ ಪುಸ್ತಕ ಪ್ರದರ್ಶನ ಏರ್ಪಡಿಸಿದ್ದರು.

ಪಕ್ಷದ ಪ್ರಕಟಣೆಗಳು, ಸಾಮೂಹಿಕ ಸಂಘಟನೆಗಳ ಪ್ರಕಟಣೆಗಳು, ಪಕ್ಷದ ಸಂಗಾತಿಗಳ ಪ್ರಕಟಣೆಗಳು ಗಮನ ಸೆಳೆಯುವಂತೆ ಪ್ರದರ್ಶಿಸಲಾಗಿತ್ತು. ಜೊತೆಗೆ ಸೋವಿಯತ್ ದೇಶದ ಕಮ್ಯುನಿಸ್ಟ್ ಸಿದ್ಧಾಂತ ಸಾರುವ ಪುಸ್ತಕಗಳು, ಮಕ್ಕಳ ಪುಸ್ತಕಗಳು ಮೇಲುಗೈ ಪಡೆದಿದ್ದವು.

ಎಂದಿನಂತೆ ಪಕ್ಷದ ಕಾರ್ಯಕ್ರಮಕ್ಕಾಗಿ ದೇಶವೆಲ್ಲಾ ಸುತ್ತುವ ಸಂಗಾತಿಗಳು ಪಕ್ಷದ ಚಿಹ್ನೆ, ಪಕ್ಷದ ನಾಯಕರ

17ನೇ ರಾಜ್ಯ ಸಮ್ಮೇಳನ ಅಂಗೀಕರಿಸಿದ ನಿರ್ಣಯಗಳು

ಪಡಿತರ ವಿತರಣೆಯ ಅವ್ಯವಸ್ಥೆ ಸರಿಪಡಿಸಿ

ಕಳೆದ ಆರು ದಶಕಗಳಿಂದ ಜಾರಿಯಲ್ಲಿ ಇದ್ದ ಪಡಿತರ ವಿತರಣೆ ಪದ್ಧತಿ ಹಿಂದಿನ ಕಾಂಗ್ರೆಸ್ ಮತ್ತು ಇಂದಿನ ಎನ್‌ಡಿಎ ಸರ್ಕಾಗಳ ಉದಾರೀಕರಣದ ನೀತಿಗಳಿಂದಾಗಿ ನಿಧಾನವಾಗಿ ನಾಶವಾಗುತ್ತಿರುವುದನ್ನು ಸಮ್ಮೇಳನದ ನಿರ್ಣಯವೊಂದು ಜನತೆಯ ಗಮನಕ್ಕೆ ತಂದಿದೆ. ಈ ನೀತಿಗಳಿಂದ ಆಹಾರ ಸಬ್ಸಿಡಿಯನ್ನು ತೆಗೆದುಹಾಕಲಾಗಿದ್ದು, ಪಡಿತರದ ದರಕ್ಕೂ ಮಾರುಕಟ್ಟೆ ದರಕ್ಕೂ ವ್ಯತ್ಯಾಸವಿಲ್ಲದಂತಾಗಿದೆ.

ರಾಜ್ಯದಲ್ಲಿ ಈಗಾಗಲೇ ಇದ್ದ ಸುಮಾರು 67 ಲಕ್ಷ ಹಸಿರು ಕಾರ್ಡ್‌ದಾರರನ್ನು 29 ಲಕ್ಷಕ್ಕಿಳಿಸಿ ಉಳಿದವರಿಗೆ ಕೆಂಪು ಬಣ್ಣದ ಚೀಟಿಯನ್ನು ನೀಡಲು ಸರಕಾರ ತಯಾರಿ ನಡೆಸಿದೆ. ಬಡತನ ರೇಖೆಗಿಂತ ಕೆಳಗಿರುವವರ ಸಮೀಕ್ಷೆ ನಡೆಸಿ ನಿರ್ಧರಿಸುವ ವಿಧಾನವೇ ಸಂಪೂರ್ಣವಾಗಿ ಅವೈಜ್ಞಾನಿಕವಾಗಿದೆ. ಇದಲ್ಲದೆ ಸಾಕಷ್ಟು ಅವಾಂತರ, ಸ್ವಜನಪಕ್ಷಪಾತ ನಡೆದು, ಇದರಿಂದಾದ ಪ್ರತಿಭಟನೆಯ ನೆಪ ಮಾಡಿ ಪಡಿತರ ಚೀಟಿ ನೀಡುವುದನ್ನು ಸ್ಥಗಿತಗೊಳಿಸಲಾಗಿದೆ ಎಂದು ನಿರ್ಣಯ ಹೇಳಿದೆ.

ಸಮೀಕ್ಷೆಯನ್ನು ಸಮರ್ಪಕವಾಗಿ ನಡೆಸಿ ಹಳದಿ ಕಾರ್ಡುಗಳ ವಿತರಣೆ ನಂತರ 40 ಲಕ್ಷ ಹಸಿರು ಕಾರ್ಡುಗಳನ್ನು ಕೆಂಪು ಕಾರ್ಡುಗಳಾಗಿ (ಬಡತನ ರೇಖೆ ಮೇಲಿರುವವರ) ಪರಿವರ್ತಿಸದಂತೆ ಒತ್ತಾಯಿಸುತ್ತಾ ಇದಕ್ಕಾಗಿ ರಾಜ್ಯಾದ್ಯಂತ ಪ್ರತಿಭಟನಾ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಣಯ ಕರೆ ನೀಡಿದೆ.

ವಸತಿ ಸಮಸ್ಯೆ ಬಗೆಹರಿಸಿ

ರಾಜ್ಯದಲ್ಲಿ 85 ಲಕ್ಷ ಕುಟುಂಬಗಳಿದ್ದು, ಸುಮಾರು 27 ಲಕ್ಷ ಕುಟುಂಬಗಳಿಗೆ (ಶೇಕಡಾ 26) ಮನೆಯಿಲ್ಲ. ಇದರ ಜತೆಗೆ ಹೆಚ್ಚಿನ ಬಡವರ ಕಚ್ಚಾಮನೆಗಳ ದುಸ್ಥಿತಿ, 35 ಲಕ್ಷ ಜನ ಕೊಳಗೇರಿಗಳಲ್ಲಿ ವಾಸಿಸುವ ಸ್ಥಿತಿ ಸೇರಿಸಿದರೆ ವಸತಿ ಸಮಸ್ಯೆಯ ತೀವ್ರತೆಯ ಚಿತ್ರಣವನ್ನು ನಿರ್ಣಯವೊಂದು ಜನತೆ ಮುಂದಿಟ್ಟಿದೆ. ಇದನ್ನು ಎದುರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಲವಾರು ಯೋಜನೆಗಳಿದ್ದರೂ 27 ಲಕ್ಷಗಳ ಅಗತ್ಯಕ್ಕೆ ಸರಾಸರಿ ಪ್ರತಿಶತ ಕೇವಲ 1 ಲಕ್ಷ ಮನೆ ಕಟ್ಟಿಸುವುದಕ್ಕಿಂತ, ಆಶ್ರಯ ಮನೆಗಳಿಗೆ 153 ಕೋಟಿ ರೂಗಳ ಅಗತ್ಯಕ್ಕೆ ಬದಲಾಗಿ 45 ಕೋಟಿ ರೂ. ಮಾತ್ರ ಬಿಡುಗಡೆ ಮಾಡಿರುವುದು ವಸತಿಯ ಬೇಡಿಕೆ ಹಾಗೂ ಪೂರೈಕೆ ನಡುವೆ ಇರುವ ಕಂದರದ ಅಗಾಧತೆಯನ್ನು ತೋರಿಸುತ್ತದೆ ಎಂದು ನಿರ್ಣಯ ಜನತೆಯನ್ನು ಎಚ್ಚರಿಸಿದೆ.

ಫಲಾನುಭವಿಗಳ ಆಯ್ಕೆ, ಮನೆ ಕಟ್ಟಿಸುವ, ಸಾಲ ಕೊಡುವ ಇತ್ಯಾದಿ ಎಲ್ಲಾ ಹಂತಗಳಲ್ಲಿ ಭ್ರಷ್ಟಾಚಾರ, ಸ್ವಜನಪಕ್ಷಪಾತ-ಇವೆಲ್ಲದರಿಂದ ಹಲವು ಯೋಜನೆಗಳನ್ನು ಸರ್ಕಾರ ಹಮ್ಮಿಕೊಳ್ಳುತ್ತಿದ್ದರೂ ವಸತಿಹೀನ ಬಡವರಿಗೆ ಏನೂ ಪ್ರಯೋಜನವಾಗಲಿಲ್ಲ.

ಈಗ ಈ ಕನಿಷ್ಠ ಜವಾಬ್ದಾರಿಯಿಂದಲೂ ನುಣುಚಿಕೊಳ್ಳಲು 1998 ರ ರಾಷ್ಟ್ರೀಯ ಗೃಹ ಮತ್ತು ವಸತಿ ನೀತಿ, ಇದನ್ನು ಖಾಸಗಿ ವಲಯಕ್ಕೆ ವಹಿಸಲಾಗುವುದು ಎಂದಿದೆ. ಇದಲ್ಲದೆ ಕಡಿಮೆ ವೆಚ್ಚದ ಮನೆಗಳಿಗೆ ನೀಡುತ್ತಿದ್ದ ಸಬ್ಸಿಡಿ ಕಡಿತ, ಕೊಳಗೇರಿ ನಿವಾಸಿಗಳನ್ನು ಒಕ್ಕಲೆಬ್ಬಿಸುವುದು ಮತ್ತು ಉದಾರೀಕರಣದಿಂದ ಜನತೆಯ ಆದಾಯದಲ್ಲಿ ಆಗಿರುವ ಇನ್ನಷ್ಟು ಕಡಿತಗಳು - ವಸತಿಹೀನ ವ್ಯವಸ್ಥೆಯನ್ನು ಉಲ್ಬಣಗೊಳಿಸಿವೆ. ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲ ವಸತಿಹೀನರಿಗೂ ಮನೆ ಒದಗಿಸಬೇಕು. ಫಲಾನುಭವಿಗಳನ್ನು ಗ್ರಾಮಸಭೆಗಳಲ್ಲೇ ಕಡ್ಡಾಯವಾಗಿ ಆಯ್ಕೆ ಮಾಡುವಂತಾಗಬೇಕು ಎಂದು ಸಮ್ಮೇಳನ ನಿರ್ಣಯವೊಂದು ಒತ್ತಾಯಿಸಿದೆ.


ಅಂಗನವಾಡಿ ನೌಕರರ ಸಾಮಾಜಿಕ ಭದ್ರತೆ ನೀಡಿ

1975 ರಿಂದ 80 ಸಾವಿರಕ್ಕೂ ಹೆಚ್ಚು ಮಹಿಳೆಯರು ಯಾವುದೇ ಕಾನೂನು ಭದ್ರತೆಯಿಲ್ಲದೆ, ಗೌರವಧನದ ಆಧಾರದಲ್ಲಿ ದುಡಿಯುತ್ತಿದ್ದಾರೆ. ಇವರು ಸಾಮಾಜಿಕ ಅಭದ್ರತೆ ಮಾತ್ರವಲ್ಲ, ಸರ್ಕಾರದ ಹಲವು ಇಲಾಖೆಗಳ ಕೆಲಸ ಮಾಡುವಾಗ ದೌರ್ಜನ್ಯವನ್ನು ಎದುರಿಸಬೇಕಾಗಿದೆ. ಹೊಸಪೇಟೆಯ ಮಲ್ಲಯ್ಯನಗುಡಿಯಲ್ಲಿ, ರಾಯಭಾಗದಲ್ಲಿ, ಉತ್ತರ ಕನ್ನಡದ ಸಿದ್ಧಾಪುರದಲ್ಲಿ, ತುಮಕೂರಿನ ಗೋಪನಹಳ್ಳಿಯಂತಹ ಹಲವು ಕಡೆ ನಿರ್ದಿಷ್ಟ ಪ್ರಕರಣಗಳು ಬೆಳಕಿಗೆ ಬಂದಿವೆ. ಆದರೆ ಪರಿಣಾಮಕಾರಿ ಕ್ರಮ ತೆಗೆದುಕೊಳ್ಳುವಲ್ಲಿ, ಈ ಪ್ರಕರಣಗಳಲ್ಲಿ ಆಪಾದಿತರನ್ನು ಕೂಡಲೇ ಬಂಧಿಸಿಬೇಕು. ಆ ಘಟನೆಗಳು ಮತ್ತೆ ಮರುಕಳಿಸದಂತೆ ಸೂಕ್ತ ರಕ್ಷಣೆ ನೀಡಬೇಕೆಂದು ಸಿಪಿಐ(ಎಂ) ರಾಜ್ಯ ಸಮ್ಮೇಳನ ಸರ್ಕಾರವನ್ನು ನಿರ್ಣಯವೊಂದರ ಮೂಲಕ ಒತ್ತಾಯಿಸಿದೆ.


ಮಹಿಳೆಯರ ಮತ್ತು ದಲಿತರ ಮೇಲಿನ ದೌರ್ಜನ್ಯ ವಿರೋಧಿಸಿ


ವಿವಿಧ ರೂಪಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ-ಹಿಂಸೆ ಹೆಚ್ಚುತ್ತಿದೆ. ಇವನ್ನು ತೀವ್ರವಾಗಿ ಖಂಡಿಸುವ ನಿರ್ಣಯವೊಂದನ್ನು ಅಂಗೀಕರಿಸಿದೆ. ಹೆಣ್ಣು ಭ್ರೂಣ-ಹತ್ಯೆ, ಹೆಣ್ಣು ಕೂಸುಗಳ ಮಾರಾಟ, ಬಾಲ್ಯ ವೇಶ್ಯಾವಾಟಿಕೆ, ಕೆಲಸದ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯ, ವರದಕ್ಷಿಣೆ ದಾಳಿ-ಇಂತಹ ಹಲವು ನಿರ್ದಿಷ್ಟ ಘಟನೆಗಳು ನಡೆದಿದ್ದಾಗಿ, ಇಂತಹ ಕೇಸುಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ ಕೊಡುವುದು ದೂರವಿರಲಿ - ಕನಿಷ್ಟ ದೂರು ದಾಖಲಿಸುವ ಸ್ಥಿತಿ ಸಹ ಇಲ್ಲ. ಇದು ಸಾಲದೆಂಬಂತೆ ಮಾಧ್ಯಮಗಳಲ್ಲಿ ಮಹಿಳೆಯನ್ನು ವ್ಯಾಪಾರದ ವಸ್ತುವಾಗಿ ಪ್ರದರ್ಶಿಸಲಾಗುತ್ತಿದೆ. ಇದನ್ನು ತಡೆಗಟ್ಟಲು ಸುಪ್ರೀಂ ಕೋರ್ಟ್ ಎಲ್ಲಾ ಕಡೆ ದೂರು ಕಮಿಟಿಗಳು ಇರಬೇಕು ಎಂದು ತೀರ್ಪಿತ್ತಿದ್ದರೂ ಇದು ಜಾರಿಯಾಗಿಲ್ಲ. ಇಂತಹ ಸ್ಥಿತಿಯನ್ನು ಸಿಪಿಐ(ಎಂ)ನ 17ನೇ ಸಮ್ಮೇಳನದ ನಿರ್ಣಯ ತೀವ್ರವಾಗಿ ಖಂಡಿಸಿದೆ.


ಕಾರ್ಯದರ್ಶಿ ಮಂಡಳಿ ಸದಸ್ಯರು


ಎಸ್.ಸೂರ್ಯನಾರಾಯಣ ರಾವ್ (ಕಾರ್ಯದರ್ಶಿ)


ಕೆ.ಆರ್.ಶ್ರೀಯಾನ್


ಬಿ.ಮಾಧವ


ವಿ.ಜೆ.ಕೆ.ನಾಯರ್


ಜಿ.ಎನ್.ನಾಗರಾಜ್



ಎಸ್.ವೈ.ಗುರುಶಾಂತ್


ಜಿ.ಸಿ.ಬಯ್ಯಾರೆಡ್ಡಿ


ನಿತ್ಯಾನಂದಸ್ವಾಮಿ


ಮಾರುತಿಮಾನ್ಪಡೆ


ಪ್ರಸನ್ನ ಕುಮಾರ್


ಕೆ.ನೀಲಾ



ಹುತಾತ್ಮರಿಗೆ ನಮನ

ಹೆಜ್ಜಾಲ ಗೋಲಿಬಾರ್ - ತಪ್ಪಿತಸ್ಥ ಪೋಲಿಸರಿಗೆ ಶಿಕ್ಷೆಗೆ ಒತ್ತಾಯ

1997 ರಲ್ಲಿ ಹೆಜ್ಜಾಲದಲ್ಲಿ ವೆಳ್ಳಿಯಪ್ಪ ಟೆಕ್ಸ್‌ಟೈಲ್ ಕಾರ್ಮಿಕರು ಶಾಂತಿಯುತವಾಗಿ ರಸ್ತೆತಡೆ ನಡೆಸುತ್ತಿದ್ದ ಸಂದರ್ಭದಲ್ಲಿ, ಯಾವುದೇ ಮುನ್ನೆಚ್ಚರಿಕೆ ಇಲ್ಲದೆ ನಡೆಸಿದ ಗೋಲಿಬಾರ್‌ನಲ್ಲಿ 3 ಜನ ಸತ್ತು, 25 ಜನರಿಗೆ ಗಾಯಗಳಾಗಿವೆ. ಕಾರ್ಮಿಕ ಮುಖಂಡರು ಹಾಗೂ ಕಾರ್ಮಿಕರ ಮೇಲೆ 307 ಕಲಮು ಸೇರಿದಂತೆ, ಹಲವಾರು ಸುಳ್ಳು ಮೊಕದ್ದಮೆಗಳನ್ನು ಹಾಕಿದ್ದಾರೆ.

ಇದರ ವಿಚಾರಣೆಗೆ ನೇಮಕವಾದ ಹಿರೇಮಠ್ ಆಯೋಗ ವರದಿ ಸಲ್ಲಿಸಿದ್ದು, ಆಯೋಗ ತಪ್ಪಿತಸ್ಥರೆಂದು ನಿರ್ಣಯಿಸಿರುವ ಅಧಿಕಾರಿಗಳಿಗೆ ಶಿಕ್ಷೆ ಆಗಬೇಕು. ಸತ್ತವರಿಗೆ ಹಾಗೂ ಇತರ ಸಂತ್ರಸ್ತರಿಗೆ ಪರಿಹಾರ ಕೊಡಬೇಕು, ಸುಳ್ಳು ಮೊಕದ್ದಮೆಗಳನ್ನು ವಾಪಸು ತೆಗೆಯಬೇಕು ಎಂದು ನಿರ್ಣಯವೊಂದು ಒತ್ತಾಯಿಸಿದೆ.

ಕೋಮುವಾದದ ವಿರುದ್ಧ ದೃಢ ಕ್ರಮ ಕೈಗೊಳ್ಳಿ

ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲೂ ಸಂಘ ಪರಿವಾರದ ಪ್ರಯತ್ನಗಳಿಂದ ವ್ಯಾಪಕವಾಗಿ ಹರಡುತ್ತಿರುವ ಕೋಮುವಾದಿ ವಿಷದ ಬಗ್ಗೆ 17ನೇ ಸಿಪಿಐ(ಎಂ) ರಾಜ್ಯಸಮ್ಮೇಳನ ಗಂಭೀರ ಕಳವಳ ವ್ಯಕ್ತಪಡಿಸಿದೆ.

ವಾಡಿ ಚರ್ಚ್‌ನಲ್ಲಿ ಬಾಂಬ್ ಸ್ಫೋಟ, ಬೀದರ್ ಈದ್ಗಾ ಮೈದಾನ ವಿವಾದ, ಹುಬ್ಬಳ್ಳಿ ಈದ್ಗಾ ಮೈದಾನ ನೆನೆಗುದಿಗೆ ಬಿದ್ದಿರುವುದು, ಕೋಲಾರದ ಸಂಗೊಂಡಹಳ್ಳಿಯಲ್ಲಿ ವಕ್ಫ್ ಮೈದಾನದ [illegible] ಮುಂತಾದ ನಿರ್ದಿಷ್ಟ

ಅಯೋಧ್ಯೆಯ ವಿವಾದಗ್ರಸ್ತ ನಿವೇಶನಕ್ಕೆ ಕಾನೂನು ಧಿಕ್ಕರಿಸಿ ಪ್ರವೇಶ ಮಾಡಿದ, ವಿ.ಹೆಚ್.ಪಿ. ಉದ್ದಟತನ, ಶಿಕ್ಷಣದ ಕೇಸರೀಕರಣ ಇವೆಲ್ಲವೂ ಕೋಮುಭಾವನೆಗಳನ್ನು ಕೆರಳಿಸುತ್ತಿವೆ. ಮುಸ್ಲಿಮರ ನಡುವೆ ಇದೇ ರೀತಿ ಮೂಲಭೂತವಾದಿ ಕೋಮುಭಾವನೆ ಬಿತ್ತಲು ಪ್ರಯತ್ನಿಸುತ್ತಿರುವ ಜಮಾತೇ-ಇಸ್ಲಾಮಿನಂತಹ ಸಂಘಟನೆಗಳು ಅಪಾಯಕಾರಿ. ಈ ಕೋಮುವಾದಿ ವೈರಸ್‌ನ್ನು ಮಟ್ಟ ಹಾಕಲು ದೃಢ ಕ್ರಮ ಕೈಗೊಳ್ಳಬೇಕೆಂದು ನಿರ್ಣಯ ಒತ್ತಾಯಿಸಿದೆ.

ನೈಜ ಮತ್ತು ತೀವ್ರ ಭೂಸುಧಾರಣೆ ಜಾರಿಗೆ ಆಗ್ರಹ

ಹರಿದು ಹಂಚಿ ಹೋಗಿದ್ದ ಕನ್ನಡದ ನೆಲವನ್ನು ಒಂದುಗೂಡಿಸಿ, ಕರ್ನಾಟಕದ ಏಕೀಕರಣವನ್ನು ಪೂರ್ಣಗೊಳಿಸಿ ಸುಮಾರು 50 ವರ್ಷಗಳಾಗುತ್ತಿದ್ದರೂ ಕರ್ನಾಟಕದ ಭೂಸಂಬಂಧಗಳು ಇವತ್ತಿಗೂ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ ಭಿನ್ನವಾಗಿವೆ. ಈ ಭಿನ್ನತೆಗೆ ಇರುವ ಸ್ವಾತಂತ್ರ್ಯ ಪೂರ್ವದ ಚಾರಿತ್ರಿಕ ಕಾರಣಗಳನ್ನು ಒಪ್ಪಬಹುದಾದರೂ ಸ್ವಾತಂತ್ರ್ಯ ನಂತರ ಜಾರಿಗೆ ಬಂದ ಕಾಂಗ್ರೆಸ್ ಭೂಸುಧಾರಣೆಗಳಲ್ಲಿ ಅಡಗಿದ್ದ ದೋಷಗಳಿಂದಾಗಿ ಭೂಸುಧಾರಣೆಗಳು ಅವುಗಳ ವಿಕೃತ ರೂಪದಲ್ಲಷ್ಟೇ ಜಾರಿಗೆ ಬಂದಿವೆ. ಇತ್ತೀಚಿನ ವರ್ಷಗಳಲ್ಲಿ ವಿನಾಶಕಾರಿ ಉದಾರೀಕರಣದ ನೀತಿಗಳನ್ನು ಅಂಗೀಕರಿಸಿದ ಬಳಿಕ ಭೂಸುಧಾರಣಾ ಕಾಯ್ದೆಗೆ ಮಾಡಲಾದ ತಿದ್ದುಪಡಿಗಳಿಂದಾಗಿ ಕರ್ನಾಟಕದ ಭೂಸುಧಾರಣೆಯಲ್ಲಿ ಏನು ಅರ್ಥಉಳಿದಿಲ್ಲ.

ಹಿಂದೆ ಹಳೆಯ ಮೈಸೂರು ಪ್ರಾಂತ್ಯದಲ್ಲಿ ರೈತವಾರಿ ಪದ್ಧತಿ ಜಾರಿಯಲ್ಲಿತ್ತು. ಟಿಪ್ಪು ಸುಲ್ತಾನರ ಆಳ್ವಿಕೆಯ ಕಾಲದಲ್ಲಿ ಇಲ್ಲಿ ಜಮೀನ್ದಾರಿ ಪದ್ಧತಿ ರದ್ದಾಗಿ ರೈತವಾರಿ ಪದ್ಧತಿ ಜಾರಿಗೆ ಬಂದಿತ್ತು. ಕೊಡಗು ಒಂದು ಚಿಕ್ಕ ರಾಜ್ಯವಾಗಿತ್ತು. ಭೂಮಾಲಿಕರ ಶೋಷಣೆಯ ವಿರುದ್ಧ ಇಲ್ಲಿಯ ರೈತರು ನಡೆಸಿದ ಹೋರಾಟದ ಫಲವಾಗಿ ಇಲ್ಲೊಂದು ಟೆನೆನ್ಸಿ ಕಾಯ್ದೆ ಜಾರಿಗೆ ಬಂದಿತ್ತು. ಮದ್ರಾಸು ಪ್ರಾಂತ್ಯಕ್ಕೆ ಸೇರಿದ ದ.ಕ. ಜಿಲ್ಲೆಯಲ್ಲಿ ವ್ಯಾಪಕವಾದ ಗೇಣಿದಾರ ಪದ್ಧತಿ ಜಾರಿಯಲ್ಲಿತ್ತು. ಬೆಳೆದುದರ ಬಹುಭಾಗ ಭೂಮಾಲಿಕನಿಗೆ ಹೋಗುತ್ತಿತ್ತು. ಬಿಟ್ಟಿ ದುಡಿಮೆ, ಹಬ್ಬ ಹುಣ್ಣಿಮೆಗಳಲ್ಲಿ ಕಾಣಿಕೆ ಸಲ್ಲಿಸುವ ಪದ್ಧತಿಯಿತ್ತು. ಆಂಧ್ರದ ಗಡಿಗೆ ಹೊಂದಿಕೊಂಡಿರುವ ಕೋಲಾರ ಜಿಲ್ಲೆಯಲ್ಲಿ ಜೋಡಿ ಇನಾಂ ಪದ್ಧತಿ ಜಾರಿಯಲ್ಲಿತ್ತು. ಬೆಳೆದುದರಲ್ಲಿ ಹೆಚ್ಚಿನ ಭಾಗವನ್ನು ಜೋಡಿದಾರರಿಗೆ ತೆರಬೇಕಾಗುತ್ತಿತ್ತು. ಮುಂಬೈ ಪ್ರಾಂತ್ಯಕ್ಕೆ ಸೇರಿದ ಉತ್ತರಕನ್ನಡ, ಧಾರವಾಡ, ಬೆಳಗಾವಿ, ವಿಜಾಪುರ ಜಿಲ್ಲೆಗಳಲ್ಲಿ ವ್ಯಾಪಕವಾದ ಭೂಮಾಲಿಕ ಪದ್ಧತಿ ಜಾರಿಯಲ್ಲಿದ್ದು ಭೂಮಾಲಿಕರಿಗೆ ದೊಡ್ಡ ಪ್ರಮಾಣದಲ್ಲಿ ಗೇಣಿಕೊಡಬೇಕಾಗುತ್ತಿತ್ತು. ವಾರಲೀ ಆದಿವಾಸಿಗಳ ಚಾರಿತ್ರಿಕ ಹೋರಾಟದ ಫಲವಾಗಿ ಜಾರಿಗೆಬಂದ ಮುಂಬಯಿ ಟೆನೆನ್ಸಿ ಕಾಯ್ದೆ ಈ ಪ್ರದೇಶದಲ್ಲಿಯೂ ಜಾರಿಯಾಗತೊಡಗಿತ್ತು. ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ಪ್ರದೇಶದಲ್ಲಂತೂ ಕ್ರೂರವಾದ ಜಮೀನ್ದಾರಿ, ಜಾಗೀರ್ದಾರಿ ಪದ್ಧತಿ ಅಸ್ತಿತ್ವದಲ್ಲಿತ್ತು.

ವಿವಿಧ ರೀತಿಯ ಭೂ ಸಂಬಂಧಗಳನ್ನು ಹೊಂದಿದ ಪ್ರದೇಶಗಳು ಕರ್ನಾಟಕ ರಾಜ್ಯದಲ್ಲಿ ಒಂದಾದಾಗ, ಅಂದಿನ ರೈತ ಚಳುವಳಿ ಏಕರೂಪದ ಭೂಸುಧಾರಣಾ ಕಾನೂನಿಗಾಗಿ ಒತ್ತಾಯಿಸಿತು. ಇಷ್ಟರಲ್ಲಿ ಕೇರಳರಾಜ್ಯದಲ್ಲಿ ಅಧಿಕಾರಕ್ಕೆ ಬಂದಿದ್ದ ಕಾಮ್ರೇಡ್ ಇ.ಎಂ.ಎಸ್. ನಂಬೂದರಿಪಾದ್ ಅವರ ನೇತೃತ್ವದ ಕಮ್ಯುನಿಸ್ಟ್ ಸರ್ಕಾರವು ಜಾರಿಗೆ ತಂದ ಕ್ರಾಂತಿಕಾರಿ ಭೂಸುಧಾರಣಾ ಕ್ರಮಗಳಿಂದ ಕರ್ನಾಟಕದ ಭೂಮಾಲಕರು ಎಚ್ಚರಗೊಂಡರು. ಅಂದು ಕಂದಾಯ ಮಂತ್ರಿಗಳಾಗಿದ್ದ ಕಡಿದಾಳ ಮಂಜಪ್ಪನವರಿಗೆ ಭೂಮಾಲಿಕರಿಂದ ಪ್ರಾಣ ಬೆದರಿಕೆ ಹಾಕಲಾಯಿತು. ಹೀಗೆ ಅಸ್ತಿತ್ವಕ್ಕೆ ಬಂದ 1961ರ ಮೈಸೂರು ಭೂ ಸುಧಾರಣೆಯ ಕಾಯ್ದೆ ಸಹಜವಾಗಿ ಭೂಮಾಲೀಕ ಹಿತಗಳನ್ನು ರಕ್ಷಿಸುವಂತಾಯಿತು. ಇದೂ ತಕ್ಷಣ ಜಾರಿಗೂ ಬರಲಿಲ್ಲ. ಕೆಲವು ತಿದ್ದಪಡಿಗಳೊಂದಿಗೆ 1965ರಲ್ಲಿ ಜಾರಿಗೆ ಬಂತು. ಮುಂದೆ 1968, 1970 ಹಾಗೂ 1972ರಲ್ಲಿ ತಿದ್ದುಪಡಿಗಳಾಗಿ ಕೊನೆಗೆ ಸಮಗ್ರ ಎಂದುಕೊಳ್ಳಲಾದ ತಿದ್ದುಪಡಿಗಳೊಂದಿಗೆ 1974ರಲ್ಲಿ ದೇವರಾಜ್ ಅರಸ ಮುಖ್ಯಮಂತ್ರಿಯಾಗಿದ್ದಾಗ "ಕರ್ನಾಟಕ ಭೂಸುಧಾರಣಾ ಕಾಯ್ದೆ-1974 ಜಾರಿಗೆ ಬಂತು."

ಕಾಂಗ್ರೆಸ್ ಸರ್ಕಾರ ತನ್ನ ಭೂಸುಧಾರಣಾ ಕಾಯ್ದೆಯನ್ನು ಭಾರೀ ಕ್ರಾಂತಿಕಾರಕ ಎಂದು ಪ್ರಚಾರಮಾಡಿತು. ಆದರೆ ವಾಸ್ತವಿಕವಾಗಿ ಪರಿಸ್ಥಿತಿ ಭಿನ್ನವಾಗಿತ್ತು. ಕಾಂಗ್ರೆಸ್ ಭೂಸುಧಾರಣೆ ಜಾರಿಗೆ ಬರುತ್ತಿರುವುದು ಕಾಂಗ್ರೆಸನ್ನು ಬೆಂಬಲಿಸುತ್ತಾ ಬಂದಿದ್ದ ಭೂಮಾಲಿಕರಿಗೆ ಮೊದಲೇ ತಿಳಿಯಿತು. ಅವರು ಕಾನೂನಿನಲ್ಲಿದ್ದ ಲೋಪದೋಷಗಳನ್ನು ಬಳಸಿಕೊಂಡು ತಮ್ಮ ಭೂಮಿ ತಮ್ಮ ಕೈತಪ್ಪಿ ಹೋಗುವುದನ್ನು ಯಶಸ್ವಿಯಾಗಿ ತಡೆದರು. ಗೇಣಿದಾರರು ತಾವು ವ್ಯವಸಾಯ ಮಾಡುತ್ತಿರುವ ಭೂಮಿಯ ಒಡೆತನಕ್ಕಾಗಿ ಅರ್ಜಿ ಸಲ್ಲಿಸಬೇಕಾಗಿತ್ತು. ಭೂನ್ಯಾಯಮಂಡಳಿಗಳು ತನಿಖೆಮಾಡಿ ಗೇಣಿಹಕ್ಕು ಇದ್ದವರಿಗೆ ಭೂಮಿಯ ಒಡೆತನ ನೀಡಬೇಕಾಗಿತ್ತು. ಆದರೆ ಭೂನ್ಯಾಯ ಮಂಡಳಿಗಳಲ್ಲಿದ್ದ ಭೂಮಾಲಿಕರ ಪ್ರತಿನಿಧಿಗಳು ಮತ್ತು ಲಂಚಕೋರ ಅಧಿಕಾರಿಗಳು ಸೇರಿ ನೈಜ ಗೇಣಿದಾರರಿಗೆ ಭೂಮಿ ಸಿಗದಂತೆ ಮಾಡಿದರು. ಕರಾವಳಿ ಜಿಲ್ಲೆಗಳಲ್ಲಿ ಜನ ಜಾಗೃತಿ ಮತ್ತು ಸಂಘಟಿತ ಹೋರಾಟಗಳ ಕಾರಣದಿಂದ ಗೇಣಿದಾರರು ಕೆಲಮಟ್ಟಿಗೆ ನ್ಯಾಯಪಡೆಯುವಲ್ಲಿ ಯಶಸ್ವಿಯಾದರು. ಆದರೆ ಭೂಮಾಲಿಕರ ಹಿಡಿತ ಬಿಗಿಯಾಗಿದ್ದ ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಅರ್ಹ ಗೇಣಿದಾರರರಿಗೆ ಅರ್ಜಿಗಳನ್ನು ಹಾಕಲಿಕ್ಕೇ ಬಿಡಲಿಲ್ಲ. ಗುಲ್ಬರ್ಗಾ ಒಂದು ಜಿಲ್ಲೆಯಲ್ಲಿ ಸ್ವೀಕೃತವಾದ ಕೇವಲ 10 ಸಾವಿರ ಅರ್ಜಿಗಳಲ್ಲಿ ಸುಮಾರು 9 ಸಾವಿರ ಅರ್ಜಿಗಳನ್ನು ತಿರಸ್ಕರಿಸಲಾಯಿತು. ಹೀಗೆ ಭೂಮಿಯ ಹಕ್ಕನ್ನು ಕಳೆದುಕೊಂಡ ಲಕ್ಷಾಂತರ ಗೇಣಿದಾರರು ನಿರ್ಗತಿಕರಾದರು. ಭೂಮಾಲೀಕರು ಸರ್ಕಾರಕ್ಕೆ ಬಿಟ್ಟು ನಿರುಪಯುಕ್ತ ಭೂಮಿಯ ಬಾಬತ್ತು ಸಿಕ್ಕಾಪಟ್ಟೆ ಪರಿಹಾರ ಪಡೆದುಕೊಂಡರು. ಹೀಗೆ ಭೂಸುಧಾರಣಾ ಕಾಯ್ದೆ ಜಾರಿಗೆ ಬಂದಿದ್ದರೂ, ಕರ್ನಾಟಕದಲ್ಲಿ ಆಗಬೇಕಾಗಿದ್ದ ಬದಲಾವಣೆಗಳು ಆಗಲಿಲ್ಲ.

ಪುಟ 14 ಕ್ಕೆ

ನೂತನ ರಾಜ್ಯ ಸಮಿತಿ

12. ಜಿ.ವಿ.ಶ್ರೀರಾಮರೆಡ್ಡಿ
13. ಟಿ.ಎಸ್.ಮಣಿ
14. ವಿ.ಸುಕುಮಾರ್
15. ಭೀಮಸಿಕಲಾದಗಿ
16. ಆರ್.ಶ್ರೀನಿವಾಸ್
17. ಕೆ.ಶಂಕರ್
18. ಯು.ಬಸವರಾಜ್
19. ಸಿ.ಆರ್.ಭಟ್
20. ವಿ.ಪಿ.ಕುಲಕರ್ಣಿ
21. ಬಿ.ಲಿಂಗಪ್ಪ
22. ಟಿ.ಎಸ್.ನಾಯಕ್
23. ಕೆ.ವೇದರಾಜ್
24. ವಿಮಲಾ ಕೆ.ಎಸ್.
25. ವರಲಕ್ಷ್ಮಿ ಎಸ್.
26. ಶಾಂತಾರಾಮ ಎಸ್. ನಾಯಕ್
27. ಪ್ರಕಾಶ್ ಕೆ.
28. ಬಾಲಕೃಷ್ಣ ಶೆಟ್ಟಿ (ಬೆಂಗಳೂರು)
29. ರಾಮಚಂದ್ರಉಚ್ಚಿಲ್
30. ಮೀನಾಕ್ಷಿ ಸುಂದರಂ
31. ಇ.ಕೆ.ಎನ್.ರಾಜನ್
32. ಜೆ.ಬಾಲಕೃಷ್ಣ ಶೆಟ್ಟಿ (ಮಂಗಳೂರು)
33. ಪಿ.ವಿಶ್ವನಾಥ ರೈ
34. ಸಯ್ಯದ್ ಮುಜೀಬ್
35. ಕೆ.ಎನ್.ಉಮೇಶ್
36. ಅಮಾನುಲ್ಲಾ ಖಾನ್
37. ಕೆ.ಎಂ.ವೆಂಕಟೇಶ್

ಮಾರ್ಚ್ 19 ರಿಂದ 24 ರವರೆಗೆ ಹೈದರಾಬಾದಿನಲ್ಲಿ ನಡೆಯುವ ಅಖಿಲ ಭಾರತ ಅಧಿವೇಶನಕ್ಕೆ ಆಯ್ಕೆಯಾದ ಪ್ರತಿನಿಧಿಗಳು

ಪ್ರತಿನಿಧಿಗಳು

1. ವಿ.ಜೆ.ಕೆ.ನಾಯರ್
2. ಜಿ.ಎನ್.ನಾಗರಾಜ್
3. ಕೆ.ಆರ್.ಶ್ರೀಯಾನ್
4. ಜಿ.ಸಿ.ಬಯ್ಯಾರೆಡ್ಡಿ
5. ನಿತ್ಯಾನಂದಸ್ವಾಮಿ
6. ಮಾರುತಿ ಮಾನ್ಪಡೆ
7. ಕೆ.ನೀಲಾ
8. ಜಿ.ವಿ.ಶ್ರೀರಾಮರೆಡ್ಡಿ
9. ಕೆ.ಪ್ರಕಾಶ್

ವೀಕ್ಷಕರು

1. ಯು.ಬಸವರಾಜು 2. ಕೆ. ಶಂಕರ್

ಪರ್ಯಾಯ ಪ್ರತಿನಿಧಿಗಳು

1. ಎಸ್.ವೈ.ಗುರುಶಾಂತ್
2. ಕೆ.ಎಂ.ವೆಂಕಟೇಶ್
3. ಬಿ.ಲಿಂಗಪ್ಪ

ಆಡಳಿತ ಸುಧಾರಣಾ ಆಯೋಗದ ವರದಿಯ ಶಿಫಾರಸ್ಸುಗಳಿಗೆ ವಿರೋಧ

ರಾಜ್ಯ ಸರಕಾರವು ಆಡಳಿತ ಸುಧಾರಣೆಯ ಹೆಸರಿನಲ್ಲಿ ಹಾರನಹಳ್ಳಿ ರಾಮಸ್ವಾಮಿಯವರ ನೇತೃತ್ವದ ಸಮಿತಿಯು ಸರಕಾರಕ್ಕೆ ತನ್ನ ಅಂತಿಮ ವರದಿಯನ್ನು ಡಿಸೆಂಬರ್‌ನಲ್ಲಿ ಸಲ್ಲಿಸಿದೆ. ಅದರ ಶಿಫಾರಸ್ಸುಗಳೆಲ್ಲವೂ ನೌಕರವಿರೋಧಿಯಾಗಿದ್ದು ಸರಕಾರ ಆ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಮುಂದಾಗುತ್ತಿದೆ. ಇದು ನೌಕರರ ಜೀವನದ ಮೇಲೆ ಭಾರೀ ದುಷ್ಪರಿಣಾಮ ಬೀರಲಿವೆ ಎಂದು ಸಮ್ಮೇಳನ ಖಂಡಿಸಿದೆ. ಅಲ್ಲದೇ ಸರಕಾರ ಆ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸ ಬಾರದೆಂದು ಒತ್ತಾಯಿಸಿದೆ.

ವರದಿಯಲ್ಲಿನ ಶಿಫಾರಸ್ಸುಗಳಲ್ಲಿ ಪ್ರಮುಖವಾದ ಉದ್ಯೋಗ ಕಡಿತ, ಹೊಸ ನೇಮಕಾತಿ ಇಲ್ಲದಿರುವುದು ಅನುಕಂಪದ ಆಧಾರದ ಮೇಲೆ ನೇಮಕಾತಿ ರದ್ದು. ಇವೆಲ್ಲವೂ ಆಡಳಿತದ ಪ್ರಕ್ರಿಯೆಯ ಮೇಲೆ ಋಣಾತ್ಮಕ ಪರಿಣಾಮ ಬೀರಿ ವ್ಯವಸ್ಥೆಯೇ ಏರುಪೇರಾಗುತ್ತದೆ ಎಂಬುದನ್ನು ಸರಕಾರ ಗಮನಿಸಬೇಕು ಎಂದೂ ಒತ್ತಾಯಿಸಿದೆ.

ಭಯೋತ್ಪಾದನೆ ಮತ್ತು ಯುದ್ಧದ ವಿರುದ್ಧ

ಜಗತ್ತನ್ನು ಆವರಿಸಿರುವ ಭಯೋತ್ಪಾದನೆ ಮತ್ತು ಯುದ್ಧದ ಕಾರ್ಮೋಡದ ಕುರಿತು, ಸಮ್ಮೇಳನ ನಿರ್ಣಯವೊಂದರಲ್ಲಿ ಗಂಭೀರ ಕಳವಳ ವ್ಯಕ್ತಪಡಿಸಿದೆ.

ಸೆಪ್ಟೆಂಬರ್ 11 ರಂದು ನಡೆದ ಬರ್ಬರ ... ತಿಂಗಳ ಭೀಕರ ಯುದ್ಧ - ಎರಡನ್ನೂ ನಿರ್ಣಯ ತೀವ್ರವಾಗಿ ಖಂಡಿಸಿತು.

ಭಾರತದ ಸಂಸತ್ತಿನ ಮೇಲೆ ಡಿಸೆಂಬರ್ 13 ರಂದು ನಡೆದ ದಾಳಿಗೆ ಪ್ರತೀಕಾರವಾಗಿ (ಅಮೆರಿಕ ಮಾದರಿಯ) ಪಾಕಿಸ್ತಾನದ ಮೇಲೆ ... ಕೂಗು ಕೇಳಿಬರುತ್ತಿದೆ.

ಭಯೋತ್ಪಾದಕರನ್ನು ಶಿಕ್ಷಿಸಬೇಕು. ಆದರೆ ಯುದ್ಧಕೋರ ಶಕ್ತಿಗಳು ಒತ್ತಡಗಳಿಗೆ ಬಲಿಬೀಳ ಬಾರದು ಎಂದು ನಿರ್ಣಯ ಎಚ್ಚರಿಸಿದೆ.



.........ಭೂಸುಧಾರಣೆ ಜಾರಿಗೆ ಆಗ್ರಹ

ಪುಟ 13 ರಿಂದ

ಈ ವಿಕೃತ ಭೂಸುಧಾರಣೆಗಳಿಂದ ರಾಜ್ಯದಲ್ಲಿ ಮುಖ್ಯವಾಗಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಕೃಷಿಕೂಲಿಕಾರರ ಸಂಖ್ಯೆ ಸಿಕ್ಕಾಪಟ್ಟೆ ಹೆಚ್ಚಾಯಿತು. ಭೂಮಿಯ ಹಕ್ಕನ್ನು ಕಳೆದುಕೊಂಡ ನಿಮಿತ್ತ, ಉದ್ಯೋಗ ಹುಡುಕುತ್ತಾ ಊರೂರು ಅಲೆಯುವುದು ಅವರ ಪಾಡಾಯ್ತು, ಗ್ರಾಮೀಣ ಜನತೆಯ ಕೊಂಡುಕೊಳ್ಳುವ ಶಕ್ತಿ ಹೆಚ್ಚಾಗಲಿಲ್ಲ. ಆಂತರಿಕ ಮಾರುಕಟ್ಟೆ ಅಭಿವೃದ್ಧಿ ಆಗಲಿಲ್ಲ. ಆದರ ಪರಿಣಾಮವಾಗಿ ಕೈಗಾರೀಕರಣ ತೀವ್ರವಾಗಲಿಲ್ಲ. ನಿರುದ್ಯೋಗ ಬೃಹದಾಕಾರವಾಗಿ ಬೆಳೆಯುವಂತಾಯಿತು. ಅರೆಪಾಳೆಗಾರಿ ಭೂಸಂಬಂಧಗಳ ಮುಂದುವರಿಕೆಯಿಂದಾಗಿ ಅಮಾನವೀಯ ಜಾತಿಪದ್ಧತಿ, ಅಸ್ಪೃಶ್ಯತೆ, ಮುಂದುವರೆಯುವಂತಾಯಿತು. ಧಾರ್ಮಿಕ ಕಂದಾಚಾರ, ಮಹಿಳೆಯರ ಮೇಲಿನ ದೌರ್ಜನ್ಯ, ಬಾಲ್ಯವಿವಾಹ, ದೇವದಾಸಿ ಪದ್ಧತಿಯಂತಹ ಅನಿಷ್ಟ ಪದ್ಧತಿಗಳು ಇನ್ನೂ ಜೀವಂತವಾಗಿರಲು ಕಾರಣವಾಯಿತು.

1974ರ ಭೂಸುಧಾರಣಾ ಕಾಯ್ದೆಯು ಮತ್ತೆ ಅನೇಕಸಲ ತಿದ್ದುಪಡಿಗಳಿಗೆ ಒಳಗಾಯಿತು. 1990ರ ದಶಕದಲ್ಲಿ ಕೇಂದ್ರ ಸರ್ಕಾರವು ಉದಾರೀಕರಣದ ನೀತಿಗಳನ್ನು ಅಂಗೀಕರಿಸಿದಂದಿನಿಂದ ಕರ್ನಾಟಕ ರಾಜ್ಯ ಸರ್ಕಾರವೂ ಅದೇ ದಾರಿಯಲು ಸಾಗಲು ಆರಂಭಿಸಿತು. ಇದರ ಪರಿಣಾಮವಾಗಿ ರಾಜ್ಯ ಭೂಸುಧಾರಣಾ ನೀತಿಯಲ್ಲಿ ಪ್ರತಿಗಾಮಿ ಬದಲಾವಣೆಗಳು ಆರಂಭವಾದವು. ಬಂಗಾರಪ್ಪ ಸರ್ಕಾರ ಕೃಷಿ ಭೂಮಿಯನ್ನು ಖರೀದಿಮಾಡಲು ಇದ್ದ 12,000 ರೂ. ಮಿತಿಯನ್ನು 50,000ರೂಗಳಿಗೆ ಹೆಚ್ಚಿಸಿತು. ಮೊಯಿಲಿ ಸರ್ಕಾರವು ಕೈಗಾರಿಕೆಗಳು ಖರೀದಿ ಮಾಡಬಹುದಾದ ಕೃಷಿ ಭೂಮಿಯ ಮಿತಿಯನ್ನು 54 ಎಕರೆಗೆ ಏರಿಸುವ ಪ್ರಸ್ತಾವವನ್ನು ಅಂಗೀಕರಿಸಿತ್ತಲ್ಲದೆ, ಕೃಷಿ ಭೂಮಿ ಖರೀದಿಗೆ ಅನುಮತಿ ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡುವ ನಿರ್ಧಾರಕ್ಕೆ ಬಂದಿತ್ತು. ಆದರೆ ಮುಂದೆ ಬಂದ ಚುನಾವಣೆಗಳ ನಿಮಿತ್ತ ಮೊಯ್ಲಿ ಸರ್ಕಾರಕ್ಕೆ ಈ ನಿರ್ಧಾರಗಳನ್ನು ಜಾರಿಗೆ ತರಲಾಗಲಿಲ್ಲ. 1995ರಲ್ಲಿ ದೇವೇಗೌಡರ ಸರ್ಕಾರ ಜಾರಿಗೆ ತಂದ ತಿದ್ದುಪಡಿಗಳಿಂದಾಗಿ ಭೂಸುಧಾರಣೆಯ ಮೂಲ ಉದ್ದೇಶವನ್ನೇ ಕೈಬಿಟ್ಟಂತಾಯಿತು. ಕೃಷಿಕರಲ್ಲದವರು ದೊಡ್ಡ ಪ್ರಮಾಣದಲ್ಲಿ ಕೃಷಿ ಭೂಮಿ ಖರೀದಿಸುವುದನ್ನು ಹಾಗೂ ಕೃಷಿಕ ಕುಟುಂಬಗಳು ನಿರ್ದಿಷ್ಟ ಮಿತಿಗಿಂತ ಹೆಚ್ಚು ಜಮೀನು ಹೊಂದುವುದನ್ನು ನಿರ್ಬಂದಿಸುವುದು ಭೂಸುಧಾರಣಾಕಾಯ್ದೆಯ ಉದ್ದೇಶವಾಗಿದ್ದರೆ, ದೇವೇಗೌಡರ ಸರ್ಕಾರ ಮತ್ಸ್ಯೋದ್ಯಮ, ಪುಷ್ಪೋದ್ಯಮ ತೋಟಗಾರಿಕೆ ಮೊದಲಾದ ಉದ್ಯಮಗಳಿಗೆ ರಾಜ್ಯದಲ್ಲಿ ಬಂಡವಾಳ ಹೂಡಲು ಮುಕ್ತ ಅವಕಾಶ ನೀಡುವ ಹೆಸರಿನಲ್ಲಿ 20 ವರ್ಷ ಅವಧಿಗೆ ಭೂಮಿಯನ್ನು ಲೀಜ್ ಕೊಡಬಹುದೆಂದೂ, ಕೈಗಾರಿಕೆಗಳಿಗಾಗಿ 100 ಎಕರೆ ವರೆಗೂ ಕೃಷಿ ಭೂಮಿಯನ್ನು ಖರೀದಿ ಮಾಡಬಹುದೆಂದೂ, ಕೃಷಿಯೇತರ ಮೂಲಗಳಿಂದ ರೂ. 2 ಲಕ್ಷದವರೆಗೆ ಆದಾಯ ಇರುವವರೂ ಕೃಷಿ ಭೂಮಿಯನ್ನು ಖರೀದಿ ಮಾಡಬಹುದೆಂದು ನಿರ್ಧರಿಸಿ ಕಾನೂನಿಗೆ ತಿದ್ದುಪಡಿಗಳನ್ನು ಮಾಡಿತು. ಸರ್ಕಾರದ ಈ ಕ್ರಮವನ್ನು ಸಿಪಿಐ(ಎಂ) ಬಲವಾಗಿ ವಿರೋಧಿಸಿದರೂ ಕಾಂಗ್ರೆಸ್ ಮತ್ತು ಬಿಜೆಪಿಯಂತಹ ವಿರೋಧ ಪಕ್ಷಗಳ ನಾಟಕೀಯ ವಿರೋಧವನ್ನು ಲೆಕ್ಕಿಸದೇ ಸರ್ಕಾರ ತಿದ್ದುಪಡಿಗನ್ನು

1999ರಲ್ಲಿ ಕೇಂದ್ರಸರ್ಕಾರ ಎರಡನೇ ಸುತ್ತಿನ ಆರ್ಥಿಕ ಸುಧಾರಣೆಗಳ ಹೆಸರಿನಲ್ಲಿ ನಗರ ಭೂಪರಿಮಿತಿ ಮತ್ತು ನಿಯಂತ್ರಣ ಕಾಯ್ದೆಯನ್ನು ರದ್ದು ಪಡಿಸಿದ್ದು ಭೂಸಂಬಂಧಗಳ ವಿಷಯದಲ್ಲಿ ಇನ್ನೊಂದು ಪ್ರತಿಗಾಮಿ ಕ್ರಮವಾಯಿತು. ನಗರಗಳು ಬೆಳೆಯುತ್ತಿದ್ದಂತೆ ನಗರಗಳ ಆಸ್ತಿ ಕೆಲವೇ ಕೆಲವು ವ್ಯಕ್ತಿಗಳ ಕೈಯಲ್ಲಿ ಕೇಂದ್ರೀಕೃತವಾಗಿ ಬಹುಸಂಖ್ಯೆಯಲ್ಲಿ ಜನರು ಭೂಹೀನರು, ವಸತಿ ಹೀನರು ಆಗುವುದನ್ನು ತಡೆಯಲು ನಗರ ಭೂಮಿತಿ ಕಾಯ್ದೆ ಅವಶ್ಯವಾಗಿತ್ತು. ಆದರೆ ಈ ಕಾಯ್ದೆಯನ್ನು ರದ್ದುಪಡಿಸಿದ ಕ್ರಮದಿಂದಾಗಿ ರಿಯಲ್ ಎಸ್ಟೇಟ್ ಏಜೆಂಟರ ಹಾವಳಿ ಹೆಚ್ಚಾಗಿ ಅವರು ಅತಿ ಕಡಿಮೆ ಬೆಲೆಗೆ ರೆವಿನ್ಯೂ ಭೂಮಿನ್ನು ಖರೀದಿಮಾಡಿಕೊಂಡು, ಬೇಕಾಬಿಟ್ಟಿ ಲೇಔಟ್‌ಗಳನ್ನು ಮಾಡಿ ಬಾರಿ ಲಾಭಮಾಡಲು ತೊಡಗಿದ್ದಾರೆ. ಭೂಮಾರುಕಟ್ಟೆಯ ಕಪ್ಪು ಹಣ ದೊಡ್ಡ ಪ್ರಮಾಣದಲ್ಲಿ ಪ್ರವೇಶಿಸುವಂತಾಯಿತು. ನಗರಗಳ ಸುತ್ತಲಿನ ಬೆಲೆ ವಿಪರೀತವಾಗಿ ಹೆಚ್ಚಾಯಿತು. ನಗರಗಳಲ್ಲಿ ದುಡಿಯುವ ಜನರಿಗೆ ಮನೆ ಬಾಡಿಗೆ, ಇತ್ಯಾದಿ ತೀರಾ ಹೆಚ್ಚಾಗುವಂತಾಯಿತು.

ಕರ್ನಾಟಕದಲ್ಲಿ ನೈಜ ಭೂಸುಧಾರಣೆ ಜಾರಿಗೆ ಬರದಿದ್ದುದರಿಂದ ರಾಜ್ಯದ ಭೂಹೀನ ಬಡವರಲ್ಲಿ ಒಂದು ದೊಡ್ಡ ವಿಭಾಗವು ಕಳೆದ ಅನೇಕ ವರ್ಷಗಳಿಂದ ಸರ್ಕಾರಿ ಬಂಜರು ಭೂಮಿಯನ್ನು ಅಥವ ಕೃಷಿಯೋಗ್ಯ ಸರ್ಕಾರಿ ಅರಣ್ಯ ಭೂಮಿಯನ್ನು ಸಾಗುವಳಿಮಾಡುತ್ತಾ ಬಂದಿರುತ್ತಾರೆ, ಬಗರಹುಕುಂ ಸಾಗುವಳಿ ಮಾಡುತ್ತಿರುವ ಬಡವರ ಪ್ರಶ್ನೆಯನ್ನು ಇತ್ಯರ್ಥಪಡಿಸಲು ಸರ್ಕಾರ ಆಸಕ್ತಿವಹಿಸಲಿಲ್ಲ. ಬದಲಾಗಿ ವಿಶ್ವ ಬ್ಯಾಂಕಿನ ಷರತ್ತುಗಳಿಗೆ ಮಣಿದು, ಅರಣ್ಯ ಬೆಳೆಸುವ ಹೆಸರಿನಲ್ಲಿ ಬಗರ್ ಹುಕುಂ ಸಾಗುವಳಿದಾರರನ್ನು ಬಲವಂತವಾಗಿ ಒಕ್ಕಲೆಬ್ಬಿಸಲಾಗುತ್ತಿದೆ. ರಾಜ್ಯ ಸರ್ಕಾರಕ್ಕೆ ಸೇರಿದ ಕಂದಾಯ ಭೂಮಿಯಲ್ಲಿ ಅನಧಿಕೃತ ಸಾಗುವಳಿ ಮಾಡುವ ಅರ್ಹ ಸಾಗುವಳಿದಾರರಿಗೆ ಭೂಮಿಯನ್ನು ವಿತರಣೆಮಾಡುವ ಅಧಿಕಾರ ರಾಜ್ಯ ಸರ್ಕಾರದ ಕೈಯಲ್ಲಿದೆ. ಸರ್ಕಾರ ಹಾಗೆ ಮಾಡುವ ಬದಲು 'ಸಿ' ಮತ್ತು 'ಡಿ' ವರ್ಗದ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿತು. ಈ ಭೂಮಿಯಲ್ಲಿ ಸಾಗುವಳಿ ಮಾಡಿಕೊಂಡು ಬಂದವರು ಅರಣ್ಯ ಇಲಾಖೆಯ ದೌರ್ಜನ್ಯಕ್ಕೆ ಒಳಗಾಗುವಂತಾಯಿತು. ಇನ್ನು ಅರಣ್ಯ ಭೂಮಿಯಲ್ಲಿಯೂ ಭೂಹೀನ ಬಡವರು ಸಾಗುವಳಿ ಮಾಡುತ್ತಾ ಬಂದಿದ್ದಾರೆ. ಕೇಂದ್ರದ 1980ರ ಅರಣ್ಯ ಕಾಯ್ದೆ ಪ್ರಕಾರ ಕೇಂದ್ರ ಸರ್ಕಾರದ ಅನುಮತಿ ಇಲ್ಲದೆ ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಗಳಿಗಾಗಿ ಬಳಸುವಂತಿಲ್ಲ. ಆದರೆ 1978ರ ಪೂರ್ವದಿಂದಲೂ ಅರಣ್ಯ ಭೂಮಿಯನ್ನು ಸಾಗುವಳಿ ಮಾಡುತ್ತಾ ಬಂದಿರುವ ಸಾಗುವಳಿದಾರರನ್ನು ಒಕ್ಕಲೆಬ್ಬಿಸಬಾರದೆಂದು ಅರಣ್ಯಕಾಯ್ದೆ ಸ್ಪಷ್ಟಪಡಿಸಿದೆ. ಆದರೂ ಸಹ ಸಾಗುವಳಿದಾರರ ಬಳಿಯಲ್ಲಿ ದಾಖಲೆಗಳು ಇಲ್ಲದಿರುವುದನ್ನು ಉಪಯೋಗಿಸಿಕೊಂಡು ಅವರನ್ನು ಭೂಮಿಯಿಂದ ಹೊರದಬ್ಬಲಾಗುತ್ತದೆ. ಇದರಿಂದಾಗಿ ರಾಜ್ಯದಲ್ಲಿ ಸಾವಿರಾರು ಆದಿವಾಸಿ ಕುಟುಂಬಗಳಿಗೆ ಮತ್ತಿತರ ಹಿಂದುಳಿದ ವರ್ಗಗಳ ಜನರಿಗೆ ತುಂಬಾ ಅನ್ಯಾಯವಾಗಿದೆ. ಕರ್ನಾಟಕ ಸರ್ಕಾರ ಇವರ ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸಿ. ಕೇಂದ್ರ ಸರ್ಕಾರದಿಂದ ಅನುಮತಿ

ತತ್ವ, ನೈತಿಕತೆಗಾಗಿ ಹೋರಾಟ

ಅನಿಲ್ ಬಿಸ್ವಾಸ್

ಪಕ್ಷದ ಸಮ್ಮೇಳನ ನಡೆಯುತ್ತಿರುವ ಸನ್ನಿವೇಶದ ಕುರಿತಾದ ಬರಹವನ್ನು ಹಿಂದ ಓದಿದ್ದೀರಿ. ಸಿಪಿಐ(ಎಂ) ಕ್ರಾಂತಿಕಾರಿ ಪಕ್ಷ. ಆದಾಗ್ಯೂ ಅದರಲ್ಲಿ ಪ್ರಸಕ್ತ ಸಮಾಜದ ಹಲವಾರು ಪರಕೀಯ ಪ್ರವೃತ್ತಿಗಳು ಪಕ್ಷದೊಳಗೆ ಕಾಣಿಸಿಕೊಂಡು, ಬೆಳವಣಿಗೆಗೆ ಅಡ್ಡಿಯಾಗಿರು ವುದನ್ನು ಕೇಂದ್ರಸಮಿತಿ ಗುರುತಿಸಿದೆ. ತಿದ್ದುಪಡಿ ಚಳುವಳಿಗೆ ಕರೆನೀಡಿದೆ. ಪಾರ್ಲಿಮೆಂಟ್ ಸಂದರ್ಭ ಸಾಧಕವಾದ ಗುಡಿಕೈಗಾರಿಕೆ, ಅಂಧಶ್ರದ್ಧೆ ಜಾಗತೀಯ ಮನೋಭಾವ, ಪಕ್ಷ - ಸಂಘಟನೆ ಚಳುವಳಿ ಬಗೆಗಿನ ತಪ್ಪು ತಿಳುವಳಿಕೆಗಳು, ಮತ್ತು ಹಾನಿಕಾರಕ ಪ್ರವೃತ್ತಿಗಳನ್ನು ತಿದ್ದುಕೊಂಡು ಹೋಗಬೇಕೆಂದು ಕರೆನೀಡಿದೆ. ಅದರಂತೆ ಪಿಬಿ ಸದಸ್ಯರಾದ 'ಅನಿಲ್ ಬಿಸ್ವಾಸ್' (ಪಶ್ಚಿಮ ಬಂಗಾಳದ ಕಾರ್ಯದರ್ಶಿ)ರವರು ಕೆಲವನ್ನು ಗುರುತಿಸಿದ್ದಾರೆ.

ಕ್ರಾಂತಿಕಾರಿ ಗುಣ ಮತ್ತು ಉನ್ನತ ನೈತಿಕತೆಯನ್ನು ಎತ್ತಿಹಿಡಿಯುವುದು ಕಮ್ಯುನಿಸ್ಟ್ ಪಕ್ಷದ ಮುಂದಿರುವ ತುರ್ತು ಕೆಲಸ. ನಮ್ಮ ಪಕ್ಷದಲ್ಲಿ ಸಹ ಬೇಡವಾದ, ಅನೈತಿಕ ಪ್ರವೃತ್ತಿಗಳು ಕಾಣಿಸಿಕೊಳ್ಳುತ್ತಿವೆ ಎಂಬುದನ್ನು ನಾವು ಬಹಿರಂಗವಾಗಿ ಒಪ್ಪಿಕೊಳ್ಳುತ್ತೇವೆ. ಪಕ್ಷವು ಹೀಗೇಕೆ ಬಹಿರಂಗವಾಗಿ ಮಾತನಾಡುತ್ತದೆ ಎಂದು ಅನೇಕ ಜನರು ಕೇಳುತ್ತಾರೆ. ಏಕೆಂದರೆ ಕಮ್ಯುನಿಸ್ಟ್ ಪಕ್ಷವು ಜನತೆಯ ಪಕ್ಷ ಮತ್ತು ಜನರ ಆಸ್ತಿ ಎಂದು ಹೇಳುತ್ತೇವೆ. ಜನರು ನಮ್ಮನ್ನು ಪ್ರೀತಿಸುತ್ತಾರೆ, ನಮ್ಮ ತಪ್ಪುಗಳನ್ನು ಜನರಿಂದ ಮುಚ್ಚಿಡಲು ಸಾಧ್ಯವಿಲ್ಲ, ಮುಚ್ಚಿಡುವುದೊಂದು ಪ್ರಮಾದವಾಗುತ್ತದೆ. ನಮ್ಮ ಪಕ್ಷದ 1997ರಲ್ಲಿ ಶುದ್ದೀಕರಣ ಚಳುವಳಿಯನ್ನು ಸಂಘಟಿಸಲಾಗಿತ್ತು. ಪಕ್ಷದ ಕೇಂದ್ರ ಸಮಿತಿಯ ವರದಿಯ ಆಧಾರದಲ್ಲಿ ರಾಜ್ಯಸಮಿತಿಯು ವರದಿಯೊಂದನ್ನು ತಯಾರಿಸಿ ಅನೈತಿಕ, ಬೇಡವಾದ ಪ್ರವೃತ್ತಿಗಳನ್ನು ಗುರುತಿಸಿ, ಇದನ್ನು ತೊಡದುಹಾಕಲು ಚರ್ಚೆಗಳನ್ನು ಸಂಘಟಿಸಲಾಗಿತ್ತು. ಇದರಿಂದ ಒಂದು ಹಂತದವರೆಗೂ ಯಶಸ್ವಿಕೂಡ ಸಾಧ್ಯವಾಯಿತು. ಮತ್ತು ಪಕ್ಷದೊಳಗೆ ಈ ಕುರಿತು ಜಾಗೃತಿ ಮೂಡಿತು. ಆದರೆ ನಾವೆಲ್ಲ ತಪ್ಪುಗಳಿಂದ ಮುಕ್ತರಾದೆವು ಎಂದು ಹೇಳಲು ಸಾಧ್ಯವಿಲ್ಲ. ಆಗ ನಾವು ಈ ಚಳುವಳಿಯನ್ನು ಮುಂದುವರಿಸಲು ಅಭಿಪ್ರಾಯ ವ್ಯಕ್ತಪಡಿಸಿದೆವು, ನಿರ್ದಿಷ್ಟ ಸಮಯದಲ್ಲಿ ಸ್ವಲ್ಪ ಪ್ರಗತಿಯಾಗಿದ್ದರೂ ಇದನ್ನು ನಿರಂತರವಾಗಿ ಮುಂದುವರೆಸಬೇಕು. ಈ ಚಳುವಳಿ ಸೈದ್ಧಾಂತಿಕವಾಗಿ ಸಂಘಟನಾತ್ಮಕವಾಗಿ ನಡೆಯಬೇಕು.

ನಾವು ಅಧಿಕಾರದಲ್ಲಿರುವುದರಿಂದ ನಮ್ಮ ರಾಜ್ಯದಲ್ಲಿ ಈ ಸಮಸ್ಯೆ ಇನ್ನೂ ತೀವ್ರವಾಗಿದೆ. ಕ್ರಾಂತಿಕಾರಿ ಮನೋಭಾವ ಹೊಂದಿದ್ದಾಗ್ಯೂ ಈ ಪರಿಸರವು ಸ್ಥಗಿತತೆಗೆ, ಪ್ರತಿಗಾಮಿತನಕ್ಕೆ ಸಹಾಯಕವಾಗುತ್ತದೆ. ಪಕ್ಷದೊಳಗೆ ನಿರಂತರವಾಗಿ ಸೈದ್ಧಾಂತಿಕ ರಾಜಕೀಯ ಹೋರಾಟ ನಡೆಯಬೇಕು ಎರಡನೆಯದಾಗಿ ನಾವು ಬದುಕುತ್ತಿರುವ ಸಾಮಾಜವು ಒಂದು ವ್ಯಾಪಾರಸ್ಥರ, ಗ್ರಾಹಕ ಸಂಸ್ಕೃತಿಯ ಸಮಾಜವಾಗುತ್ತಿದೆ. ಕಮ್ಯುನಿಸ್ಟ್ ಪಕ್ಷವು ಈ ಎಲ್ಲದರಿಂದ ಮುಕ್ತವಾಗಿರಬೇಕೆಂಬುದು ನಿಜವಾದರೂ, ಆದರ ಸೋಂಕು ತಗುಲುವುದಾದರೂ ಹೇಗೆ ಎಂಬುದು ಹಾಸ್ಯಾಸ್ಪದವಾಗುತ್ತದೆ. ಏಕೆಂದರೆ ಈ ಮೌಲ್ಯಗಳು ಪಕ್ಷದ ಮೇಲೆ ಪ್ರಭಾವ ಬೀರುತ್ತವೆ ಮತ್ತು ಹಲವಾರು ವಿಧಗಳಲ್ಲಿ ವ್ಯಕ್ತವಾಗುತ್ತಿರುತ್ತವೆ. ಮೂರನೆಯದಾಗಿ, ಇವೆಲ್ಲವು ಬಂಡವಾಳಶಾಹಿ ಪಕ್ಷಕ್ಕೆ ಸಾಮಾನ್ಯ ವಿಚಾರಗಳಾದರೂ ಕಮ್ಯುನಿಸ್ಟ್‌ಪಕ್ಷಕ್ಕೆ ಗಂಭೀರವಾದ ವಿಚಾರಗಳು. ನಮ್ಮ ಪಕ್ಷದಲ್ಲಿ ಈ ರೀತಿಯ ಉದಾಹರಣೆಗಳೇ ಇಲ್ಲವೆಂದು ಹೇಳಲು ಸಾಧ್ಯವಿಲ್ಲ. ಇಂತಹ ಪ್ರವೃತ್ತಿಗಳ ವಿರುದ್ಧ ಅನೇಕ ಸಂದರ್ಭಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ. ಭ್ರಷ್ಟಾಚಾರ, ಅನೈತಿಕತೆಯಿಂದ ಲಾಭ ಪಡೆಯುವಿಕೆ, ವಯುಕ್ತಿಕ ಅಥವಾ ಕುಟುಂಬದ ಹಿತಾಸಕ್ತಿಗಳಿಂದ ನಮ್ಮ ಪಕ್ಷವನ್ನು ಮೇಲಿಡಬೇಕು ಮತ್ತು ಇಂತಹ ಜನರು ನಮ್ಮ ಪಕ್ಷದಲ್ಲೂ ಇದ್ದಾರೆ. ಈ ತಪ್ಪುಗಳನ್ನೆಲ್ಲ ಸಾಮಾಜಿಕ ವ್ಯವಸ್ಥೆಯ ಇದೆಲ್ಲವೂ ಅನ್ಯಾಯದ ಸಮಾಜದಲ್ಲಿ ನಡೆಯುತ್ತಿರುತ್ತದೆ ಎಂದು ಭಾವಿಸಿ ಕಮ್ಯುನಿಸ್ಟ್ ಪಕ್ಷದ ನಮಗೆ ನೈತಿಕತೆಯ ಬಗ್ಗೆ ಕಾಲ್ಪನಿಕವಾಗಿ ಚರ್ಚಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ಏನನ್ನು ಮಾಡಬೇಕು, ಯಾವುದು ಉತ್ತಮವಾದದು ಎನ್ನುವುದನ್ನು ಚರ್ಚಿಸಿ, ನಿರ್ದಿಷ್ಠ ತಪ್ಪುಗಳ ವಿರುದ್ಧ ಯಾವುದೇ ಕ್ರಮಕೈಗೊಳ್ಳದಿರುವುದು ಪಕ್ಷಕ್ಕೆ ಒಳ್ಳೆಯದಲ್ಲ, ಕೊನೆಯದಾಗಿ, ಈ ಮೌಲ್ಯಗಳ ವಿರುದ್ಧ ಸಂಘಟಿತ ಹೋರಾಟ ನಡೆಯಬೇಕು, ಇದನ್ನು ಹೊರತುಪಡಿಸಿ ಕಮ್ಯುನಿಸ್ಟ್ ಪಕ್ಷ ಬಲಿಷ್ಠ ಪಕ್ಷವಾಗಲು ಸಾಧ್ಯವಿಲ್ಲ.

ಕೇವಲ ಹೋರಾಟಗಳಿಗೆ ಚಳುವಳಿಗೆ ಯಾವ ಮಹತ್ವವೂ ಇಲ್ಲ ಇದರಿಂದ ಪಕ್ಷಕ್ಕೆ ಜನರನ್ನು ಆಕರ್ಷಿಸುವುದು ಕಷ್ಟವಾಗುತ್ತದೆ.

ಕಮ್ಯುನಿಸ್ಟ್ ಘನತೆಯೆಂಬುದು ರಾಜಿ ಮಾಡಿಕೊಳ್ಳುವ ವಿಷಯವಲ್ಲ. ಅಗತ್ಯವಿದ್ದರೆ ಕಮ್ಯುನಿಸ್ಟ್ ಘನತೆಯ ಬಗ್ಗೆ ಒಬ್ಬಂಟಿಯಾಗಿಯೇ ಮಾತನಾಡಬೇಕಾಗುತ್ತದೆ. ಆದರೂ ಅನೈತಿಕ ಮೌಲ್ಯಗಳ ವಿರುದ್ಧ ಸಂಘಟಿತ ಹೋರಾಟವೇ ನಡೆಯಬೇಕು. ಈ ಗುರಿಯೆಡೆಗೆ ಸಾಗಲು ಮೊದಲ ಆದ್ಯತೆ ನೀಡಬೇಕು ಮತ್ತು ಒಂದು ಉತ್ತಮ ವಾತಾವರಣ ಸೃಷ್ಟಿಸಬೇಕು. ಯಾವುದೇ ಕಾರ್ಯಕರ್ತ, ಮುಖಂಡನನ್ನು ರೂಪಿಸುವಾಗ ಈ ಮೌಲ್ಯಗಳ ಕಡೆ ಹೆಚ್ಚಿನ ಗಮನ ನೀಡಬೇಕು.

ಅನೈತಿಕ ಮೌಲ್ಯಗಳ ವಿರುದ್ಧ ಹೋರಾಡುವಾಗ ಶತ್ರುವಿನ ಜೊತೆ ಹೋರಾಡಿದಂತೆ ಮಾಡಬಾರದೆಂದು ಎಚ್ಚರಿಕೆ ವಹಿಸಬೇಕು. ಯಾವುದಾದರೂ ಸಂಗಾತಿ ಈ ರೀತಿಯ ತಪ್ಪುಗಳಿಗೆ ಒಳಗಾಗಿದ್ದಲ್ಲಿ ಅದನ್ನು ತಿದ್ದಿಕೊಳ್ಳಲು ಆತನ ಹತ್ತಿರದ ಸಂಗಾತಿ ಎಲ್ಲ ಭಾಗದಲ್ಲೂ ಸಹಾಯ ಮಾಡಬೇಕು ಮತ್ತು ಆ ರೀತಿ ತಿದ್ದಿಕೊಳ್ಳಲು ಅವಕಾಶ ಮಹತ್ವ ನೀಡಬೇಕು. ಟೀಕೆ ಮತ್ತು ಸ್ವಯಂಟೀಕೆ ಈ ರೀತಿಯ ಸಮಸ್ಯೆ ಗಳಿಂದ ಹೊರಬರಲು ಉತ್ತಮ ಮಾರ್ಗ ಗಳು. ಆದರೆ ಇದನ್ನೂ ಪಕ್ಷದ ಚೌಕಟ್ಟಿನಲ್ಲೇ ಮಾಡ ಬೇಕು. ನಮ್ಮ ಪಕ್ಷದಲ್ಲಿ ಈ ಚಟುವಟಿಕೆ ಗಳಲ್ಲಿರುವ ಕೆಲವೇ ಸದಸ್ಯರಿದ್ದಾರೆ, ಇಂತಹ ಕೃತ್ಯಕ್ಕೆ ಬಲಿಯಾದವರು ಕೆಲವೇ ಜನರು, ಆದರೂ ಈ ದೌರ್ಬಲ್ಯಗಳನ್ನು ತಿದ್ದುಪಡಿ ಮಾಡಿ ಕೊಳ್ಳಬೇಕು. ಈ ವಿಚಾರದಲ್ಲಿ ನಿರ್ಲಕ್ಷ ವಹಿಸು ವುದು ಸಾಧ್ಯವಿಲ್ಲ, ನಿರ್ದಿಷ್ಠವಾಗಿ ಪಕ್ಷದ ಸಮ್ಮೇಳನಗಳಲ್ಲಿ ಈ ವಿಷಯಗಳ ಬಗ್ಗೆ ಚರ್ಚಿಸುವುದು ನಮ್ಮ ಪ್ರಮುಖ ಜವಾಬ್ದಾರಿ. ಇದೇ ಸಂದರ್ಭದಲ್ಲೂ ಉನ್ನತ ಚಿಂತನೆ ಮತ್ತು ಜೀವನ ವಿಧಾನ ಹೊಂದಿರುವ ವ್ಯಕ್ತಿ ಗಳಲ್ಲೂ ಈ ಮೌಲ್ಯಗಳಿರುವುದನ್ನು ತಿದ್ದುಪಡಿ ಚಳುವಳಿಯ ಸಂದರ್ಭದಲ್ಲಿ ನೋಡಿದ್ದೇವೆ. ಅವರಲ್ಲಿಯೂ ಪ್ರಗತಿಪರ ವಿಶ್ವದೃಷ್ಟಿಯ ಕೊರತೆ, ಹಿಂದುಳಿದ ಆಲೋಚನೆ, ಕಾಲ್ಪನಿಕ ಚಿಂತನೆಗಳು, ಧಾರ್ಮಿಕತೆ ಪ್ರಭಾವ, ದುಷ್ಠ ಸಾಮಾಜಿಕ ಪದ್ಧತಿಗಳ ಪ್ರಭಾವವಿರುವುದನ್ನು ಗುರುತಿಸಿದ್ದೇವೆ. ಇದನ್ನು ಹೋಗಲಾಡಿಸಲು ವಯಕ್ತಿಕ ಮತ್ತು ಸಾಮೂಹಿಕ ಎರಡು ರೀತಿಯ ಪ್ರಯತ್ನಗಳಾಗಬೇಕು.

ವಿಜಯ ಕರ್ನಾಟಕದ 'ಚೀನಾವೇ ನಮ್ಮ ಮೊದಲ ಶತ್ರು' ಎಂಬ ಪ್ರಲಾಪ

ಚೀನಾ ಪ್ರಧಾನಿ ಭೇಟಿ ಸಮಯದಲ್ಲಿ ನಮ್ಮ ಪತ್ರಿಕೆಗಳ ಚೀನಾ-ವಿರೋಧಿ ಈ ಧೋರಣೆ ಒಂದು ಸ್ಯಾಂಪಲ್ಲು ಕಳೆದ ವಾರ ನೋಡಿದ್ದೀರಿ. ಟಿಬೆಟ್‌ನ 'ಸ್ವಾತಂತ್ರ್ಯ', ದಲೈಲಾಮಾರ 'ಪೂಜೆ' ಯ ನೆವದಲ್ಲಿ ತರಂಗ ಹರಡಲು ಪ್ರಯತ್ನಿಸಿದ್ದ ಚೀನಾ-ವಿರೋಧಿ ಧೋರಣೆಯ ಹುಳುಕುಗಳನ್ನು ಕಂಡುಕೊಂಡಿದ್ದೀರಿ. ಈ ವಾರ ಇನ್ನೊಂದು ಕನ್ನಡದ 'ಕೇಸರಿ ಪತ್ರಿಕೆ' ವಿಜಯಕರ್ನಾಟಕದ ಧೋರಣೆ ಬಗ್ಗೆ ಓದಿ.

ಶರತ್‌ಚಂದ್ರ

ಶನಿವಾರ ಜನವರಿ 19 ರ ಸಂಪಾದಕೀಯ ಪುಟದ ಅಗ್ರ ಲೇಖನ 'ಗೋಸುಂಬೆ' ಚೀನಾ ಭಾರತದ ಮಿತ್ರ ರಾಷ್ಟ್ರವೇ? ಎಂಬ ಪ್ರಶ್ನೆ ಕೇಳುತ್ತದೆ. ಬೇಡ ಬೇಡವೆಂದರೂ ಚೀನಾವೇ ನಮ್ಮ ಮೊದಲ ಶತ್ರು ಎಂಬ ವಾಸ್ತವವಾದಿ ರಕ್ಷಣಾ ಸಚಿವ ಜಾರ್ಜ್‌ಫರ್ನಾಂಡೀಸ್ ಅವರ ಹೇಳಿಕೆ ಮತ್ತೆ ಮತ್ತೆ ನೆನಪಾಗುತ್ತದೆ' ಎಂಬ ಉತ್ತರ ಕಂಡುಕೊಳ್ಳುತ್ತದೆ. ಈ ಪ್ರಶ್ನೆಯ ಉತ್ತರ ಕಂಡುಕೊಳ್ಳುವ ಬಗೆಯಲ್ಲಿ ಕನಿಷ್ಠ ಬೌದ್ಧಿಕ ಪ್ರಾಮಾಣಿಕತೆಯಾಗಲಿ,ವಸ್ತುನಿಷ್ಠ ಪತ್ರಿಕಾ ಧರ್ಮದ ಸುಳಿವಾಗಲಿ ಇಲ್ಲ ಎಂಬುದು ಅತ್ಯಂತ ಖೇದಕರ ಸಂಗತಿ. ಲೇಖನ ಏನೂ ತಿರುಳಿಲ್ಲದ ಹಾಸ್ಯಾಸ್ಪದ ವಾದಗಳ ಕಂತೆ. 'ಏನಕೇನ ಪ್ರಕಾರೇಣ' ಕನ್ನಡದ ಅತಿದೊಡ್ಡ ದಿನಪತ್ರಿಕೆಯಾಗ ಬಯಸುವ ವಿಜಯಕರ್ನಾಟಕದಿಂದ ಇದನ್ನು ಯಾಕೆ ನಿರೀಕ್ಷಿಸುತ್ತೀರೀ ಎಂದಿರಾ?

ಹಾರ್ಡ್‌ವೇರ್-ಸಾಫ್ಟ್‌ವೇರ್

ವಿಜಯ ಕರ್ನಾಟಕ (ಜನವರಿ 19, 2002) ಅಗ್ರಲೇಖನವೊಂದು 'ಗೋಸುಂಬೆ ಚೀನಾ ಭಾರತದ ಮಿತ್ರ ರಾಷ್ಟ್ರವೇ?' ಎಂಬ ಪ್ರಶ್ನೆ ಕೇಳುತ್ತದೆ. ಅದೇ ಚೀನಾದ ಪ್ರಧಾನಿ ಆರು ದಿನಗಳ ಭಾರತ ಭೇಟಿ ಸಮಯದಲ್ಲಿ ಕೇಳುತ್ತದೆ - ಎಂಬುದು ಗಮನಾರ್ಹ. ಲೇಖಕ ಪ್ರತಾಪ್ ಸಿಂಹರ ಮುಖ್ಯ ತಲೆನೋವು - ಇನ್ಫೋಸಿಸ್ ಭೇಟಿಯ ಸಮಯದಲ್ಲಿ ಚೀನಾದ ಪ್ರಧಾನಿಯವರಿಂದ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ 'ಚೀನಾದ ಹಾರ್ಡ್‌ವೇರ್ ಮತ್ತು ಭಾರತ ಸಾಫ್ಟ್‌ವೇರ ಪ್ರಾಬಲ್ಯ' ಆಧಾರಿತ ಸಹಕಾರದ ಪ್ರಸ್ತಾಪ. ಇದು ಭಾರತದ ಹಿತಾಸಕ್ತಿಗೆ ಅನುಗುಣವಾಗಿಲ್ಲ ಎಂದು ಸಾಧಿಸಲು ಪ್ರತಾಪ ಸಿಂಹರು ಲೇಖನದ ತುಂಬಾ ಹೆಣಗಾಡುತ್ತಾರೆ. ಭಾರತದ ಸಾಫ್ಟ್‌ವೇರ್ ದೈತ್ಯಕಂಪನಿಗಳು ಚೀನಾದ ಅಗಾಧ ಮಾರುಕಟ್ಟೆ ಪ್ರವೇಶಿಸಲು ಮುಂದಾಗಿವೆ. ಅಮೆರಿಕ ಮತ್ತು ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲಿ ತೀವ್ರ ಆರ್ಥಿಕ ಬಿಕ್ಕಟ್ಟಿನಿಂದಾಗಿ ಸಾಫ್ಟ್‌ವೇರ್ ಕಂಪನಿಗಳು ಮಾತ್ರವಲ್ಲ, ಎಲ್ಲಾ ಕ್ಷೇತ್ರದ ಕಂಪನಿಗಳು ರಫ್ತಿಗೆ ಚೀನಾದತ್ತ ನೋಡುತ್ತಿವೆ. ಆರ್ಥಿಕ ಹಿಂಜರಿತದ ವಿಶ್ವವ್ಯಾಪಿ ಸಾಗರದಲ್ಲಿ ದಾಪುಗಾಲಿನಲ್ಲಿ (ಶೇಕಡಾ 9 ರ ದರದಲ್ಲಿ) ತೀವ್ರ ಆರ್ಥಿಕ ಬೆಳವಣಿಗೆ ಸಾಧಿಸುತ್ತಿರುವ ಏಕಮಾತ್ರ ದ್ವೀಪ ಚೀನಾ. ಈ ವಸ್ತುಸ್ಥಿತಿ ಬಗ್ಗೆ ಲೇಖಕರಿಗೆ ಗೊತ್ತೇ ಇದ್ದ ಹಾಗಿಲ್ಲ!

ಅದೇ ರೀತಿ ಯಾವುದೇ ಸಹಕಾರದಲ್ಲಿ ಕೊಡುವುದು - ಕೊಳ್ಳುವುದು ಇರುತ್ತದೆ. ಹಾರ್ಡ್‌ವೇರ್-ಸಾಫ್ಟ್‌ವೇರ್ ಪೂರಕ ತಂತ್ರಜ್ಞಾನಗಳು. ಈ ಎರಡರಲ್ಲಿ ಅನುಕ್ರಮವಾಗಿ ಪ್ರಾಬಲ್ಯ ಸಾಧಿಸಿರುವ ಚೀನಾ-ಭಾರತಗಳ ಸಹಕಾರ ಇಬ್ಬರಿಗೂ, ಮೂರನೇ ದೇಶಗಳಲ್ಲಿ ಮಾಹಿತಿ-ತಂತ್ರಜ್ಞಾನ ವಹಿವಾಟಿನ ದೊಡ್ಡ ಭಾಗ ಗೆಲ್ಲಲು ಸಾಧ್ಯವಾಗಿಸುತ್ತದೆ. ಇಂತಹ ಸಹಕಾರ ಏರ್ಪಡದಿದ್ದರೆ ಅದರ ಲಾಭ ಅಭಿವೃದ್ಧ ದೇಶಗಳ ದೈತ್ಯ ಬಹುರಾಷ್ಟ್ರೀಯ ಕಂಪನಿಗಳಿಗೆ, ಚೀನಾದ ಅಗ್ಗದ ಹಾರ್ಡ್‌ವೇರ್ ಮತ್ತು ಭಾರತದ ಅಗ್ಗದ ಸಾಫ್ಟ್‌ವೇರ್ ಎರಡನ್ನೂ ಬಳಸಿ ಈ ದೈತ್ಯ ಕಂಪನಿಗಳು ವಿಶ್ವಮಾರುಕಟ್ಟೆಯನ್ನು ತಮ್ಮದಾಗಿಸಿಕೊಂಡಿವೆ. ಚೀನಾ-ಭಾರತದ ನೇರ ಸಹಕಾರ ಈ ದೈತ್ಯ ಕಂಪನಿಗಳ ಗೋಣು ಮುರಿಯಬಹುದು ಎಂಬ ಆತಂಕವೇ 'ವಿಜಯಕರ್ನಾಟಕ'ಕ್ಕೆ. ಚೀನಾ ಸಹಕಾರದ ಹಸ್ತ ಚಾಚಿರುವುದನ್ನು ಗಂಭೀರವಾಗಿ ದೇಶದ ಹಿತಾಸಕ್ತಿಗಳ ದೃಷ್ಟಿಯಿಂದ ವಿಶ್ಲೇಷಿಸಬೇಕು. ಅದನ್ನು ಸಾರಾಸಗಟಾಗಿ ನಿರಾಕರಿಸಿರುವುದು ಹುಂಬತನ.

ಶಸ್ತ್ರ ಪೂರೈಕೆ

ಇದಲ್ಲದೆ ಈ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ಚೀನಾದ ಶಸ್ತ್ರಾಸ್ತ್ರ ಪೂರೈಕೆ, 1962 ರ ಭಾರತ-ಚೀನಾದ ಯುದ್ಧದ ಬಗ್ಗೆ ಪ್ರಸ್ತಾವ ಮಾಡುತ್ತದೆ. ಇದು ಅಸಂಬದ್ಧ. 1962 ರ ಯುದ್ಧಕ್ಕೆ ಕಾರಣವಾದ ಗಡಿ-ವಿವಾದವನ್ನು ಬಗೆಹರಿಸುವಲ್ಲಿ ಚೀನಾದ ಮಿತ್ರತ್ವದ ಧೋರಣೆ ಮತ್ತು ಎರಡು ದೇಶಗಳ ಸರ್ಕಾರಗಳ -ನಾಯಕ ಮುತ್ಸದ್ದಿತನದಿಂದ ಉತ್ತಮ ಪ್ರಗತಿ ಆಗಿದೆ. ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಪೂರೈಕೆ ಮಾಡುತ್ತಿರುವುದು ಚೀನಾ ಮಾತ್ರವೇ. ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಪೂರೈಕೆ ಮಾಡುವ ಎಲ್ಲ ದೇಶಗಳ ಜತೆ ವ್ಯಾಪಾರದಲ್ಲಿ ತೊಡಗಬಾರದು ಎಂದು 'ವಿಜಯಕರ್ನಾಟಕ' ಹೇಳಬಯಸುತ್ತದೇನು? ಹಾಗಿದ್ದರೆ ನಮ್ಮ ಎಲ್ಲಾ ಅಂತರ್ರಾಷ್ಟ್ರೀಯ ವ್ಯಾಪಾರ ನಿಲ್ಲಿಸಬಿಡಬೇಕಾದ ಪರಿಸ್ಥಿತಿ ಬಂದೀತು! ಯಾಕೆಂದರೆ ನಮ್ಮ ಆಮದು -ರಫ್ತು ವ್ಯಾಪಾರದ ಸಿಂಹಪಾಲು ಅಮೆರಿಕದ ಜತೆಗೆ - ಪಾಕಿಸ್ತಾನಕ್ಕೆ ಮಿಲಿಟರಿ ಬೆಂಬಲ ನೀಡುವ, ಶಸ್ತ್ರಾಸ್ತ್ರ ಪೂರೈಸುವುದರಲ್ಲಿ ಸಿಂಹಪಾಲು ಅಮೆರಿಕಾದ್ದು. ಇನ್ನುಳಿದದ್ದರಲ್ಲಿ ಸಿಂಹಪಾಲು ಯುರೋಪಿನ ಬ್ರಿಟನ್, ಫ್ರಾನ್ಸ್‌ಗಳದ್ದು. ಇದು ಪ್ರತಾಪಸಿಂಹರಿಗೆ ಗೊತ್ತಿಲ್ಲವೇ?

ತೈವಾನ್- ಹಳಸಲು ರಾಗ

ಟಿಬೆಟ್, ಹಾಂಕಾಂಗ್ ಮುಂತಾದವುಗಳನ್ನು ನುಂಗಿ ಬಿಟ್ಟು ಈಗ 'ತೈವಾನ್' ನತ್ತ ನುಂಗಲು ನೋಡುತ್ತಿದೆ ಎಂದೆಲ್ಲಾ ಪ್ರಲಾಪಿಸಿ ಚೀನಾ ವಿಸ್ತರಣಾವಾದಿ ಎಂದು ಸಾಧಿಸಲು ಪ್ರತಾಪಸಿಂಹರು ಪ್ರಯತ್ನಿಸುತ್ತಾರೆ. ಟಿಬೆಟ್ ಏಳುನೂರು ವರ್ಷಗಳಿಂದ ಚೀನಾದ ಭಾಗವಾಗಿತ್ತು ಎಂದು ಕಳೆದ ವಾರದ ಐಕ್ಯರಂಗದಲ್ಲಿ ಸಾಕ್ಷ್ಯಾಧಾರಗಳ ಜತೆ ನೋಡಿದ್ದೀರಿ. ಹಾಂಕಾಂಗ್, ಮಕಾವು ದ್ವೀಪಗಳನ್ನು ಬ್ರಿಟಿಷರು, ಪೋರ್ಚುಗೀಸರು ಅನ್ಯಾಯಯುತವಾಗಿ 99 ವರ್ಷಗಳಿಗೆ 'ಬಾಡಿಗೆಗೆ' ಪಡೆದಿದ್ದರು. ಅದರ ಮೊದಲು ಚೀನಾದ ಅವಿಭಾಜ್ಯ ಅಂಗವಾಗಿತ್ತು. ತೈವಾನ್ ಚೀನಾದ ಕ್ರಾಂತಿ ಆಗುವವರೆಗೆ ಚೀನಾದ ಅವಿಭಾಜ್ಯ ಅಂಗವಾಗಿತ್ತು. ಚೀನಾದಿಂದ ಓಡಿ ಹೋದ ಜಿಯಾಂಗ್-ಕೈ-ಶೇಕ್ ಅಮೆರಿಕನ್ ಸಾಮ್ರಾಜ್ಯಶಾಹಿ ಸೈನ್ಯದ ಬಲದಿಂದ ಈ ಪ್ರದೇಶವನ್ನು ಕಸಿದುಕೊಂಡು ಪ್ರತ್ಯೇಕ ದೇಶವಾಗಿಸಿದ.

ದೊಡ್ಡ ದೈನಿಕಗಳಲ್ಲಿ ಅಗ್ರಲೇಖನ ಬರೆಯುವುದರಿಂದ, ಪ್ರಕಟಿಸುವುದರಿಂದ ಕಳೆದ ನೂರು ವರ್ಷಗಳ ಕನಿಷ್ಠ ಚಾರಿತ್ರಿಕ ಜ್ಞಾನ ಬಯಸುವುದು ತಪ್ಪೇ?

ಚೀನಾ ವ್ಯಾಪಾರ ನಿಜವೆಷ್ಟು?

ಚೀನಾದ ಜತೆ ವ್ಯಾಪಾರ ಹೆಚ್ಚಿಸಿಕೊಳ್ಳುವುದರಿಂದ ನಮಗೇನೂ ಲಾಭವಿಲ್ಲ ಎನ್ನುತ್ತಾರೆ ಲೇಖಕರು. ಕಳಪೆ ವಸ್ತುಗಳನ್ನು ಅಗ್ಗದ ದರದಲ್ಲಿ ನಮ್ಮ ದೇಶದೊಳಗೆ ಸುರಿಯುವ ಚೀನಾದ ಜತೆ ವ್ಯಾಪಾರದಿಂದ ನಮಗೆ ಹಾನಿ ಹೆಚ್ಚು ಎನ್ನುತ್ತಾರೆ. ಭಾರತದಲ್ಲಿ ಬಂದು ಬೀಳುತ್ತಿರುವ ಸರಕುಗಳಲ್ಲಿ ಚೀನಿಸರಕುಗಳ ಪ್ರಮಾಣ ತೀರಾ ಕಡಿಮೆ. ಅದರಲ್ಲೂ ಸಿಂಹಪಾಲು ಅಮೆರಿಕನ್, ಯುರೋಪಿಯನ್, ದ.ಕೊರಿಯಾ ಇತ್ಯಾದಿಗಳದ್ದೇ. ಇದು ವಿಶ್ವ ವಾಣಿಜ್ಯ ಸಂಘಟನೆಯ ಜತೆ ಮಾಡಿಕೊಂಡ ಒಪ್ಪಂದದ ಆಮದು ನಿರ್ಬಂಧ, (ಆಮೂಲಕ ದೇಶಿಯ ಕೈಗಾರಿಕಾ-ಕೃಷಿ ಉತ್ಪನ್ನಗಳಿಗೆ ರಕ್ಷಣೆ)ಗಳನ್ನು ಸಡಿಲಿಸುವ ನಮ್ಮ ದೇಶದ ಸರ್ಕಾರ ದೇಶ-ವಿರೋಧಿ ನೀತಿಗಳ ನೇರ ಫಲ. ಚೀನಾವನ್ನು ಇದಕ್ಕಾಗಿ ದೂರಿದರೆ ಹೇಗೆ? ಈ ಲೇಖಕರಿಗಾಗಲೀ, ವಿಜಯ ಕರ್ನಾಟಕಕ್ಕಾಗಲೀ ಈ ನೀತಿ ಬಗ್ಗೆ ಉಸಿರೆತ್ತಿದ್ದು ನಮಗೆ ಗೊತ್ತಿಲ್ಲ.

ಈ ಲೇಖನ ಮತ್ತು ಬೂರ್ಜ್ವಾ ಪತ್ರಿಕೆಗಳಲ್ಲಿ ಸುರಿಮಳೆಯ ಇಂತಹ ಹಲವು ಲೇಖನಗಳ ಹಿಂದಿರುವ ಚೀನಾ-ವಿರೋಧಿ ಧೋರಣೆಯ ಹೂರಣ ಅರ್ಥಮಾಡಿಕೊಳ್ಳಬೇಕು. ಇದು ಚೀನಾದ ಬಗ್ಗೆ ಕುರುಡು ವಿರೋಧ, ಪೂರ್ವಗ್ರಹ ಮಾತ್ರವಲ್ಲ ಇದು ಅಮೆರಿಕನ್ ಸಾಮ್ರಾಜ್ಯಶಾಹಿಯ ಒಡೆದು ಆಳುವ ನೀತಿಗೆ ಶರಣಾಗತಿ ಆದದ್ದರ ಫಲ. ಚೀನಾ-ಭಾರತ ಸಹಕಾರ ಅಮೆರಿಕನ್ ಆಳರಸರಲ್ಲಿ ನಡುಕ ತರುತ್ತದೆ. ಮುಕ್ತ ವ್ಯಾಪಾರವನ್ನು ಹಾಡಿ-ಹೊಗಳುವ ಎಲ್ಲಾ ಬೂರ್ಜ್ವಾ ಪಂಡಿತರು ಅವರ ಬಾಡಿಗೆ ಲೇಖಕರು ಚೀನಾ-ಭಾರತ ಮುಕ್ತ ವ್ಯಾಪಾರದ ಬಗ್ಗೆ ವಾಚಾಮಗೋಚರವಾಗಿ ದೂಷಿಸುವುದು ಇದಕ್ಕಾಗಿಯೇ. ರಶ್ಯಾ-ಚೀನಾ-ಭಾರತದ ಘನಿಷ್ಠ ಆರ್ಥಿಕ-ವಾಣಿಜ್ಯ ಸಂಬಂಧಗಳು ಸಾಮ್ರಾಜ್ಯಶಾಹಿಗಳ ಪ್ರಾಬಲ್ಯ ಮುರಿಯಬಲ್ಲವು.

....ಭೂಸುಧಾರಣೆ ಜಾರಿಗೆ ಆಗ್ರಹ

ಮಾಡುತ್ತಿರುವ ಭೂಹೀನರ ಪ್ರಶ್ನೆಯನ್ನು ಇತ್ಯರ್ಥಪಡಿಸಲು ಆಸಕ್ತಿವಹಿಸುತ್ತಿಲ್ಲ. ಅರಣ್ಯವನ್ನು ಅಭಿವೃದ್ಧಿ ಪಡಿಸುವ ಕಾರ್ಯದಲ್ಲಿ ಇಂತಹ ಭೂಹೀನರನ್ನು ಬಳಸಿಕೊಳ್ಳುವುದಕ್ಕೂ ಸರ್ಕಾರ ಮುಂದೆಬರುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 17ನೇ ರಾಜ್ಯ ಸಮ್ಮೇಳನವು ರಾಜ್ಯದಲ್ಲಿ ಭೂಮಿಗೆ ಸಂಬಂಧಪಟ್ಟ ಸಮಸ್ಯೆಗಳು ಇತ್ಯರ್ಥವಾಗದೆ ಉಳಿದಿರುವ ಬಗ್ಗೆ ತೀವ್ರ ಆತಂಕವನ್ನು ವ್ಯಕ್ತಪಡಿಸಿದೆ. ಮತ್ತು ಈ ಕೆಳಗಿನ ಬೇಡಿಕೆಗಳ ಆಧಾರದಲ್ಲಿ ರಾಜ್ಯದಲ್ಲಿ ತೀವ್ರ ಚಳುವಳಿಯೊಂದನ್ನು ಸಂಘಟಿಸಲು ನಿರ್ಧರಿಸಿದೆ.

ಭೂಸುಧಾರಣೆಯನ್ನು ಜಾರಿಗೆ ತರಬೇಕು. ಭೂ ಸುಧಾರಣೆಯ ಮೂಲ ಆಶಯಕ್ಕೆ ವಿರುದ್ಧವಾದ ಎಲ್ಲ ಕ್ರಮಗಳನ್ನು ಕೈಬಿಡಬೇಕು.

2. ಕೇರಳ ಮತ್ತಿತರ ರಾಜ್ಯಗಳಲ್ಲಿ ಇರುವಂತೆ ನಗರ ಭೂ ಪರಿಮಿತಿ ಕಾಯ್ದೆಯನ್ನು ಮತ್ತೆ ಜಾರಿಗೆ ತರಬೇಕು.
3. ಗೇಣಿ ಪದ್ಧತಿ, ಲೀಸ್ ಪದ್ಧತಿಗಳನ್ನು ಕಾನೂನು ಚೌಕಟ್ಟಿನಲ್ಲಿ ತಂದು ಗೇಣಿದಾರರ ಹಿತಗಳನ್ನು ರಕ್ಷಿಸಬೇಕು.
4. ಪರಂಪರಾಗತವಾಗಿ ಅರಣ್ಯಗಳನ್ನು ಅವಲಂಬಿಸಿ ಬದುಕುತ್ತಿರುವ ಆದಿವಾಸಿಗಳನ್ನು ಅವರ ಭೂಮಿಯಿಂದ ಒಕ್ಕಲೆಬ್ಬಿಸಬಾರದು.
5. [illegible] ಭೂಮಿಯನ್ನೇ ಅವಲಂಬಿಸಿರುವ ಭೂಹೀನರನ್ನು ಅರಣ್ಯ ಇಲಾಖೆಯವರು ಒಕ್ಕಲೆಬ್ಬಿಸದಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮೇಲೆ ಒತ್ತಡತಂದು ಆದೇಶ ಪಡೆಯಬೇಕು ಮತ್ತು ಪ್ರಕರಣಗಳನ್ನು ಸಕ್ರಮಗೊಳಿಸಲು ಕ್ರಮಕೈಗೊಳ್ಳಬೇಕು.
6. ಸ್ಥಗಿತಗೊಂಡಿರುವ ಅಕ್ರಮ ಸಾಗುವಳಿ ಸಕ್ರಮ ಪ್ರಕ್ರಿಯೆಯನ್ನು ಪುನರಾರಂಭಿಸಬೇಕು.
7. ಉತ್ತರ ಕನ್ನಡ ಜಿಲ್ಲೆಯ ಗುಡ್ಡಗಾಡುಗಳಲ್ಲಿ ವಾಸ ಇರುವ ಜನರಿಗೆ ಸೇರಿರುವ ಕುಂಬ್ರಿ ಜಮೀನುಗಳನ್ನು ಅವರಿಂದ ಕಿತ್ತುಕೊಳ್ಳಬಾರದು.



ಈ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ನಡೆಯಲು ಅಗತ್ಯವಾದ ಎಲ್ಲಾ ಸಿದ್ಧತೆಗಳನ್ನು ಸಮರ್ಪಕವಾಗಿ ನಡೆಸಿದ ಪಕ್ಷದ ಬಳ್ಳಾರಿ ಜಿಲ್ಲಾ ಸಮಿತಿ ಹಾಗೂ ಸ್ವಾಗತ ಸಮಿತಿಯ ಕಾರ್ಯವನ್ನು

ಹೊಸ ಸವಾಲುಗಳೆದುರು ಸಮುದಾಯ ನಾಟಕೋತ್ಸವ

ಸಮುದಾಯ ಸಾಂಸ್ಕೃತಿಕ ಸಂಘವಾಗಿ ಕರ್ನಾಟಕದಲ್ಲಿ ಒಂದು ವಿಶಿಷ್ಟಸ್ಥಾನ ಅನೇಕ ರಾಜಕೀಯ ಸ್ಥಿತ್ಯಂತರಗಳಲ್ಲಿ ವಹಿಸಿದ ಪಾತ್ರ ಐತಿಹಾಸಿಕ 'ಕೃತಿಗಾಗಿ ಕಲೆಯಲ್ಲ ಜನರಿಗಾಗಿ ಕಲೆ' ಎಂದು ಸಮುದಾಯ ಆರಂಭಿಸಿದ ಸಾಂಸ್ಕೃತಿಕ ಚಳುವಳಿಗೆ ೨೫ ವರುಷಗಳು... ಇದರಂಗವಾಗಿ ನಡೆದ ನಾಟಕೋತ್ಸವ ಎಲ್ಲರ ಗಮನಸೆಳೆಯಿತು. ಸಮಾನ ಮನಸ್ಕರನ್ನು ಸಮುದಾಯದೊಟ್ಟಿಗೆ ಗುರುತಿಸಿಕೊಂಡವರನ್ನು ಒಂದುಗೂಡಿಸಿದವು. ಜಾಗತೀಕರಣ ಉದಾರೀಕರಣದ ಹೊಸ ಸಾಂಸ್ಕೃತಿಕ ಧಾಳಿಗಳು ಕೋಮುವಾದದ ಆಕ್ರಮಣ, ಏಕ ಸಂಸ್ಕೃತಿ ಹೇರಿಕೆಯದುರು ಹೊಸ ಸವಾಲನ್ನು ಕೈಗೆತ್ತಿಕೊಂಡು ಜನತೆಯತ್ತ ಸಮುದಾಯ ನಡೆಯಬೇಕಿದೆ. ಈ ದೆಶೆಯ ಪ್ರಯತ್ನಗಳ ನಾಟಕೋತ್ಸವದ ಸಂಕ್ಷಿಪ್ತ ವರದಿ ಇಲ್ಲಿವೆ.

ಸಮುದಾಯಕ್ಕೆ ಇಪ್ಪತ್ತೈದು ಅಂದರೆ ರಾಜ್ಯದಲ್ಲಿ ಜನಪರ ಸಾಂಸ್ಕೃತಿಕ ಚಳುವಳಿಗೆ ಇಪ್ಪತ್ತೈದು ವರ್ಷ ಎಂದು ಭಾವಿಸಬಹುದು. 70ರ ದಶಕದ ಮಧ್ಯಭಾಗದ ರಾಜಕೀಯ ಸಾಮಾಜಿಕ ಸ್ಥಿತಿಗಳ ಸಂಕ್ರಮಣ ಕಾಲದಲ್ಲಿ ವಿಶಿಷ್ಟ ಸಾಂಸ್ಕೃತಿಕ ದನಿಯಾಗಿ ಮೂಡಿಬಂದ ಸಮುದಾಯ, ಅಂದಿನಿಂದ ಇಂದಿನವರೆಗೂ ಇದು ಎಚ್ಚರ ಸ್ಥಿತಿಯನ್ನು ಕಾಯ್ದುಕೊಂಡು ಸಾಂಸ್ಕೃತಿಕ ಶಕ್ತಿಯಾಗಿ ಉಳಿದು ಬಂದಿದೆ.

ಸಮುದಾಯ ನಂಬಿದ ಸಿದ್ಧಾಂತ ಇಂದಿಗೂ ಹಾಗೇ ಇದೆ. ಸಮುದಾಯ ಕಟ್ಟಿಬೆಳೆಸಿದವರಲ್ಲಿ ಆಳವಾಗಿ ಬೇರೂರಿದೆ. ಹೊಸದಾಗಿ ಬರುವವರಿಗೆ ಸಮುದಾಯ ತನ್ನ ಆಲೋಚನೆಗಳನ್ನು ಜೀವನ ಪ್ರೀತಿ ಸಾಂಸ್ಕೃತಿಕ ಮೌಲ್ಯಗಳನ್ನು ಬಿತ್ತುತ್ತಿದೆ.

ಮೇಲ್ನೋಟಕ್ಕೆ ಸಮುದಾಯ ತನ್ನ ತೀವ್ರತೆಯನ್ನು ಕಳೆದುಕೊಂಡಿದೆ ಎಂದು ಭಾಸವಾಗುತ್ತಿದೆ. ಅನೇಕರು ಸಮುದಾಯವನ್ನು ತೊರೆದಿದ್ದಾರೆ. ಮತ್ತಷ್ಟು ಮಂದಿ ಬರುತ್ತಿದ್ದಾರೆ. ಆದೂ ಸಮುದಾಯ ಹಿಂದಿನಂತಿಲ್ಲ. ಅದರ ಚಟುವಟಿಕೆಗಳು ಕ್ಷೀಣವಾಗಿದೆ ಎಂಬ ಧ್ವನಿಗಳು ಅಲ್ಲಲ್ಲಿ ಕೇಳಿ ಬರುತ್ತಿದೆ. ಕಾಲದ ಸವಾಲಿಗೆ ಅನುಗುಣ ಇಲ್ಲ. ಅಂತಹ ಧ್ವನಿಗಳಿಗೆ ಉತ್ತರ ಸಮುದಾಯ ಹಮ್ಮಿಕೊಂಡು ಯಶಸ್ವಿಯಾಗಿ ಸಂಘಟಿಸಿದ ಸಮುದಾಯ 25 ಜನಸಂಸ್ಕೃತಿ ಉತ್ಸವ 2002 ಒಂದು ಉತ್ತರವಾಗಬಹುದು.

ಸಮುದಾಯ ಹುಟ್ಟಿದ್ದು 75ರಲ್ಲೇ ಆದರೂ, ಒಂದು ರಾಜ್ಯವ್ಯಾಪಿ ಸಂಘಟನೆಯ ಸ್ವರೂಪವನ್ನು ಪಡೆದುಕೊಂಡಿದ್ದು 1977ರಲ್ಲಿ. ಹೀಗಾಗಿ ಸಮುದಾಯದ ಬೆಳ್ಳಿಹಬ್ಬ 2002ರಲ್ಲಿ ಉದ್ಘಾಟನೆಗೊಂಡಿದ್ದು ಅರ್ಥಪೂರ್ಣ. ಎಂದಿನಂತೆ ಬೆಂಗಳೂರಿನಲ್ಲಿ ಪ್ರಾರಂಭಗೊಂಡ ಈ ಚಟುವಟಿಕೆ ರಾಜ್ಯವ್ಯಾಪಿಯಾಗಿ ಇದೇ ವರ್ಷ ನಡೆಯುತ್ತದೆ.

ಸಮುದಾಯ ಜನ ಸಂಸ್ಕೃತಿ ಉತ್ಸವವನ್ನು ಆಯೋಜಿಸುವಾಗ ಕೇವಲ ಬೆಂಗಳೂರಿಗೆ ಸೀಮಿತಗೊಳಿಸಿ ಆಚರಿಸಲಿಲ್ಲ. ಈ ಹಿಂದಿನ ಸಾಂಸ್ಕೃತಿಕ ಜಾಥಾಗಳು, ಸಮಗ್ರತಾ ಉತ್ಸವ, ಜನಸಂಸ್ಕೃತಿ ಉತ್ಸವಗಳು, ಬ್ರೆಕ್ಟ್ ಶತಮಾನೋತ್ಸವ ಎಲ್ಲವೂ ಒಂದು ರಾಜ್ಯ ಮಟ್ಟದ ಕಾರ್ಯಕ್ರಮವಾಗಿ, ರಾಷ್ಟ್ರೀಯ ಉತ್ಸವವಾಗಿ ಆಚರಿಸಲ್ಪಟ್ಟಿವೆ. ಈ ಬಾರಿ ಕೂಡ ಒಂದು ರಾಜ್ಯವ್ಯಾಪಿ ಜಾಥದ ಮೂಲಕ ಸಮುದಾಯ ತನ್ನ ಬೆಳ್ಳಿಹಬ್ಬದ ಆಚರಣೆಗೆ ಚಾಲನೆಕೊಟ್ಟಿದೆ.

ಸಾಂಸ್ಕೃತಿಕ ಜಾಥಾಗಳು

ಜನವರಿ 20, 2002ರಂದು ಬಿಜಾಪುರ ಮತ್ತು ಶೃಂಗೇರಿಗಳಿಂದ 2 ಬೀದಿನಾಟಕ ತಂಡಗಳು ಜಾಥ ಹೊರಟವು. ಹಂಪೆಯಿಂದ ಜನವರಿ 25 ರಿಂದ ಮತ್ತೊಂದು ತಂಡಹೊರಟಿತು. "ಶಾಂತಿ ಸೌಹಾರ್ದ ಮತ್ತು ನೆಮ್ಮದಿಯ ನಾಳೆಗಾಗಿ ಸಮುದಾಯ ಬೆಳ್ಳಿಹಬ್ಬದ ಜಾಥ" ನಾವು ಯೋಜಿಸಿದಂತೆ 5 ಕೇಂದ್ರಗಳಿಂದ ಪ್ರಾರಂಭ ಗೊಳ್ಳಬೇಕಿತ್ತು. ಕಾರಣಾಂತರದಿಂದ ಎರಡು ಜಾಥಗಳು ನಡೆಯಲಿಲ್ಲ ಅಥವಾ ಮುಂದೂಡ ಲ್ಪಟ್ಟಿವೆ. ಜಾಥಾ ನಡೆಸಿದ ಮೂರು ತಂಡಗಳಿಗೆ ಒಳ್ಳೆಯ ಪ್ರತಿಕ್ರಿಯೆ ದೊರೆತಿದೆ. ಆದರೆ ಅಷ್ಟು ಪ್ರಚಾರ ದೊರೆತಿಲ್ಲ.


'ಕತ್ತಲ ದಾರಿ ದೂರ' ನಾಟಕದ ಒಂದು ದೃಶ್ಯ

ವಿಚಾರಸಂಕಿರಣ

ಸಮುದಾಯ ಉತ್ಸವದ 2ನೇ ಹಂತದ ಕಾರ್ಯಕ್ರಮ ಜನವರಿ 26 ಮತ್ತು 27 ರಂದು ಹಮ್ಮಿಕೊಂಡಿದ್ದ ವಿಚಾರ ಸಂಕಿರಣ. ಧಾರವಾಡ, ಹರಿಹರ, ಹರಪನಹಳ್ಳಿ ಘಟಕಗಳು ಜನವರಿ 26 ರಂದು ವಿಚಾರಸಂಕಿರಣ ನಡೆಸಿವೆ. 27 ರಂದು ಬೆಂಗಳೂರಿನಲ್ಲಿ "ಧರ್ಮದ ಮೂಲಭೂತವಾದ ಹಾಗೂ ಜಾಗತೀಕರಣ ಮತ್ತು ಸಮಕಾಲೀನ ಸಾಂಸ್ಕೃತಿಕ ಬಿಕ್ಕಟ್ಟುಗಳು" ಎಂಬ ವಿಷಯದ ಬಗ್ಗೆ ವಿಚಾರ ಸಂಕಿರಣ ನಡೆದಿದೆ. ವಿಚಾರ ಸಂಕಿರಣವನ್ನು ಉದ್ಘಾಟಿಸಿದ ಎಂ.ಪಿ. ಪ್ರಕಾಶ್. ಅವರು ಇಂದಿನ ಸಾಂಸ್ಕೃತಿಕ ಬಿಕ್ಕಟ್ಟುಗಳಿಗೆ ಅಮೇರಿಕಾ ಹೇಗೆ ನೇರವಾಗಿ ಕಾರಣವಾಗುತ್ತಿದೆ. ತನ್ನ ಪೊಳ್ಳುತನವನ್ನು ಬಂಡವಾಳಮಾಡಿಕೊಂಡು, ಮಾಧ್ಯಮಗಳ ಮೂಲಕ, ತನ್ನ ಆರ್ಥಿಕ ಸಾಮರ್ಥ್ಯವನ್ನು ಕಾಯ್ದುಕೊಳ್ಳುವ ಅಮೇರಿಕಾದ ಹುನ್ನಾರವನ್ನು ಬಯಲಿಗಿಟ್ಟರು. ಆಶಯ ಭಾಷಣಮಾಡುತ್ತಾ ಬೊಳವಾರು ಮಹಮದ್ ಕುಞ ಅವರು ಅಲ್ಪಸಂಖ್ಯಾತರು, ಬಹು

ಸಮುದಾಯ ೨೫


ಜನಸಂಸ್ಕೃತಿ ಉತ್ಸವ ೨೦೦೨

ಸಂಖ್ಯಾತರ ಸಹಾನುಭೂತಿ ಹಾಗು ಕುಹಕದ ನಡುವೆ ಉಸಿರುಗಟ್ಟಿ ಹೋಗುತ್ತಿದ್ದಾರೆ. ನೆರೆಯ ಪಾಕಿಸ್ತಾನದ ತಪ್ಪಿಗೆ ಇಲ್ಲಿನ ಮುಸ್ಲಿಂ ಬಾಂಧವರನ್ನು ಹೊಣೆಮಾಡುವುದು ಬೇಡ. ನಿಮ್ಮಂತೆ ನಾವು ಎಂದು ಹೇಳಿದರು. ಪ್ರಜ್ಞಾವಂತ ಅಲ್ಪಸಂಖ್ಯಾತ ಇಂದು ಭಾರತೀಯ ಸಮಾಜದಲ್ಲಿ ಎದುರಿಸುತ್ತಿರುವ ಸಂಕಷ್ಟಗಳನ್ನು ವಿವರಿಸಿದರು.

ಜಾಗತೀಕರಣದ ಬಗ್ಗೆ ಮಾತನಾಡುತ್ತಾ ಲಿಂಗದೇವರು ಹಳೆಮನೆ, ಇಂದು ಮೂಲಭೂತ ವಾದ ಕೂಡ ಈ ಜಾಗತೀಕರಣದ ಕೊಡುಗೆ. ಇಂದು ಪೋಟೋ ಮುಂತಾದ ಕಾನೂನುಗಳ ಮೂಲಕ ತುರ್ತುಪರಿಸ್ಥಿತಿಗಿಂತ ಭೀಕರವಾದ ದಿನಗಳು ಬರಲಿವೆ. ಇವೆಲ್ಲಕ್ಕೂ ಮೂಲಭೂತ ವಾದ ಒಂದು ನೆಪವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು. ವಿಚಾರಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಟಿ.ಎಸ್.ಲೋಹಿತಾಶ್ವ, ಸಮುದಾಯದೊಟ್ಟಿಗೆ ಬೆಳೆದ ನನ್ನಂತಹವರಿಗೆ ಬದ್ಧತೆ ಮತ್ತು ಸೈದ್ಧಾಂತಿಕ ದರ್ಶನವನ್ನು ನೀಡಿದ್ದು ಸಮುದಾಯ. ನಮ್ಮ ಬದುಕು ರೂಪಿತವಾಗುವು ದರಲ್ಲಿ ಸಮುದಾಯದ ಪಾತ್ರ ಹಿರಿದು ಎಂದರು. ಅಂದು ಕಾತ ಚಿಕ್ಕಣ್ಣ ಅವರ ದಂಡೆ ಕಾದಂಬರಿಯ 2ನೇ ಅವೃತ್ತಿ, ಎಸ್.ಜಿ. ಸಿದ್ದರಾಮಯ್ಯ ರೂಪಾಂತರಿಸಿದ 'ದಂಡೆ' ನಾಟಕ ಕೃತಿ ಬಿಡುಗಡೆಗೊಂಡವು. ಯುದ್ಧ ವಿರೋಧಿ ನಿಲುವಿನ 'ಸಾಯುವವನೇ ಚಿರಂಜೀವಿ', 'ಗದಾಯುದ್ಧ ವಿಪನ' - ಏಕವ್ಯಕ್ತಿ ಪ್ರಯೋಗಗಳು ಪ್ರದರ್ಶನಗೊಂಡವು.

ದಂಡೆ-ನಾಟಕ

ಜನವರಿ 30, ಹುತಾತ್ಮರ ದಿನಾಚರಣೆಯ ಅಂಗವಾಗಿ ಅಂದು ಬೆಳಿಗ್ಗೆ 11 ಗಂಟೆಗೆ 'ದಂಡೆ' ನಾಟಕ ಪ್ರದರ್ಶನಗೊಂಡಿತು. ಸಂಜೆ 6 ಗಂಟೆಗೆ ಜನಸಂಸ್ಕೃತಿ ಉತ್ಸವ 2002 ವಿದ್ಯುಕ್ತವಾಗಿ ಉದ್ಘಾಟನೆಗೊಂಡಿತು. ಬಿ.ಎಲ್. ಶಂಕರ್, ಮಾನ್ಯ ಸಭಾಧ್ಯಕ್ಷರು ಕರ್ನಾಟಕ ವಿಧಾನಪರಿಷತ್ ಅವರು ಉತ್ಸವ ಉದ್ಘಾಟಿಸಿ ಸಮುದಾಯದಂಥ ಪ್ರಗತಿಪರ ಚಳುವಳಿಯ ಅಗತ್ಯವನ್ನು ಒತ್ತಿ ಹೇಳಿದರು. ಭಾರತದ ಸಂದರ್ಭದಲ್ಲಿ ಸಮುದಾಯದಂಥ ಸಂಘಟನೆ ಮತ್ತಾವುದು ಇಲ್ಲ ಎಂದರು. ಎಡ, ಪ್ರಜಾಪ್ರಭುತ್ವಶಕ್ತಿಗಳು ಒಂದಾಗಿ ಸಾಂಸ್ಕೃತಿಕವಾಗಿ ಭಾರತ ವನ್ನು ಒಗ್ಗೂಡಿಸುವ ಕಾರ್ಯ ನಿರಂತರವಾಗಿ ನಡೆಯಬೇಕೆಂದರು.

ಆಕರ್ಶಕ ಕಲಾತ್ಮಕ ಕ್ಯಾಲೆಂಡರ್ ಬಿಡುಗಡೆಮಾಡಿದ ಮಾಹಿತಿ ತಂತ್ರಜ್ಞಾನ ಸಚಿವರಾದ ಪ್ರೊ। ಬಿ.ಕೆ. ಚಂದ್ರಶೇಖರ್ ಅವರು ಮೂಲಭೂತವಾದಿಗಳು ಸಂಘಟಿತರಾಗುತ್ತಿರುವ ಬಗ್ಗೆ, ಅವರ ಬಗ್ಗೆ ಪತ್ರಿಕೆಗಳಲ್ಲಿ ಮಾಧ್ಯಮಗಳಲ್ಲಿ ಬರುತ್ತಿರುವ ಪ್ರಚಾರದ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಪ್ರಜ್ಞಾವಂತರು ಇಂದು ಅಲ್ಪಸಂಖ್ಯಾತರಾಗುತ್ತಾರೆ. ಸಮುದಾಯ ಎಲ್ಲಾ ಪ್ರಜ್ಞಾವಂತರ ದನಿಯಾಗಬೇಕೆಂದರು.

'ಒಂಟಿ ನಡೆವ ಧೈರ್ಯಬೇಕು' ಪ್ರಸನ್ನ

6 ದಿನಗಳ ಈ ಬೃಹತ್ ಜನಸಂಸ್ಕೃತಿ ಉತ್ಸವದ ಸಮಾರೋಪದಲ್ಲಿ ಭಾಗವಹಿಸಿದ ಪ್ರಸನ್ನ ಸಮುದಾಯ ತನ್ನ 'ಎದುರುಹಾಕಿ ಕೊಳ್ಳುವ' ಸ್ವಾಭಾವವನ್ನು ಕಳೆದುಕೊಳ್ಳ ಬಾರದು. ಏಕಾಂಗಿಯಾಗಿ, ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಳ್ಳದೆ ನಡೆಯುವ ಧೈರ್ಯ ಬೇಕು. ಸಾಂಸ್ಕೃತಿಕವಾಗಿ ಬದುಕಬೇಕೆಂದರು.

ತನ್ನ ನಿರಂತರ ಜನಪರ ಚಳುವಳಿಯಿಂದ ಸಮುದಾಯ ಇಂದಿಗೂ ಉಳಿದು ಬಂದಿದೆ ಎಂದು ಖ್ಯಾತ ನಿರ್ದೇಶಕ ಎಂ.ಎಸ್. ಸತ್ಯು ಪ್ರಶಂಸಿಸಿದರು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಸೋಮಶೇಖರ ಅವರು ಸಮುದಾಯದ ಉತ್ಸವದ ಯಶಸ್ಸು, ದಿನನಿತ್ಯ ಕಲಾಕ್ಷೇತ್ರದಲ್ಲಿ ಒಗ್ಗೂಡುತ್ತಿದ್ದ ಜನತೆ, ಸಮುದಾಯ ನಿರಂತರವಾಗಲಿ ಎಂದರು.

ದಿನವೂ ನಾಟಕೋತ್ಸವ

ಜನವರಿ 30 ರಿಂದ ಫೆ. 4 ರವರೆಗೆ ಪ್ರತಿದಿನ ಕಾಲೇಜು ವಿದ್ಯಾರ್ಥಿಗಳ ನಾಟಕೋತ್ಸವ ಬೆಳಿಗ್ಗೆ ಸಮುದಾಯದಲ್ಲಿ ಹಾಗೂ ಸಂಜೆ 5.30ರಿಂದ ಬೀದಿನಾಟಕೋತ್ಸವ, ನಂತರ ಕಲಾಕ್ಷೇತ್ರದ ಒಳಗೆ ರಂಗನಾಟಕಗಳು ನಡೆದವು. ಸಮುದಾಯದ 'ದಂಡೆ' ನಾಟಕದ ಜೊತೆಗೆ, ಹಿಂದಿನ ಪ್ರಖ್ಯಾತ 'ಕತ್ತಲೆದಾರಿದೂರ' ಮತ್ತೊಮ್ಮೆ ಪ್ರದರ್ಶನಗೊಂಡು ಅಪಾರ ಜನಮೆಚ್ಚುಗೆ ಗಳಿಸಿತು. ಮೈಸೂರಿನ 'ಹೂಗಳು ಮಾಗಿಯ' ಗುಲ್ಬರ್ಗಾ ಸಮುದಾಯದ 'ಸ್ಮಶಾನ ಕುರುಕ್ಷೇತ್ರ', ಲಕ್ಷ್ಮಿ ಚಂದ್ರಶೇಖರ್ ಅಭಿನಯದ 'ಸಿಂಗಾರೇವ್ವ ಮತ್ತು ಅರಮನೆ' ಹಾಗೂ ಧ್ಯಾನಕನ್ನಡ ರೆವರ್ಜರಿ ಅವರ ಮಲ್ಲಿನಾಥ ಧ್ಯಾನ' ಜನಮೆಚ್ಚುಗೆಗಳಿಸಿದವು.

ಬೀದಿ ನಾಟಕಗಳು

ಬೆಂಗಳೂರು ಸಮುದಾಯದ 'ನ್ಯಾಯಕ್ಕಾಗಿ ಕಾದಿರುವ ಭಾಂಬ್ರಿ 'ಕುಂಡಲೀ ಮಹಾತ್ಮೆ' ಕೇಸರಿ ಬಿಳಿ ಹಸಿರು' ಬೀದಿನಾಟಕಗಳು ಧಾರವಾಡ ಸಮುದಾಯ, ಹರಿಹರ ಹರಪನಹಳ್ಳಿ ಸಮುದಾಯದ ಬೀದಿನಾಟಕಗಳು ಉತ್ಸವದ ಆಕರ್ಷಣೆಯಾಗಿದ್ದವು. ಉತ್ಸವದ ಸಂದರ್ಭ ಕ್ಕೊಂದು ಜಾಗತೀಕರಣ ಮೂಲಭೂತವಾದದ ಬಗ್ಗೆ 2 ಕಿರುಹೊತ್ತಿಗೆಗಳು, 6 ಶುಭಾಶಯ ಪತ್ರಗಳು, ಒಂದು ಆಕರ್ಷಕ ಕ್ಯಾಲೆಂಡರ್, ಅಲ್ಲದೆ ಸ್ಮರಣ ಸಂಚಿಕೆಗಳನ್ನು ಸಮುದಾಯ ಹೊರತಂದಿದೆ.

ಬೆಂಗಳೂರಿನಿಂದ ಪ್ರಾರಂಭಗೊಂಡರು ಜನಸಂಸ್ಕೃತಿ ಉತ್ಸವ ವರ್ಷವಿಡೀ ವಿವಿಧ ಘಟಕಗಳಲ್ಲಿ, ವಿವಿಧ ಸ್ತರಗಳಲ್ಲಿ ನಡೆಯುತ್ತದೆ. ಮತ್ತೆ ಸಮುದಾಯದ ಎಲ್ಲಾ ಚಟುವಟಿಕೆಗಳಿಗೆ ಈ ಉತ್ಸವ ಚಾಲನೆ ನೀಡಿದೆ. ಇದೇ ಸಂದರ್ಭದಲ್ಲಿ ಸಮುದಾಯ ತನ್ನದೇ ಆದ ವೆಬ್‌ಸೈಟ್ ಸಿದ್ಧಪಡಿಸಿ www.samndesya.org ನಲ್ಲಿ ಸಮುದಾಯದ ಇತಿಹಾಸ, ಬೆಳವಣಿಗೆ, ಕಾರ್ಯಕರ್ತರನ್ನು ಸಂಪರ್ಕಿಸಬಹುದು.

- ಶಶಿ


'ದಂಡೆ' ನಾಟಕದಲ್ಲಿ

PRB DECR 319-79/79 AIKYARANGA WEEKLY
Reg. No. 17015/64 KRNM/BGS-405 MAG(2)